TEXT LITE
WITHIN THE
BOOK ONLY

# brown book

THE BOOK WAS
DRENCHED

UNIVERSAL LIBRARY
OU_200345
UNIVERSAL LIBRARY

ಅರವಿಂದ ಗ್ರಂಥಮಾಲೆಯ ೨ನೆಯ ವರ್ಷದ ಕಮಲ ೪

# ಸನ್ಯಾಸಿ

ಕಾಪಸೆ ರೇವಪ್ಪ

ಸಪ್ಟಂಬರ ] ಹತ್ತಾಣೆ [ ೧೯೩೭

ಪ್ರಕಾಶಕರು :—
ಬಿ. ಡಿ. ಅಕ್ಕಿ ಬಿ. ಎ. ಎಲ್ ಎಲ್. ಬಿ.
"ಅರವಿಂದ ಗ್ರಂಥಮಾಲಾ"
ಹಲಸಂಗಿ ( ಜಿಲ್ಹಾ-ವಿಜಾಪುರ )

Checked 1965
CHECKED 1958

ಸಂಪಾದಕರು :–
"ಮಧುರಚೆನ್ನ"

ಮುದ್ರಕರು :—
ಶೇಷಗಿರಿರಾವ ಗೋವಿಂದರಾವ ಕುಲಕರ್ಣಿ
ಸಾಧನ ಮುದ್ರಣಾಲಯ
ಧಾರವಾಡ

# ನಮ್ಮ ಮಾತು

ಈ ಕಥೆಯ ಬೀಜವು ಬೆಂಗಾಲಿಯ ಒಂದು ತೋಟದ್ದು. ಅದರ ಬೆಳಿಗೆಯು ಕನ್ನಡದ ಹೊಲದಲ್ಲಿಯೂ ಸಫಲವಾಗಿದ್ದರೆ ಅದು ಬಿತ್ತಿ ಬೆಳೆದ ಕೃಷಿಕನ ಕಲಾಚಾತುರ್ಯ. ಶ್ರೀ. ಮಾಸ್ತಿ ಅವರ 'ಸುಬ್ಬಣ್ಣ'ನ ಸನ್ಯಾಸದ ತೇಜಸ್ಸು ಕನ್ನಡಿಗರ ಕಣ್ಣು ಕುಕ್ಕಿಸುತ್ತಿರಲು ಈ 'ಸನ್ಯಾಸಿ'ಯು ತೆಕ್ಕೆಗೇಕೆ ಬೀಳಬೇಕು? ದೊಡ್ಡವರು ಪಡೆದ ಮುದ್ದು ಮಗುವನ್ನು ಕಂಡವರು, ಅಂಥ 'ಚೆಲ್ವಶಿಶು'ವನ್ನು ಹಡೆಯಲು ಹವಣಿಸುವುದು ತಪ್ಪಲ್ಲ. 'ಸುಬ್ಬಣ್ಣ'ನ ಕಥಾಲಹರಿಯು ಗಂಗಾನದಿಯಲ್ಲಿ ಮಿಂದು 'ಮಾಸಿದ ತಲೆ ಮುಡಿ'ಯಾಗಲು, ಮೈದಾಳಿದ ಈ ಸನ್ಯಾಸಿಯು ಕೃಷ್ಣೆಯಂತೆ ಕನ್ನಡಿಗರ ತೃಷ್ಣೆಯನ್ನು ತಣಿಸದಿರಲಾರದೆಂದು ನಂಬಿರುವೆವು.

'ನಂದನವನ'ದಲ್ಲಿ 'ಭವ್ಯಸ್ವಪ್ನ'ದ ರಹಸ್ಯವನ್ನೂ, 'ಬಣ್ಣಬಣ್ಣದ ಬಾಳಿ'ನ ಮಳೆಬಿಲ್ಲನ್ನೂ ಚಿತ್ರಿಸಿದ ಸೆಳೆಮಿಂಚಿನ ಭಾಷೆಯು ಕಾಪಸೆ ರೇವಪ್ಪನವರೇ ಇದನ್ನು ಬರೆದವರೆಂದರೆ ತೀರಾ ನಂಬಲಿಕ್ಕಾಗದಂತೆ ಭಾಷೆಯು ಸರಳತೆಯು ಆಪ್ತಸ್ನೇಹಿತನಂತೆ ಓದುಗರನ್ನು ಕೈಹಿಡಿದು ಕರೆದೊಯ್ಯುನಿಂತಿದೆ. ಕಥೆಯ ಜೀವಾಳವು ಜೀವಂತವಾದುದು. ಅದಕ್ಕೆ ಸರಲ ನುಡಿಯ ಮಿಲನವಾದರೆ ಅದು, 'ಸುಲಿದ ಬಾಳೆಯ ಹಣ್ಣಿನಂದದಿ' ಸವಿಯಲಿಕ್ಕೆ ಸುಲಭವೂ ಶಕ್ತಿಯುತವೂ ಆಗದಿರದು.

ನಾಡಿನಲ್ಲಿ ಮಳೆ-ಬೆಳೆಗಳಿಗೆ ಪಂಗುನಾಮ ಹತ್ತಿ ಕಾಯಕದವರೆಲ್ಲ ಕಾಯಕದಯ್ಯಗಳಾಗುವ ಹೊತ್ತು ಬಂದಿರುವಾಗ ಸನ್ಯಾಸಿಯ ಸುಖ ದುಃಖಗಳನ್ನು ಕೇಳುವವರಾರು?—ಹಾಗೂ ಸನ್ಯಾಸಿಯ ಕತೆ ಕೇಳುವವರಾರು? ಮೇಘರಾಜನ ಬರುವಿಕೆಯನ್ನು ಹಾರಯಿಸುತ್ತಿದ್ದ ವಾಚಕ ವೃಂದವು 'ಸನ್ಯಾಸಿ'ಯ ಬರವನ್ನು ಸಹನಮಾಡಿಕೊಂಡೀತೇ? ಅಂತೇ ನಾವು ಮೇಘರಾಜನು ಸುಳಿದ ಮೇಲೆಯೇ ಈ 'ಸನ್ಯಾಸಿ'ಯನ್ನು ಬಯಲಿಗೆಳೆಯಲು ಅಣಿಯಾಗಿದ್ದೇವೆ.

—ಸಂಪಾದಕ

# ಸನ್ಯಾಸಿ

ಮುಂದಿನ ಪುಸ್ತಕ

# ಪೂರ್ಣಯೋಗ

“ ಮಧುರಚೆನ್ನ ”

# ಸನ್ಯಾಸಿ

## ೧

ಅಪ್ಪಾಸಾಹೇಬರು ನ್ಯಾಯಾಧೀಶರು. ಪಾಮರರಿಂದ ಪಂಡಿತರ ವರೆಗೂ ಅವರನ್ನು ಪ್ರೀತಿಸದವರಿಲ್ಲ. ಅವರು ತಮ್ಮ ನೌಕರಿಯನ್ನು ಒಳ್ಳೇ ದಕ್ಷತೆಯಿಂದ ಮಾಡುತ್ತಿದ್ದದರಿಂದ ಸರಕಾರದ ಮೆಚ್ಚುಗೆಯೂ ಹೆಚ್ಚಾಗಿತ್ತು. ಅವರ ಅಧಿಕಾರದ ಸ್ಥಾನವು ಮೇಲಿನ ಮೆಟ್ಟಲಿಗೆ ಏರುವ ಸ್ಥಿತಿಯಲ್ಲಿದೆಯೆಂದು ಅವರ ಕಾರ್ಯಗಳ ಫಲಿತಾಂಶಗಳು ಸೂಚಿಸುತ್ತಿದ್ದವು.

ಅಪ್ಪಾಸಾಹೇಬರ ಕುಟುಂಬ ಪಾರ್ವತೆಮ್ಮನವರು ಬಹಳ ದೊಡ್ಡ ಮನಸ್ಸಿನವರು. ಗುಣಕ್ಕೆ ಅನುರೂಪವಾದ ರೂಪವೆಂದು ಬೇರೆ ಬಣ್ಣಿಸ ಬೇಕಾಗಿಲ್ಲ. ಅಲ್ಲದೆ ಇವರಿಗೆ ಇವರಂತೆಯೆ ಚೆಲುವಾದ ಮಗುವೊಂದು. ಸಿರಿ-ಸಂಪತ್ತುಗಳಿಗೆ ಯಾವ ಕೊರತೆಯೂ ಇಲ್ಲ. ಪ್ರಶಸ್ತವಾದ ಮನೆ. ಸೇವೆಮಾಡಲು ಬೇಕಾದಷ್ಟು ದಾಸದಾಸಿಯರು.

ಅಪ್ಪಾಸಾಹೇಬರ ಆಕೃತಿಯು ಅವರ ಪದವಿಗೆ ತಕ್ಕಂಥಾದ್ದು. ಅವರ ಅಂಬಲು ಮೈಗೆ ಅಗಲವಾದ ದುಂಡಗಿನ ಮುಖವು ಕಳಸದಂತೆ ಒಪ್ಪುವುದು. ಅವರ ಬಿಚ್ಚದ ತುಟಿಗಳು ಬಿಚ್ಚಿದರೆ ಯಾವನೊಬ್ಬನ ಕಲ್ಯಾಣವಾಯಿತೆಂದೇ ತಿಳಿಯಬೇಕು. ಇವರ ಅಂಥ ಮೈಯೂ ಇಂಥ ಮಾತೂ ಕಂಡವರ ಕಣ್ಣುಗಳನ್ನೂ ಉಂಡವರ ಚಿತ್ತವನ್ನೂ ಬೆರಗುಗೊಳಿಸುವವು.

ಇವರು ಸಕ್ಕರೆ ಹುಣ್ಣಿಮೆ. ಮಾತಾಡಿದರೆ ಹಬ್ಬ. ನಕ್ಕು ನಗಿಸುವ ವಿನೋದವಾಗಲಿ, ನಕ್ಕು ನೋಯಿಸುವ ಅಪಹಾಸ್ಯವಾಗಲಿ, ಇವರ ರಾಜ್ಯದಲ್ಲಿಲ್ಲ. ಇವರದು ಒಬ್ಬರನ್ನು ಹಿಗ್ಗಿಸುವ ಪ್ರಸನ್ನ ಸ್ಮೇರ ಹಾಸ್ಯ. ಇವರ ಮಾತುಗಳಿಂದ ಸಂತಸಹೊಂದದವರಿಲ್ಲ.

ತಮ್ಮ ಪತ್ನಿಯವರ ಮೇಲೆ ಅಪ್ಪಾಸಾಹೇಬರದು ಎಣೆಯಿಲ್ಲದ ಅಕ್ಕರತೆ. ಅವರದೂ ಇವರ ಮೇಲೆ ಅಷ್ಟೇ. ಒಂದು ಜೀವ ಎರಡು ದೇಹ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂಥ ಆ ದಂಪತಿಗಳು ಇಬ್ಬರೂ ಕೂಡಿ ಕುಳಿತಾಗ ಹೊಸ ಹೊಸ ಸುಖದ ಮಹಲನ್ನು ಕಟ್ಟುವರು. ಕಟ್ಟಿದ ಆ ಮನಸ್ಸಿನ ಮಹಲನ್ನು ಇಬ್ಬರೂ ನಾಲ್ಕು ದಿಕ್ಕಿನಿಂದ ಇಂಜಿನಿಯರರಂತೆ ಪರೀಕ್ಷಿಸಿ 'ಛೇ, ಇದು ಇನ್ನೂ ಸರಿಯಾಗಿಲ್ಲ' ಎಂದು ಅದನ್ನು ಕೆಡಿಸಿ ಮತ್ತೊಂದು ಮಹಲನ್ನು ಕಟ್ಟುವರು. ಒಮ್ಮೆ 'ನನ್ನ ಅಧಿಕಾರವು ಇನ್ನೂ ಒಂದು ಮೆಟ್ಟಲಿಗೇರಿದರೆ ಪುಣ್ಯಕ್ಷೇತ್ರದಲ್ಲಿ ಅನ್ನಛತ್ರವೊಂದನ್ನು ಕಟ್ಟಿಸಿ ಅದರ ಹೆಬ್ಬಾಗಿಲ ಮೇಲೆ ನಮ್ಮಿಬ್ಬರ ಹೆಸರನ್ನು ಕೆತ್ತಿಸುವಾ' ಎಂದು ಪತಿಯು ಹೇಳಿದರೆ ಅವರ ಹೆಂಡತಿ ತಾವೂ ಒಂದು ಹೇಳುವರು.—'ನಮ್ಮ ಮಗು ದೊಡ್ಡವನಾಗುವ

ದೊಂದೇ ತಪ, ಸರದಾರರ ಮನೆಯ ಕನ್ಯೆಯನ್ನು ತಂದು ಈತನಿಗೆ ಮದುವೆ ಮಾಡೋಣ.' ಪುನಃ ಅಪ್ಪಾಜಿಯವರು ಹೆಂಡತಿಯ ಕಡೆಗೆ ದಿಟ್ಟಿಸಿ ನೋಡಿ 'ನೀನು ಹೆಣ್ಣೊಂದನ್ನು ಹೆತ್ತರೆ ಸಂಸ್ಥಾನಿಕರ ಮನೆಗೆ ಕೊಡೋಣ' ಎನ್ನುವರು. ಹೀಗೆ ಆ ದಂಪತಿಗಳು ಕಿನ್ನರಮಿಥುನಗಳಂತೆ ಸುಖದ ಶಿಖರದಲ್ಲಿ ವಿಹರಿಸುವರು.

ಒಂದು ದಿನ ಮುಂಜಾನೆ ದಿನದಂತೆ ಸ್ನಾನ, ಪೂಜೆಗಳನ್ನು ಮುಗಿಸಿ ಅಪ್ಪಾಸಾಹೇಬರು ಫಲಾಹಾರಕ್ಕೆ ಕುಳಿತಿದ್ದರು. ಅವರ ಕುಟುಂಬ ಅವರ ಇದುರಿಗೆ ಕುಳಿತು ಸಾಮುಗ್ರಿಗಳನ್ನೆಲ್ಲ ಸರಿಪಡಿಸುತ್ತ ನಗೆಯ ಮೊಗ್ಗೆಗಳನ್ನು ಎರಚುತ್ತಿದ್ದರು. ನಿನ್ನೆ ರಾತ್ರಿಯ ಊಟ ಅಕ್ಕರತೆಯ ಭರದಲ್ಲಿ ಅವರ ಹೊಟ್ಟೆಗೆ ಒಂದಿಷ್ಟು ಭಾರವಾಗಿದ್ದಿತು. ಆದ್ದರಿಂದ ಈಗ ಫಲಾಹಾರವೆಂದರೆ ಕೇವಲ ಫಲಾಹಾರವಷ್ಟೇ ಸರಿ. ಫರಾಳದ ಆಡಂಬರವೇನೂ ಇರಲಿಲ್ಲ. ಒಂದೇ ಒಂದು ಒಳ್ಳೇ ಮಾವಿನ ಹಣ್ಣನ್ನು ಮಾತ್ರ ಸ್ವಲ್ಪ ತಿಂದು ತೀರಿಸಬೇಕೆಂದು ಅಪ್ಪಾಜಿಯವರು ಮನಸ್ಸು ಮಾಡಿದ್ದಾರೆ. ಹೀಗೆ ಹಣ್ಣಿನ ರಸವನ್ನು ಹೀರುತ್ತ ಜೊತೆಗೆ ಹೆಂಡತಿಯ ಸವಿಮಾತಿನ ಪ್ರೇಮರಸವನ್ನೂ ಹೀರುತ್ತಲಿರುವ ಭರದಲ್ಲಿ ಹೇಗೋ ಗೊರಟಕ್ಕೆ ಹಲ್ಲು ತಾಗಿ ಒಳಿತಾಗಿ ವೇದನೆಯಾಯಿತು. ಕೂಡಲೆ ಚಿಕ್ಕಂದಿನಲ್ಲಿ ಮಲ್ಲಶಾಲೆಯೊಳಗೆ ಜರಬು ತಾಗಿದ ಒಂದು ಹಲ್ಲೂ ಕೂಡ ಕಿತ್ತಿ ಬಂದುಬಿಟ್ಟಿತು. ಹೀಗೆ ಒಮ್ಮೆಲೆ ಬಿದ್ದ ಹಲ್ಲನ್ನು ನೋಡಿದೊಡನೆಯೆ ಅಪ್ಪಾಸಾಹೇಬರ ಚಿತ್ತದಲ್ಲಿ ಎಂದೂ ಇಲ್ಲದ ನಿರ್ವೇಗವೊಂದು ತಕ್ಷಣವೆ ಉದಿಸಿತು. 'ಈ ಪ್ರಕಾರವೇ ನಮ್ಮ ದೇಹಾವಸಾನವೂ ಒಮ್ಮೆ ನಮ್ಮ ಅವಿದಿತ ಕ್ಷಣದಲ್ಲಿಯೋ ಆಗುವದಲ್ಲವೆ! ಪ್ರತಿ ಮುಹೂರ್ತದಲ್ಲಿ ಮೃತ್ಯು ನಮ್ಮನ್ನು ಕಾದುಕೊಂಡೇ ಕುಳಿತಿರುತ್ತದಲ್ಲವೆ! ಆದರೂ ಅದರ

ಕಡೆಗೆ ನಮ್ಮ ಲಕ್ಷ್ಯವು ಮರೆತಾದರೂ ಕೂಡ ಹೋಗುವುದಿಲ್ಲವಲ್ಲ! ನಮ್ಮ ಜನ್ಮವು ಎಷ್ಟು ಅಶಾಶ್ವತವಾಗಿದೆ!' ಎಂದು ಅವರು ಒಳಗೊಳಗೇ ಭಾವಿಸುತ್ತ ಹಣ್ಣು ಮೆಲಿಯುವುದನ್ನು ಅಷ್ಟಕ್ಕೇ ಬಿಟ್ಟುಕೊಟ್ಟು ಎದ್ದುಬಿಟ್ಟರು. ಆವರ ಹೆಂಡತಿಯೂ ದಿಗಿಲುಗೊಂಡು ಏನೇನೋ ಅಂದಂದು ಸಿಟ್ಟುಸುರು ಬಿಟ್ಟು 'ಹೀಗೇಕೆ?' ಎಂದು ಕೇಳಿದರು. ಅದಕ್ಕೆ ಅವರೂ 'ಅಂಥಾದ್ದೇನೂ ಇಲ್ಲ' ಎಂದು ಔಪಚಾರಿಕವಾಗಿ ಉತ್ತರ ಕೊಟ್ಟರು.

ಇನ್ನೂ ಕಚೇರಿಯ ವೇಳೆ ಆಗಿರದಿದ್ದರೂ ತಮ್ಮ ಕೋಟು, ಪಾಟಲೋನುಗಳನ್ನು ಹಾಕಿಕೊಂಡು ಹೊರಟೇಬಿಟ್ಟರು. ಅಂದು ಮುಂಜಾನೆಯೇ ತೆರೆದಿದ್ದ ಕನ್ಯಾಶಾಲೆಯೊಂದು ದಾರಿಯಲ್ಲೇ ಸಿಕ್ಕಿದ್ದರಿಂದ ಕಚೇರಿಯ ವೇಳೆ ಬರುವವರೆಗೆಂದು ಅದನ್ನೇ ಪ್ರವೇಶಿಸಿದರು. ಆ ಶಾಲೆಯನ್ನು ಸಂದರ್ಶಿಸುವದಕ್ಕೆ ಆಗಾಗ ಹೋಗುವ ಪರಿಪಾಠವೂ ಅವರಿಗೆ ಇತ್ತು. ಆದರೆ ಸೂಚನೆ ಕೊಡದೆ ಅಕಸ್ಮಾತ್ತಾಗಿ ಇವರು ಶಾಲೆಗೆ ಬಂದದ್ದರಿಂದ ಶಿಕ್ಷಿಕೆಯರೆಲ್ಲ ದಿಗಿಲುಗೊಂಡು ತತ್ತರಿಸುತ್ತ ಸ್ವಾಗತಿಸಿದರು. ಎಲ್ಲ ಕ್ಲಾಸುಗಳನ್ನೂ ತೋರಿಸಿದರು. ಎಲ್ಲ ಕಡೆಗೂ ತಿರುಗಾಡಿ ಮೇಲಿನ ಇಯತ್ತೆಯ ಹುಡುಗಿಯರ ಕಡೆಗೆ ಹೋದರು. ಅಲ್ಲಿ ಹುಡುಗಿಯರಿಗೆ ತಮ್ಮ ತಲೆಯೊಳಗಿನದೇ ಒಂದು ಪ್ರಶ್ನೆಯನ್ನು ಕೇಳಿಬಿಟ್ಟರು: '**ನೀವು ಏತಕ್ಕೆ ಹುಟ್ಟಿರುವಿರಿ?**' ಆಗ ಆ ಹಾಲು ಹೃದಯದ ಹಸುಳೆಗಳಲ್ಲಿ ಅಂದೇ ಒಬ್ಬಳ ಚಿಕ್ಕ ತಮ್ಮ ಸತ್ತದ್ದರಿಂದ ಅದೇ ಚರ್ಚೆಯಲ್ಲಿದ್ದವರು—'**ಸಾಯುವದಕ್ಕಾಗಿ ಹುಟ್ಟಿದ್ದೇವೆ**' ಎಂದು ಉತ್ತರವನಿತ್ತರು. ಇದನ್ನು ಕೇಳಿದ ನ್ಯಾಯಾಧೀಶರು ಚಮಕಿತರಾದರು. ಕೂಡಲೆ ಅವರ ಜೋಲುಬಿದ್ದ ಕಣ್ಣುಗಳನ್ನು ನೋಡಿ ಆ

ಶಿಕ್ಷಿಕೆಯರು ತಮ್ಮತಮ್ಮೊಳಗೆ 'ಮಕ್ಕಳ ಈ ವಿಲಕ್ಷಣ ಉತ್ತರದಿಂದ ಏನು ಅನಿಸಿತೋ' ಎಂದು ತಮ್ಮತಮ್ಮೊಳಗೆ ಆಲೋಚಿಸತೊಡಗಿದರು. ಎಲ್ಲ ಮಕ್ಕಳು ಏಕಕಾಲಕ್ಕೆ '**ಸಾಯುವದಕ್ಕಾಗಿ**' ಎಂದು ಹೇಳಿದ ಮಾತನ್ನು ಜಂತಿ, ತೊಲೆ, ಕಲ್ಲು, ಮಣ್ಣು ಇವೆಲ್ಲವುಗಳೂ ಕೂಡಿ ಆ ಹುಡುಗಿಯರ ಸಮಸ್ವರದಲ್ಲಿ ಪುನಃ ಪುನಃ ಉಚ್ಚರಿಸುತ್ತಿರುವಂತೆ ಅಪ್ಪಾಸಾಹೇಬರಿಗೆ ಅನಿಸತೊಡಗಿತು. ಮಾತನಾಡದೆ ಮೌನವಾಗಿ ಹಾಗೇ ಕುಳಿತಲ್ಲಿ ಕುಳಿತೇ ಬಿಟ್ಟರು. ಬಹಳ ಹೊತ್ತು ಇವರು ಮೌನ ತಾಳಿದ್ದುದನ್ನು ನೋಡಿ ಆ ಶಿಕ್ಷಿಕೆಯರು ತಮ್ಮ ಹುಡುಗಿಯರಿಗೆ ಗಂಭೀರವಾಗಿ 'ಏನರೇ, ಬಾಳುವೆ ಮಾಡುವದಕ್ಕಾಗಿ ಅಲ್ಲವೇನರೇ ಹುಟ್ಟಿದ್ದು?' ಎಂದರು. ಆದರೆ ಅದಾವದೂ ಅಪ್ಪಾಜಿಯವರಿಗೆ ಕೇಳಿಸದು. ಇವರಿಗೆ ನಾಲ್ಕೂ ದಿಕ್ಕುಗಳಿಂದ ಕೇಳಿಸುತ್ತಿದ್ದುದು ಒಂದೇ ಒಂದು ಮಾತು, ಅದು—'ಸಾಯುವದಕ್ಕಾಗಿ ನಾವು ಹುಟ್ಟಿದ್ದೇವೆ' ಎಂಬುದೇ.

ಅಪ್ಪಾಸಾಹೇಬರು ಹಿಂದೆ ಎಷ್ಟೋಸಾರೆ ಶಾಲೆಯ ಸಂದರ್ಶನಾರ್ಥವಾಗಿ ಬಂದಾಗ ಶಿಕ್ಷಕಿಯರು ಮಾಡಿದ ಎಷ್ಟೋ ಕುಶಲ ಕೆಲಸಗಳನ್ನು ಇವರು ಮುಕ್ತಕಂಠದಿಂದ ಹೊಗಳುತ್ತಿದ್ದರು. ಅಲ್ಲದೆ ಜಾಣೆಯರಾದ ಹುಡುಗಿಯರಿಗೆಲ್ಲ ಒಳ್ಳೊಳ್ಳೇ ಇನಾಮುಗಳನ್ನು ಕೊಡುತ್ತಿದ್ದರು. ಆದರೆ ಈ ಹೊತ್ತು ಅದೇನೂ ಕೇಳಬಾರದು. ಇಷ್ಟೇ ಅಲ್ಲ, ಒಂದು ಮಾತನ್ನೂ ಕೂಡ ಖರ್ಚುಮಾಡದೆ ಮೌನವಾಗಿ ಶಾಲೆಯನ್ನು ಬಿಟ್ಟು ಹೊರಗೆ ಹೋರಟರು. ಇದನ್ನೆಲ್ಲ ನೋಡುತ್ತಿದ್ದ ಆ ಮಾಸ್ತರತಿಯರಿಗೆ ವಿಲಕ್ಷಣವೆಂದು ಅನಿಸದೆ ಬಿಡಲಿಲ್ಲ.

ಶಾಲೆಯನ್ನು ಬಿಟ್ಟವರೆ ಹೊರಗೆ ಬಂದು ದಾರಿಯನ್ನು

ಹಿಡಿದಿದ್ದಾರೆ.ಆದರೆ ಅವರ ತಲೆಯಲ್ಲಿ ಎಷ್ಟು ವಿಚಾರಗಳ ತಾಕಲಾಟಗಳೋ ಹೇಳಲಿಕ್ಕೆ ಬಾರದು. ಕೆಳಮೋರೆ ಮಾಡಿದ್ದಾರೆ. ಹುಬ್ಬನ್ನು ಏರಿಸುತ್ತ ಇಳಿಸುತ್ತ ಮುಂದೆ ಮುಂದೆ ಹೆಜ್ಜೆಗಳನ್ನು ಚೆಲ್ಲುತ್ತಿದ್ದಾರೆ. ರಸ್ತೆಯ ಜನರು ಆದರದಿಂದ ಇವರಿಗೆ ಹೋಗಲು ಹಾದಿಯನ್ನು ಬಿಟ್ಟು ಬದಿಗಾಗುತ್ತಿದ್ದಾರೆ. ಆದರೆ ಅಪ್ಪಾಸಾಹೇಬರ ತಲೆಯಲ್ಲಿ, ಕಣ್ಣಲ್ಲಿ, ಕಿವಿಯಲ್ಲಿ ಇರುವುದೊಂದೇ ಒಂದು ವಾಕ್ಯ. 'ನಾವು ಸಾಯುವದಕ್ಕಾಗಿ ಹುಟ್ಟಿದ್ದೇವೆ. ಹೀಗೆ ನಡೆದೇ ನಡೆದರು. ನಡುನಡುವೆ ನಿಂತೇ ನಿಂತರು; ಮತ್ತೆ ನಡೆದರು, ಮತ್ತೆ ನಿಂತರು; ಅಂತೂ ಹಾಗೇ ಸ್ವಾರಿ ಸಾಗುತ್ತಲೇ ಇದೆ. 'ಓ ಪರಮಾತ್ಮಾ ! ಕೈಲಾಸಪತಿ !! ನಿನ್ನ ಕರುಣೆಗೆ ಕಾಲವಿದೆಯೆ ! ನನಗೆ ಕಲಿಸಬೇಕಾದ ಮಾತುಗಳನ್ನು ಎಂಥ ಸುಂದರವಾದ ರೀತಿಯಿಂದ ಕಲಿಸಿಕೊಟ್ಟೆ ! ಹತಭಾಗ್ಯನಾದ ನಾನು ಸತ್ಯದಿಂದ ವಿಮುಖನಾಗಿದ್ದೆನಲ್ಲಾ ! ಒರೇ ಪ್ರಾಪಂಚಿಕ ಸುಖವೇ ಸರ್ವಶ್ರೇಷ್ಠವಾದ ಸುಖವೆಂದು ಭಾವಿಸಿ ಆದರಲ್ಲಿಯೇ ಲೋಲುಪನಾಗಿದ್ದೆನಲ್ಲಾ ! ಪ್ರತಿ ನಿಮಿಷದಲ್ಲಿಯೂ ಮೃತ್ಯುವಿನ ಪಥದಲ್ಲಿ ಅರಿಯದೆ ಅಡಿಯಿಡುತ್ತಿರುವೆನಲ್ಲಾ ! ಪ್ರತಿ ಕ್ಷಣಕ್ಕೂ ಪರಮಾತ್ಮನ ಸಾನ್ನಿಧ್ಯಕ್ಕಾಗಿ ಹಂಬಲಿಸುವದು ಎಷ್ಟು ಅಗತ್ಯವೆಂಬುದನ್ನು ಮರೆತು ಮಂಕನಾಗಿದ್ದೆನಲ್ಲಾ ! ನಾನೆಂಥ ಮೂಢನು ! ಸಾಮಾನ್ಯವಾದ ದ್ರವ್ಯದಾರಾದಿಗಳಿಗಾಗಿ ಪ್ರಾಣಪರೆಗೂ ಪರಿಶ್ರಮಪಡುತ್ತಿದ್ದೆ. ಯಾವ ವಸ್ತುವು ನನಗೆ ಅತ್ಯಗತ್ಯವೋ ಅಂಥ ಅಸಾಮಾನ್ಯ ವಸ್ತುವಿಗಾಗಿ ನಾನು ಇಲ್ಲಿಯವರೆಗೆ ಒಮ್ಮೆಯೂ ಕೂಡ ವಿಚಾರಿಸಲಿಲ್ಲವಲ್ಲ ! ಇದು ಎಂಥ ಅಕ್ಷಮ್ಯವಾದ ತಪ್ಪು ! ಯಾವಾಗ್ಗೆ ಇದನ್ನು ವಿಚಾರಿಸಲಿ ! . . . . ' ಯಾವಾಗ್ಗೆ 'ಯೆ ? ಮೂಢನೆ! ಇಂದೇ,ಈ ನಿಮಿಷದಲ್ಲಿಯೆ!' ಎಂಬ ಮಾತು ತಲೆಯೊಳಗಿಂದ

ಹೊರಟಿತು. ಹೊರ ಪ್ರಜ್ಞೆಗೆ ಬಂದು ನೋಡುತ್ತಾರೆ, ಸಮ್ಮುಖ
ದಲ್ಲಿ ಒಬ್ಬ ಭಿಕ್ಷುಕನು ತನ್ನ ಭಿಕ್ಷಾಪಾತ್ರೆಯನ್ನು ಒಡ್ಡಿ ಕಾಸನ್ನು
ದಯಪಾಲಿಸಲು ಪ್ರಾರ್ಥಿಸುತ್ತಿದ್ದಾನೆ. ಅಪ್ಪಾಸಾಹೇಬರು ದುಮ್ಮಾ
ನದ ಮನಸ್ಸಿನಿಂದಲೇ ತಮ್ಮ ಕಿಸೆಯಲ್ಲಿ ಕೈಹಾಕಿದರು. ನೋಡುತ್ತಾರೆ
ತುಂಬಾ ಹಣದಿಂದ ತುಂಬಿದ ಒಂದು ಪಾಕೇಟು. ಆಯ್ತು; ಇಡೀಪಕ್ಕೆ
ಇಡಿಯಾಗಿಯೇ ಆ ಭಿಕ್ಷುಕನಿಗೆ ಕೊಟ್ಟುಬಿಟ್ಟರು. ಹಾಗೆಯೇ–
'ಎಲ್ಲಕ್ಕೂ ಮೊದಲು ದಾನ. ದಾನಕ್ಕಿಂತ ಹಿರಿದಾದ ಕಾರ್ಯವಿಲ್ಲ.
ಸ್ವರ್ಗದ ನಿಚ್ಚಣಿಕೆಯನ್ನೇರಬೇಕೆಂದವನು ಮೊದಲು ತನ್ನ ಸಂಪತ್ತ
ನ್ನೆಲ್ಲ ದಾನಮಾಡಬೇಕಾಗುವದು' ಎಂದನ್ನುತ್ತ ಮುಂದೆ ಮುಂದೆ
ಹೋಗಿಬಿಟ್ಟರು.

ಹೀಗೆ ಇವರ ಭಾವಾಂತರವಾದದ್ದು ಇವರನ್ನು ಕಂಡ ಬಳಿಕ
ಇವರ ಸಹಧರ್ಮಿಣಿ ಪಾರ್ವತೆಮ್ಮನವರು ಸಹಜವಾಗಿಯೇ ತಿಳಿದು
ಕೊಂಡರು. ಮೇಲೆಯೇ ಒಡೆದು ಕಾಣುತ್ತಿದ್ದ ಮಾತಿಗೆ ಹೆಚ್ಚು
ಊಹಿಸುವ ಅಗತ್ಯವೇನಿದೆ? ಆದರೆ ಇಂಥ ಗಾಢವಾದ ಭಾವಾಂತರಕ್ಕೆ
ಕಾರಣವೇನಿದ್ದಿತೆಂಬುದನ್ನು ಮಾತ್ರ ಆ ಅಬಲೆ ಅರಿಯಳು. ಆ ಬಗ್ಗೆ
ಹಲವು ರೀತಿಯಾಗಿ ವಿಚಾರಿಸಿದರು. ಕೇಳಿಯೂ ನೋಡಿದರು. ಆದರೂ
ಏನೂ ಉಪಯೋಗವಾಗಲಿಲ್ಲ–ಎಷ್ಟೂ ಗೊತ್ತಾಗಲಿಲ್ಲ. ಕಾರಣವು
ತಿಳಿಯದಂತಾದ ಹಾಗೆಲ್ಲ ಶೂಲದ ವೇದನೆಯು ಪಾರ್ವತೆಮ್ಮನವರಿಗೆ
ಬಾಧಿಸತೊಡಗಿತು. ಪ್ರಗಾಢವಾದ ಪ್ರಣಯದಿಂದ ಕೂಡಿದ ಆ ದಂಪತಿ
ಗಳಲ್ಲಿ ಹೀಗಾದ ಮೇಲೆ ಆ ವೇದನೆಯು ಏಕೆ ತಾನೆ ಬಾಧಿಸದೆ ಇದ್ದೀತು!
ಯಾರೂ ಅರಿಯದಂತೆ ಕೋಣೆಯಲ್ಲಿ ಒಬ್ಬರೇ ಕುಳಿತು ಇವರು ಒಳ
ಗೊಳಗೇ ಕಣ್ಣೀರುಗರೆದು ಕಳವಳಿಸತೊಡಗಿದರು. ಒಮ್ಮೊಮ್ಮೆ

ಊಟವನ್ನು ಮರೆತು ತಾವೂ ತಮ್ಮ ಪತಿದೇವರಂತೆ ವಿಚಾರ ಮಗ್ನರಾಗಿ ಕೂತು ಬಿಡುವರು. 'ಮೊದಲಿನಂತೆ ಅವರು ಇರದಿದ್ದರೆ ನಾನು ಜೀವ ವಿಟ್ಟು ಫಲವೇನು' ಎನ್ನುವರು. 'ಇಷ್ಟುದಿನ ನಮ್ಮಿಬ್ಬರಲ್ಲಿ ಅಣು ಮಾತ್ರವಾದರೂ ಭೇದವಿರಲಿಲ್ಲವಲ್ಲ! ನಮ್ಮ ದಾಂಪತ್ಯ ಪ್ರೇಮವು ಎಂಥ ಪ್ರಗಾಢವಾದದ್ದಿತ್ತಲ್ಲ! ಎಲ್ಲವೂ ಈಗ ಎಲ್ಲಿ ಅಡಗಿತು. ನನ್ನ ನುಳಿದು ಸರ್ವ ಸ್ತ್ರೀಯರು ಮಾತೆಯರೆಂದು ಇವರು ಉಸುರುತ್ತಿದ್ದ ರಲ್ಲ! ಅಂಥವರ ಮನಸ್ಸು ಈಗ ನನ್ನನ್ನುಳಿದು ಮತ್ತೆಲ್ಲಿಯಾದರೂ ತೊಡಗಿರಬೇಕೆ? ಅಂಥ ಆ ವಿಚಾರದಲ್ಲಿ ಈ ರೀತಿ ಇವರಿಗೆ ಮೌನದ ಮೊಬ್ಬು ಆವರಿಸಿರಬೇಕೆ?' ಎಂದು ಹಲವು ಪರಿ ಹಂಚಿಕೆ ಹಾಕುವರು. ಏನು ಮಾಡಿದರೂ ಎಷ್ಟೊ ತಿಳಿಯಲು ಶಕ್ಯವಾಗಲಿಲ್ಲ.

ಮುಂದೆ ಅಪ್ಪಾಸಾಹೇಬರು ಮನಬಂದಂತೆ ಕೈಗೆ ಸಿಕ್ಕದ್ದನ್ನೆಲ್ಲ ದಾನಮಾಡತೊಡಗಿದರು. ಆಗ ಪಾರ್ವತೆಮ್ಮನವರ ಮನಸ್ಸಿನಲ್ಲಿದ್ದ ಮೊದಲಿನ ಭಾವನೆಗಳು ಅಡಗಿ ಬೇರೆ ಭಾವನೆಗಳು ಮೂಡತೊಡಗಿದವು. ಹೆಂಡತಿ, ಮಗು, ಮತ್ತು ಜಗದ ಬೇರೆ ಜನರು ಇವರಲ್ಲಿ ಅಪ್ಪಾಜಿಯುವ ರಿಗೆ ಪ್ರಭೇದವೇ ತೋರದಂತಾದುದನ್ನು ಮಾತ್ರ ಅವರ ಪತ್ನಿ ತಿಳಿದು ಕೊಂಡರಾದರೂ 'ಇದಕ್ಕೆಲ್ಲಾ ಕಾರಣವೇನು?' ಎಂಬ ಒಗಟು ಒಡೆಯು ಲಾರದ್ದು ಒಡೆಯದೆಯೇ ಉಳಿಯಿತು.

ಒಂದು ದಿನ ಅಪ್ಪಾಸಾಹೇಬರಿಗೆ ಪಾರ್ವತೆಮ್ಮನವರು 'ನೀವು ಕೇವಲ ದಾನವನ್ನೇ ಮಾಡತೊಡಗಿರುವಿರಿ. ನಿಮ್ಮ ಅರಗಿಳಿಯಂತಿರುವ ಮಗುವಿಗೆ ಮುಂದೆ ಏನು ಇಡುವಿರಿ? ಅವನಿಗಾಗಿ ನೀವು ಆಲೋಚಿ ಸುವದಿಲ್ಲವೆ? ಹೀಗೆ ಎಲ್ಲವನ್ನೂ ನೀವು ದಾನಮಾಡಿಬಿಟ್ಟರೆ ಈ ಕೂಸಿನ

ಭವಿಷ್ಯವೇನಾಗಬೇಕು ! ಒಂದು ವೇಳೆ ಅಂದು ನೀವು ಅಂದಂತೆ ಒಂದು ಹೆಣ್ಣೋ ಹುಟ್ಟಿದ್ದಾದರೆ ಅವರ ಗತಿಯೇನು ? ಅದರ ಮಾಂಗಲ್ಯಕ್ಕಾಗಿ ಏನು ಉಳಿಸುವಿರಿ ? ಮದುವೆಯ ವೆಚ್ಚ ಬೇಡವೇ ?' ಎಂದು ಕೇಳಿದರು. ಅದಕ್ಕೆ ಅವರು 'ಇನ್ನು ನಮಗೆ ಸಂತತಿ ಹುಟ್ಟಲಾರವು.' ಎಂದು ಒಮ್ಮೆಲೆ ಒಂದು ಒಂಟು ಉತ್ತರ ಕೊಟ್ಟರು.

ಈ ಮಾತಿನಿಂದ ಅವರ ಪತ್ನಿಯವರು ಮತ್ತಷ್ಟು ಆಲೋಚನೆಗೆ ಈಡಾದರು. ಮನಸ್ಸಿನಲ್ಲಿಯೇ ಹೀಗೆ ಅಂದುಕೊಳ್ಳತೊಡಗಿದರು—

'ಧಾರ್ಮಿಕರು ಮಠಗಳಲ್ಲಿಯೇ ವಾಸಮಾಡಬೇಕೆ ? ಸಂಸಾರ ದಲ್ಲಿದ್ದವರಿಗೆ ಧರ್ಮಾರ್ಜನೆಯೇ ಅಸಂಭವವೆ ?' ಇದೇ ಮಾತನ್ನು ಯಜಮಾನರಿಗೆ ಕೇಳಿಯೂ ಬಿಟ್ಟರು. ಆದರೆ ಉತ್ತರವನ್ನು ಯಾರು ಹೇಳಬೇಕು ? ಯಜಮಾನರ ಚಿತ್ತ ಇಲ್ಲಿ ಇದ್ದರಲ್ಲವೆ ? ಆಯಿತು, ಆ ಕುಲಪತ್ನಿ ತಮ್ಮ ದೇವರು ಮಾಡಿದ್ದಕ್ಕೆ ಒಂದು ತುಟಿ ಎರಡು ಮಾಡದೆ ಸುಮ್ಮನಿದ್ದುಕೊಂಡರು.

ಈ ರೀತಿಯಾಗಿ ಕಾಯ, ಮನ, ವಾಕ್ಕುಗಳನ್ನು ಸಂಯಮಿಸುತ್ತ ಒಂದು ವರುಷ ಕಳೆದರು. ಆ ಒಂದು ವರುಷದಲ್ಲಿ ಅವಿಶ್ರಾಂತವಾಗಿ ಯಜಮಾನರು ಮಾಡಿದ ದಾನದಿಂದ ಅವರ ಮನೆಯೊಳಗಿನ ತಿಜೋರಿ ಯೆಲ್ಲ ಬರಿದಾಯಿತು. ಆದರೆ ಪುಣ್ಯಕ್ಕೆ ಕಚೇರಿಯ ಕೆಲಸವನ್ನು ಮಾತ್ರ ಮಹಾರಾಯರು ಇನ್ನೂ ತ್ಯಜಿಸಿರಲಿಲ್ಲ.

ಒಂದು ದಿನ ಒಂದು ದೊಡ್ಡ ನ್ಯಾಯವು ಇವರ ನ್ಯಾಯಾಲಯಕ್ಕೆ ಬಂದಿತು. ಆ ನ್ಯಾಯವು ಒಬ್ಬನು ತನ್ನ ಹೆಂಡತಿಯನ್ನು ಕೊಲೆ ಮಾಡಿದ ಬಗ್ಗೆ ಇದ್ದಿತು. ಐವತ್ತು ವರುಷದ ಉಲ್ಲನೊಬ್ಬನು—ವರುಷದ ಹಿಂದೆಯೆ

ಮದುವೆಯಾಗಿದ್ದ ತನ್ನ ಹೆಂಡತಿಯನ್ನು ಮೊನ್ನೆ ಕೊಂದಿದ್ದನು. ಆತನ ಹೆಂಡತಿಯ ವಯಸ್ಸು ಬರೇ ಹದಿನೇಳು ವರುಷ.

ಅಪರಾಧಿಯನ್ನು ಕೋರ್ಟಿನಲ್ಲಿ ಹಿಡಿದೆಳೆದು ತಂದಾಗ ಅಪ್ಪಾ ಸಾಹೇಬರು ಆತನಿಗೆ ಕೇಳಿದರು—

"ನೀನು ನಿನ್ನ ಕೈಹಿಡಿದ ಹೆಂಡತಿಯನ್ನು ಕೊಂದಿರುವಿಯೊ?

ಅಪರಾಧಿಯು ಬಾಡಿದ ಮುಖದಿಂದ ಆದರೂ ನಿರ್ಭಯವಾಗಿ ಉತ್ತರ ಕೊಟ್ಟನು. 'ಹೌದು ರಾವುಸಾಹೇಬ್! ಕೊಂದಿದ್ದೇನೆ.'

'ದುರ್ದೈವಿಯೆ! ಈ ರೀತಿ ಮಾಡಿದರೆ ಇಹಪರಕಾಲಗಳೆರಡೂ ನಷ್ಟವೆಂಬುದು ನಿನಗೆ ಗೊತ್ತಿರಲಿಲ್ಲವೊ?'

'ಹೌದು. ರಾಯರೆ, ಕೇಳಿಯೂ ತಿಳಿದೂ ಇಹಪರಕಾಲಗಳೆರಡನ್ನೂ ನಷ್ಟಮಾಡಿಕೊಂಡಿದ್ದೇನೆ. ಇದಕ್ಕೆ ಉಪಾಯವಿರಲಿಲ್ಲ. ತನ್ನ ಹೆಂಡತಿಯು ದುಶ್ಚಾರಿತ್ರಳಾದರೆ ಆತನು ಸುಮ್ಮನೆ ಕೂಡಲು ಶಕ್ಯವಿದೆಯೆ?'

ಇಷ್ಟರಲ್ಲಿ ನ್ಯಾಯಾಲಯಕ್ಕೆ ಬಂದ ಆ ಅಪರಾಧಿಯ ಅತ್ತೆಯು ಗರ್ಜಿಸುತ್ತ 'ಎಲಾ ಮುದುಕಾ! ಎಪ್ಪತ್ತು ವರುಷದ ಮುದುಕನಾಗಿ ಇಂಥ ಚಿಕ್ಕ ಕಂದಮ್ಮನನ್ನು ಮದುವೆಯಾಗಲಿಕ್ಕೆ ತಿಳಿಯಲಿಲ್ಲವೊ?' ಎಂದು ಅಂದದಕ್ಕೆ ಆ ದುರ್ದೈವಿಯಾದ ಅಪರಾಧಿಯೂ ಪ್ರತಿಯಾಗಿ ಗರ್ಜಿಸುತ್ತ 'ನನ್ನಿಂದ ದುಡ್ಡು ತಗೆದುಕೊಂಡು ನಿನ್ನ ಮಗಳನ್ನು ನನಗೆ ಮಾರಲಿಲ್ಲವೆ?' ಎಂದು ಅಂದನು.

ಅಪ್ಪಾಸಾಹೇಬರು ಈ ರೀತಿಯಾಗಿ ಗೊಂದಲ ಮಾಡುವುದು ಯುಕ್ತವಲ್ಲವೆಂದು ಅವರಿಬ್ಬರಿಗೂ ಹೇಳಿ ಶಾಂತಗೊಳಿಸಿ 'ನೀನು ನಿನ್ನ ಎಲ್ಲ ಸಂಗತಿಗಳನ್ನು ಬಿಚ್ಚಿ ಹೇಳು' ಎಂದು ಅಪರಾಧಿಗೆ ಆಜ್ಞಾಪಿಸಿದರು.

ಅಪರಾಧಿಯು ತನ್ನ ಎಲ್ಲ ಸಂಗತಿಯನ್ನು ಹೇಳುವುದಕ್ಕೆ ಆರಂಭ ಮಾಡಿದನು—

'ಧನಿಯರೇ! ನನ್ನ ಜನ್ಮವಾಗುವುದಕ್ಕಿಂತ ಮೊದಲೆ ನನ್ನ ತಂದೆಯು ಕೊಲೆಯಾಗಿದ್ದಿತು. ತಾಯಿಯ ಉದರದಿಂದ ಹೊರಬಂದ ಕೆಲ ದಿನಗಳಲ್ಲಿಯೇ ನಾನು ಅವಳನ್ನೂ ಕಳೆದುಕೊಂಡು ಪರದೇಶಿಯಾದೆ. ತಿಳುವಳಿಕೆಗೆ ಬರುವವರೆಗೆ ಹೇಗೆ ಬೆಳೆದೆನೋ ನನಗೆ ಗೊತ್ತಿಲ್ಲ. ಅಂದಿನಿಂದ ಇಂದಿನವರೆಗೂ ಭಿಕ್ಷೆಯನ್ನು ಬೇಡಿಯೇ ಹೊಟ್ಟೆ ಹೊರಕೊಳ್ಳುತ್ತಿದ್ದೇನೆ. ನನಗೆ ಒಂದು ಕೈಯಿಲ್ಲ. ಆದರೆ ಅದು ಬಾಲ್ಯದಲ್ಲಿ ಎಂದು ಹೇಗೆ ಕತ್ತರಿಸಿ ಹೋಗಿದ್ದಿತೋ ಅದನ್ನು ನಾನರಿಯೆ. ಆದರೆ ಅದರಿಂದ ನಾನು ಯಾವ ಕೆಲಸಕ್ಕೂ ಬಾರದಂತಾಗಿರುವೆನು. ನನಗೆ ಇದೊಂದೇ ಕುಂದು ಇದೆಯೆಂತಲ್ಲ, ಮಲರೋಗದಂಥ ಒಂದು ಉನ್ಮಾದ ರೋಗವು ಸೇರಿ ನನಗಿನ್ನಿಷ್ಟು ನಿರುಪಯುಕ್ತನನ್ನಾಗಿ ಮಾಡಿದೆ. ಈ ವಿಕಾರವು ನನ್ನಲ್ಲಿ ಹೆಚ್ಚಾದಾಗಲೆಲ್ಲ ಸ್ಮೃತಿತಪ್ಪಿ ನಾನು ಬಿದ್ದುಕೊಳ್ಳುತ್ತೇನೆ. ಹೀಗೆ ಒಮ್ಮೆ ಭಿಕ್ಷೆಗಾಗಿ ಹೊರಟಾಗ ಈ ಹೆಣ್ಣುಮಕ್ಕಳ ಅಂಗಡಿಯ ಮುಂದೆ ಸ್ಮೃತಿತಪ್ಪಿ ಬಿದ್ದುಕೊಂಡಿದ್ದೆ—'

ಈ ಸಮಯಕ್ಕೆ ಮತ್ತೆ ಚೀರುತ್ತ ಆ ಸ್ತ್ರೀಯು ಅಂದಳು. 'ಹುಜುರ್! ನಾನು ಹಣ್ಣುಹಂಪಲುಗಳನ್ನು ಮಾರಿ ಸದುಪಾಯದಿಂದ ಜೀವನವನ್ನು ಸಾಗಿಸುತ್ತೇನೆ. ಪ್ರತಿ ಸೋಮವಾರಕ್ಕೂ ದೇವರಿಗೆ ಕಾಯಿಕರ್ಪೂರಗಳನ್ನು ಅರ್ಪಿಸುತ್ತೇನೆ. ಇಂಥ ಧರ್ಮಿಷ್ಟಳು ನಾನು!'

ಆಪ್ಪಾಸಾಹೇಬರು ಅವಳನ್ನು ಸಮಾಧಾನಗೊಳಿಸಲು ಪೋಲೀಸರಿಗೆ ಸೂಚಿದ ನಂತರ ಅಪರಾಧಿಯು ತನ್ನ ಕಥೆಯನ್ನು ಹೇಳತೊಡಗಿದನು—

'ಈಕೆಯು ಅಂಗಡಿಯ ಮುಂದೆ ಪ್ರಜ್ಞೆತಪ್ಪಿ ನಾನು ಬಿದ್ದಾಗ ಇವಳ ಮಗಳು,-ಅಂದರೆ ನನ್ನ ಆ ಹೆಂಡತಿ,-ಯಾವಳನ್ನು ನಾನು ಕೊಂದಿರುವೆನೋ ಅವಳು ನನ್ನ ದುರ್ದೆಶೆಯನ್ನು ನೋಡಿ ಆಗ ಕನಿಕರಪಟ್ಟಳು. ತಟ್ಟನೆ ಆಕೆ ನನ್ನ ಹತ್ತಿರ ಬಂದು ನನ್ನನ್ನು ಉಪಚರಿಸತೊಡಗಿದಳು. ಆಗ ನನ್ನ ಕತ್ತರಿಸಿದ ಕೈಯು ಅವಳ ಕೋಮಲಾಂಗಕ್ಕೆ ಸ್ಪರ್ಶವಾಯಿತು. ಆ ಪಿಶಸ್ಪರ್ಶವೇ ನನ್ನ ಸರ್ವನಾಶಕ್ಕೆ ಮೂಲಕಾರಣವಾಯಿತು !!!

ಈಗ ಅಪ್ಪಾಸಾಹೇಬರ ಕುತೂಹಲವು ಇನ್ನಿಷ್ಟು ಹೆಚ್ಚಿತು; 'ಅದುವೆ ನಿನ್ನ ಸರ್ವನಾಶದ ಮೂಲ ಹೇಗೆ?' ಎಂದು ಕೇಳಿದರು.

ಅವನು ಮುಂದೆ ಹೇಳತೊಡಗಿದನು—

'ಸಾಹೇಬರೆ! ನಾನು ವಿಚಾರಿಸಿ ನೋಡಿದರೆ ನನ್ನ ವಯಸ್ಸು ಸುಮಾರು ಐವ್ವತ್ತಕ್ಕೆ ಏರಿದೆ. ಇದಕ್ಕೂ ಮೊದಲು ನಾನಾವ ಸ್ತ್ರೀಯರ ಅಂಗಸ್ಪರ್ಶವನ್ನು ಮಾಡಿರಲಿಲ್ಲ.'

ಅಪರಾಧಿಯ ಅತ್ತೆಯು ಇದನ್ನು ಕೇಳಿ ವಿದ್ರೂಪವಾದ ಹಾಸ್ಯವನ್ನು ಮಾಡತೊಡಗಿದಳು. ಆದರೆ ಅಪರಾಧಿಯು ಅದಾವುದರ ಕಡೆಗೆ ಲಕ್ಷ್ಯವನ್ನು ಕೊಡದೆ ಹೇಳತೊಡಗಿದನು—

'ಮಹಾಶಯರೇ, ಅದು ದೈವದ ಚಕ್ರ. ಅದುವೆ ನನ್ನ ಸರ್ವನಾಶದ ಮೂಲ. ಭಿಕ್ಷುಕನಾಗಿದ್ದರೂ ಇದಕ್ಕೂ ಮೊದಲು ನನಗಾವ ಕೊರತೆಯೂ ಇರಲಿಲ್ಲ, ಯಾವ ದುಃಖವೂ ಇರಲಿಲ್ಲ. ಆದರೆ ಅವಳ ಅಂಗಕ್ಕೆ ಆದ ಆ ನನ್ನ ದುಷ್ಟಸಂಸ್ಪರ್ಶದಿಂದ ಅದೆಲ್ಲವೂ ವಿಪರೀತವಾಗಿ ಹೋಯಿತು !!! ಆ ಮೇಲೆ ಭಿಕ್ಷೆಯಿಂದ ಬಂದ ಅನ್ನವು ನನಗೆ ತೃಪ್ತಿಯನ್ನು ಕೊಡದಾಯಿತು. ದಿನದಿನಕ್ಕೆ ನನ್ನ ಮನಸ್ಸಿನಲ್ಲಿ ಅಶಾಂತಿ

ಹುಟ್ಟಿ ಬೆಳೆಯತೊಡಗಿತು. ಈ ರೀತಿಯಲ್ಲಿಯೇ ಒಂದು ವರುಷ ಕಳೆದೆನು.'

ನ್ಯಾಯಸ್ಥಾನದಲ್ಲಿ ಆ ಅಪರಾಧಿಯ ಆಸ್ತ್ರೀಯು ಮತ್ತೆ ಚೀರಾಡುತ್ತ 'ಈ ಮುದುಕನು ಆಗಾಗ ನನ್ನ ಅಂಗಡಿಯ ಮುಂದೆ ಹಾಯುತ್ತಿದ್ದು ನನ್ನ ಮಗಳನ್ನು ತನಗೆ ಕೊಡುವ ಬಗ್ಗೆ ಕೇಳುತ್ತಿದ್ದನು.'

ಅಪರಾಧಿ ಅಂದನು 'ಆಕೆ ಸತ್ಯವಾದ ಮಾತನ್ನೇ ಹೇಳುತ್ತಿದ್ದಾಳೆ. ನನಗೆ ಹಾಗೆ ಮಾಡದೆ ಇರಲು ಎಷ್ಟೂ ಶಕ್ಯವಾಗಲಿಲ್ಲ. ಯಾಕೆಂದರೆ ಆಗಿನ ನನ್ನ ದುರ್ದಶೆಗೆ ಅಳತೆಯೇ ಇರಲಿಲ್ಲ. ನನ್ನ ಆ ಅಶಾಂತಿಯು ನನ್ನನ್ನು ಈ ಗತಿಗೀಡು ಮಾಡಿ ಎಲ್ಲೆಲ್ಲೋ ಓಡಾಡಿಸಿತು. ಅತೃಪ್ತಿಯನ್ನು ತೃಪ್ತಿಗೊಳಿಸಲು ಹಲವು ರೀತಿಯಾಗಿ ಹಂಚಿಕೆ ಹಾಕಿಸಿತು. ಒಂದು ದಿನ ನಾನು ಭಿಕ್ಷೆಗೆಂದು ಒಂದೆಡೆ ನಿಂತು ಯಾಚಿಸುತ್ತಿದ್ದೆ. ಅಷ್ಟರಲ್ಲಿ ಒಬ್ಬ ಮಹಾದಾನಿಯು ಸಮೀಪಕ್ಕೆ ಬಂದುದನ್ನು ನೋಡಿ ಆತನಿಗೆ ಭಿಕ್ಷೆಯನ್ನು ಬೇಡಿದೆ. ಆತನು ಹಣದಿಂದ ತುಂಬಿದ ಒಂದು ಚೀಲವನ್ನೇ ನನ್ನ ಕೈಯಲ್ಲಿ ಕೊಟ್ಟು ಮುಂದೆ ನಡೆದನು. ಚೀಲವನ್ನು ಬಿಚ್ಚಿ ಅದರಲ್ಲಿದ್ದ ಹಣವನ್ನು ಎಣಿಸಿ ನೋಡಿದರೆ ಇನ್ನೂರಾ ಐವ್ವತ್ತು ರೂಪಾಯಿಗಳಿದ್ದವು! ಆಗ ಆ ಹಣವನ್ನು ತಗೆದುಕೊಂಡು ಮುಂದೆ ಹೆಜ್ಜೆ ಇಡಲು ನನಗೆ ಸಾಹಸವಾಗದೆ ನಾನಲ್ಲೆ ಕುಳಿತು ಬಿಟ್ಟೆನು. ಈ ಚೀಲವನ್ನು ದಾನ ಮಾಡಿದ ದಾನಿಯು ಭ್ರಮೆಗೊಂಡಿರಬಹುದೆ? ಭ್ರಮೆಗೊಂಡು ಅದನ್ನು ನನಗೆ ಕೊಟ್ಟಿರಬೇಕೇ? ಇಷ್ಟರಲ್ಲಿಯೇ ಆತನು ಸ್ಮೃತಿಯಲ್ಲಿ ಬಂದು ಇದನ್ನು ತಗೆದುಕೊಂಡು ಹೋಗಲು ಬರಲಾರನೆ? ಆದ್ದರಿಂದ ನಾನು ಇದೇ ಸ್ಥಾನದಲ್ಲಿ ಕೂಡುವುದು ಶ್ರೇಯಸ್ಕರವೆಂದು ತಿಳಿದು ನಾನಲ್ಲೇ ಕುಳಿತು ಬಿಟ್ಟೆನು. ಕೆಲ

ಹೊತ್ತು ಕಳೆದಮೇಲೆಯೂ ಆತನು ಬಾರದ್ದರಿಂದ–ಇನ್ನು ಈ ಸ್ಥಳ ಬಿಡುವುದೊಳ್ಳೆಯದೆಂದು ಭಾವಿಸಿದೆ. ಹೀಗೆ ಭಾವಿಸುತ್ತಿರುವ ಹಾಗೆಯೆ ಇನ್ನೂ ಎಷ್ಟೋ ವೇಳೆ ಕಳೆದರೂ ಆ ದಾನಿಯು ತಿರುಗಿ ಬರಲಿಲ್ಲ. ಆಗ ನಾನು ಇನ್ನೂರಾ ಐಯ್ವತ್ತರ ಯಜಮಾನನಾದೆ. ಅದರಿಂದ ನನ್ನಲ್ಲಿ ಹಿಗ್ಗು ಹೆಮ್ಮೆಗಳು ಒತ್ತರಿಸಿ ಬರತೊಡಗಿದವು. ಆಗ ಹಲವು ರೀತಿಯಾಗಿ ಮನಸ್ಸಿನಲ್ಲಿ ಮಹಲುಗಳನ್ನು ಕಟ್ಟತೊಡಗಿದೆ. ಕಡೆಗೆ ಮನಸ್ಸಿನ ಆ ಮಹಲುಗಳಿಗೆಲ್ಲ ಮೂಲಸ್ಥಾನವಾದ ಆ ಕನ್ಯೆಯ ಬಳಿಗೆ ಬಂದೆ. ಅಲ್ಲಿ ಬಂದು ಆ ಕನ್ಯೆಯ ತಾಯಿಯಾದ ಇವಳಿಗೆಂದೆ—

'ನಿನಗೆ ನಾನು ನೂರು ರೂಪಾಯಿಗಳನ್ನು ಕೊಡುವೆ. ನನಗೆ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡು'

ಇದನ್ನು ಕೇಳಿದ ಆ ಅಪರಾಧಿಯ ಅತ್ತೆಯು ಮೊದಲಿನಂತೆ ಚೀರುತ್ತ ಅನ್ನತೊಡಗಿದಳು:—

'ಸುಳ್ಳು ಸುಳ್ಳು! ಎಲಾ ಮುದುಕಾ! ನೀನು ಮೊದಲು ಐಯ್ವತ್ತೇ ರೂಪಾಯಿಗಳನ್ನು ಕೊಡುತ್ತೇನೆನ್ನಲಿಲ್ಲವೆ? ನಾನು ಎಷ್ಟೊ ಕಷ್ಟಮಾಡಿ ನಿನ್ನಿಂದ ನೂರು ರೂಪಾಯಿಗಳನ್ನು ಇನಗೊಳ್ಳಲಿಲ್ಲವೆ?'

ಆಗ ಅಪ್ಪಾಸಾಹೇಬರು ಅವಳಿಗೆ —'ನಾವು ಕೇಳದೆ ನೀನೇಕೆ ನಿನ್ನ ಕಥೆಯನ್ನು ಹೇಳುವದು?' ಎಂದು ಗದರಿಸಿದರು.

ಆಕೆ ಅಂದಳು:–'ರಾಹುಸಾಹೇಬರೆ, ನಾನು ವಿಧವೆ ಎಂಬುದನ್ನು ತಾವು ಮರೆಯುವಿರಾ? ನಾನು ಪರಮಾತ್ಮನ ಹೆಸರಿನಲ್ಲಿ ಪ್ರತಿ ಸೋಮವಾರಕ್ಕೂ ಕಾಯಿ ಕರ್ಪೂರಗಳನ್ನು ಕೊಡುವಂಥವಳು'

'ಇರಲಿ, ಇನ್ನೊಮ್ಮೆ ಚೀರಿದೆಯಾದರೆ ನಿನ್ನ ಸ್ಥಿತಿ ನೆಟ್ಟಗಾಗ ಲಿಕ್ಕಿಲ್ಲ ನೆನಪಿನಲ್ಲಿ ಇರಲಿ' ಎಂದು ಅಪ್ಪಾಸಾಹೇಬರು ತಾಕೀತುಕೊಟ್ಟು ಅಪರಾಧಿಗೆ ತನ್ನ ಕಥೆಯನ್ನು ಹೇಳಲು ಸೂಚಿಸಿದರು.

ಆತನು ಹೇಳುವನು:— ಇವಳಿಗೆ ನೂರು ರೂಪಾಯಿಗಳನ್ನೂ ಇವಳ ಮಗಳಿಗೆ ಬಂಗಾರದ ಬಳೆಗಳನ್ನೂ ಒಳ್ಳೊಳ್ಳೆ ಸೀರೆ ಕುಪ್ಪಸ ಗಳನ್ನೂ ಕೊಟ್ಟೆ. ನಂತರ ಮೂರೇ ದಿನಗಳಲ್ಲಿ ನನ್ನ ಮದುವೆಯಾಯಿತು.

ಅಪ್ಪಾಸಾಹೇಬರು ಕೇಳಿದರು:— 'ನಿನ್ನನ್ನು ನಿನ್ನ ಹೆಂಡತಿ ಪ್ರೀತಿಸುತ್ತಿದ್ದಳೊ?'

ಇದಕ್ಕುತ್ತರವನ್ನು ಹೇಳುವಷ್ಟರಲ್ಲಿಯೇ ಆ ಅಪರಾಧಿಯ ಅತ್ತೆಯು ಏನೇನೋ ಚೀರಾಡಿ ಅಪ್ಪಾಸಾಹೇಬರು ಮಾತಾಡುವ ಮಾತುಗಳು ಯಾರಿಗೂ ಕೇಳದಂತೆ ಮಾಡಿದಳು. ಆಗ ಅಪ್ಪಾಸಾಹೇಬರು ಅವಳ ಕಡೆಗೆ ದುರುಗುಟ್ಟಿ ನೋಡಿ ಪುನಃ ಇತ್ತ ಅಪರಾಧಿಗೆ ಕೇಳಿದರು: 'ಹಾಗಾದರೆ ನಿನ್ನನ್ನವಳು ಪ್ರೀತಿಸುತ್ತಿದ್ದಳೆ?'

ಅಪರಾಧಿ ಹೇಳಿದನು:–'ರಾಯರೇ, ಸ್ವೇಚ್ಛೆಯಾಗಿಯೇ ನನ್ನನ್ನು ಅವಳು ಮದುವೆಯಾಗಿದ್ದಳು'

'ನೀನು ಮುದುಕನು ಆಕೆಯು ಪ್ರಾಯದವಳು ಎಂಬುದನ್ನು ನೀನೊಮ್ಮೆಯೂ ವಿಚಾರಿಸಲಿಲ್ಲವೊ?'

'ರಾಯರೇ ಅದೆಲ್ಲಾ ನಾನೆಷ್ಟೂ ವಿಚಾರಿಸಲಿಲ್ಲ. ನನ್ನ ಭ್ರಮೆ ನನ್ನನ್ನು ತಿನ್ನುತ್ತಿತ್ತು. ನನ್ನ ದುರ್ದೈವದ ಫಲವು ನನಗೆ ಬೇರೆ ಯಾವ ವಿಚಾರವನ್ನೂ ಆಗ ಮಾಡಗೊಡಲಿಲ್ಲ.'

'ಒಳ್ಳೇದು, ಮುಂದೆ ಏನೇನಾಯಿತು?'

'ಆಗಬಹುದಾಗಿದ್ದರೆ ಎಲ್ಲವೂ ಒಳ್ಳೆಯದೇ ಆಗಬಹುದಾಗಿತ್ತು; ಆದರೆ ದೈವವು ಹಾಗೆ ಮಾಡಗೊಡಲಿಲ್ಲ! ನಾನು ಅವಳನ್ನು ಎಷ್ಟು ಪ್ರೀತಿಸುತ್ತಿದ್ದೆನೆಂಬುದನ್ನು ಹೇಳಿದರೆ ತಾವು ನಂಬಲಾರಿರಿ. ಅವಳನ್ನು ಅಮೌಲ್ಯವಾದದ್ದೊಂದು ರತ್ನದ ಹರಳಿನಂತೆ ನಾನು ಭಾವಿಸಿಕೊಂಡಿದ್ದೆನು'

ಒಡನೆಯೇ ಅತ್ತೆಯು ಅನ್ನತೊಡಗಿದಳು:—'ಹಾ! ಅವಳನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಹಾಲು ತುಪ್ಪಗಳಿಂದ ಕೈ ತೊಳಿಸುತ್ತಾ ಇದ್ದಿ!' ಅವಳ ಕಡೆಗೆ ಯಾರೂ ಲಕ್ಷ್ಯವನ್ನು ತಿರುಗಿಸಲಿಲ್ಲ.

ಅಪರಾಧಿ ಹೇಳತೊಡಗಿದನು:— ಅನಂತರ ನಾವೊಂದು ಸಣ್ಣ ಅಂಗಡಿಯನ್ನು ಹಾಕಿದೆವು. ಎಲ್ಲರೀತಿಯಿಂದಲೂ ಆ ಅಂಗಡಿಯು ಚೆನ್ನಾಗಿ ನಡೆಯತೊಡಗಿತು. ನಾನು ಸಾಮಾನುಗಳನ್ನು ತಂದು ಕೊಡುತ್ತಾ ಇದ್ದೆ. ಅವಳು ಅವನ್ನು ಮಾರುತ್ತಾ ಇದ್ದಳು. ಅದರಿಂದ ತಕ್ಕಮಟ್ಟಿಗೆ ಪ್ರಾಪ್ತಿಯೂ ನಮಗೆ ದೊರಕತೊಡಗಿತು. ಇಷ್ಟರಲ್ಲಿ ಒಬ್ಬನು ತನ್ನ ಉದ್ದವಾದ ಕೂದಲುಗಳನ್ನು ಚೆನ್ನಾಗಿ ಹಿಕ್ಕಿಕೊಂಡು ತಲೆಗೆ ವಾಸನೆಯ ತೈಲವನ್ನು ಬಳೆದು ಝೋಕಾಗಿ ನಮ್ಮ ಅಂಗಡಿಗೆ ಬರತೊಡಗಿದನು. ಅವನು ಬರತೊಡಗಿದ ಹಾಗೆಲ್ಲ ಅವನ ವಿಷಯವಾಗಿ ನನಗೆ ತಿರಸ್ಕಾರ ಹುಟ್ಟಹತ್ತಿತು. ಆಗ ಅವರಿಬ್ಬರ ಮನಸ್ಸು ಕೂಡಿರಬಹುದೆಂದು ಅಂದುಕೊಳ್ಳುತ್ತೇನೆ. ಮುಂದೆ ಎಷ್ಟೋಸಾರೆ ನನಗೆ ಗೊತ್ತಾಗದ ಹಾಗೆ ಎಲ್ಲೋ ನನ್ನಾಕೆಯು ಹೋಗುತ್ತಿದ್ದುದು ಆ ಮೇಲೆ ತಿಳಿಯಿತು. ಒಂದು ದಿನ ಆತನು ಅಂಗಡಿಗೆ ಬಂದು ನನ್ನ ಹೆಂಡತಿಯೊಡನೆ ಬಹಳಹೊತ್ತಿನವರೆಗೆ ಮಾತುಕಥೆಗಳನ್ನಾಡುತ್ತ ಕುಳಿತಿದ್ದನು. ನಾನದನ್ನು ಕಣ್ಣುಮುಟ್ಟ ನೋಡಿದೆನು. ಆಗ ನಾನು

ಆತನಿಗೆ 'ಎಲಾ! ನೀನಿಲ್ಲಿಗೆ ಇನ್ನುಮುಂದೆ ಬಂದರೆ ಒಳಿತಾಗಲಿಕ್ಕಿಲ್ಲ' ಎಂದೆನು. ಅವನು ಮಾತನಾಡದೆ ಎದ್ದು ಹೊರಟುಹೋದನು. ಆದರೆ ನನ್ನ ಆ ಹೆಂಡತಿಯು ರಂಬಾಟ ಮಾಡುತ್ತ–'ಎಂಥ ಘನವಂತನ ಕೂಡ ನಾನು ಲಗ್ನವಾದೆ! ನನ್ನ ದೈವ ಎಂಥಾದ್ದು! ನಾನಾರ ಕೂಡ ಮಾತಾಡಲೂ ನಹ ಬಾರದಂತೆ!!!' ಎಂದು ಮಾರ್ಮಿಕವಾಗಿ ನನ್ನನ್ನು ಹಳಿದಳು.

ಇದನ್ನು ಹೇಳುವಾಗ ಆತನ ಅತ್ತೆಯು ನಡುವೆ ಬಾಯಿಹಾಕಿ ಅಂದಳು—'ಅವನು ನಮ್ಮ ಬಳಗದವರಲ್ಲೊಬ್ಬನಿದ್ದಾನೆ. ಆತನ ಚಿಕ್ಕಂದಿನಿಂದಲೂ ನಮ್ಮ ಹಾಗೂ ಅವನ ಸಲುಗೆಯು ತುಂಬಾ ಉಂಟು. ಎಷ್ಟೋ ದಿನಗಳ ವರೆಗೆ ದೂರ ದೇಶಕ್ಕೆ ಹೋದವನು ಮೊನ್ನೆಯೇ ಬಂದಿದ್ದಾನೆ. ಆತನ ಕೂಡ ನನ್ನ ಮಗಳು ಬಹಳ ವೇಳೆಯ ವರೆಗೆ ಮಾತಾಡಿದ್ದು ಅಪರಾಧವಾಯಿತೆ? ನನ್ನ ಮಗಳು ಗರತಿ ಗಂಗಮ್ಮ. ಎಂಥವಳಿಗೆ ಎಂಥಾ ಕಲಂಕ! ಕೇವಲ ಈತನ ಹುಚ್ಚುತನಕ್ಕಾಗಿಯೇ ಈ ಸರ್ವನಾಶವು ಸಂಭವಿಸಿತು ಒಡೆಯರೇ!'

ಅಪ್ಪಾಸಾಹೇಬರು ಅವಳಿಗೆ ಕೇಳಿದರು:—'ಹಾಗಾದರೆ ನಿನ್ನ ಮಗಳು ನಿರಪರಾಧಿನಿಯಾಗಿದ್ದರೆ ಇಷ್ಟೆಲ್ಲಾ ಹೇಗೆ ನಡೆಯಿತು?'

ಅತ್ತೆ ಹೇಳಿದಳು:—'ರಾಯರೇ! ಈ ಮುದುಕನಂಥ ಸಂಶಯ ಪಿಶಾಚಿಯ ಕೈಯೊಳಗಿಂದ ಎಂಥ ಗರತಿಯೂ ಪಾರಾಗಲಾರಳು! ಏನು ಮಾಡಲು ತಾನೆ ಶಕ್ಯವಿದೆ? ಈ ಮುದುಕಾ, ಸದಾ ಸರ್ವದಾ ಅವಳ ವಿಷಯಕ್ಕೆ ಅಲ್ಲಸಲ್ಲದ್ದನ್ನೇ ಭಾಷಿಸುತ್ತಿದ್ದನು.'

ಅಪ್ಪಾಸಾಹೇಬರು ಅವಳಿಗೆ–'ನನಗೆ ಇಷ್ಟು ತಿಳಿಯಲಾರದೇನು?'

ಎಂದು ಹೇಳಿ,ಅಪರಾಧಿಗೆ ಆತನ ಮಾತನ್ನು ಮುಗಿಸಲು ಈಗ ಮತ್ತೆ ಆಜ್ಞೆಮಾಡಿದರು.

ಅಪರಾಧಿ ಹೇಳತೊಡಗಿದನು:—'ರಾಯರೇ, ಹೆಚ್ಚಿಗಿನ್ನೇನೂ ಹೇಳುವದುಳಿದಿಲ್ಲ. ಒಂದು ದಿನ, ಈಕೆಯು ಮನೆಯಲ್ಲಿ ಕೋಣೆಯೊಳಗೆ ಅವರಿಬ್ಬರೂ ಕೂಡಿ ಇರುವುದನ್ನು ನಾನು ಕಂಡೆನು !!! ಸಿಟ್ಟುಬಂದರೂ ಉಪಾಯದಿಂದ ನೋಡಿಯೂ ನೋಡದವರ ಹಾಗೆ ನಟಿಸಿದೆನು. ಅವನು ಓಡಿಹೋದನು'

ನ್ಯಾಯಾಧೀಶರಂದರು 'ಅವನೊಡನೆ ಅವಳನ್ನೂ ಓಡಿಸಿ ಬಿಟ್ಟಿದ್ದರೆ ಒಳಿತಾಗುತ್ತಿತ್ತಲ್ಲ !'

ಆಗ ಅಪರಾಧಿಯು ನ್ಯಾಯಾಧೀಶರ ಕಡೆಗೆ ವಿಸ್ಮಯದ ನೇತ್ರಗಳಿಂದ ನೋಡುತ್ತ ಅಂದನು–'ರಾಯರೇ, ಅದು ಹೇಗೆ ಸಂಭವವಿದೆ ? ನನ್ನ ಹೆಂಡತಿಯನ್ನು ಓಡಿಸಿ ಬಿಟ್ಟಿದ್ದರೆ ಅವಳು ಅನಾಯಾಸವಾಗಿ ಅವನನ್ನು ಕೂಡಿಕೊಳ್ಳುತ್ತಿದ್ದಳು.'

'ಹಾಗಾಗಿದ್ದರೆ ನಿನ್ನದೇನು ಗಂಟು ಹೋಗುತ್ತಿತ್ತು ? ಅವಳಂತೂ ಹೇಗೂ ಕೆಟ್ಟ ನಡತೆಯವಳು.'

'ರಾಯರೇ, ತಾವು ಹೇಳಿದ್ದು ಸತ್ಯವೇ ಇದೆ. ಆದರೆ ತಾವೊಮ್ಮೆ ನನ್ನ ಮೇಲೆ ಅನುಗ್ರಹ ಮಾಡಿ ವಿಚಾರಿಸಿ ನೋಡಿರಿ. ಬಹಳ ಬಯಸಿ ಬಯಸಿ ಐವತ್ತು ವರುಷಕ್ಕೆ ನಾನು ಅವಳನ್ನು ವಿವಾಹ ಮಾಡಿಕೊಂಡೆ. ನಂತರ ಆ ಹೆಂಡತಿಯನ್ನು ಎರಡನೆಯವರಿಗೆ ಕೊಟ್ಟು ಕುಳಿತುಕೊಳ್ಳಲೇ?'

'ಇನ್ನು ನೀನಂತೂ ಅವಳನ್ನು ಪಡೆಯಲಾರಿಯಲ್ಲಾ !'

'ರಾಯರೇ, ಅದೆಲ್ಲವೂ ಸತ್ಯ. ಆದಾಗ್ಯೂ ನಾನು ನನ್ನ ಹೆಂಡತಿಯನ್ನು ಎರಡನೆಯವರಿಗೆ ಬಿಡಲು ಶಕ್ಯವಾಗಲಿಲ್ಲ.'

ಅಪ್ಪಾಸಾಹೇಬರು ಕೆಲನಿಮಿಷಗಳವರೆಗೆ ಮೌನವಾಗಿ ಕುಳಿತುಕೊಂಡು ಅಪರಾಧಿಗೆ ಹೇಳಿದರು 'ಒಳ್ಳೇದು, ಇನ್ನು ನಿನ್ನ ಕಥೆಯನ್ನು ಮುಗಿಸು.'

'ರಾಯರೇ, ಮುಂದೆ ಏನು ಸಂಭವಿಸಿತೋ ಅದನ್ನು ಹೇಳುವೆ. ರಾತ್ರಿಯಾಗುವವರೆಗೆ ಈ ಕಾರ್ಯ ನನ್ನಿಂದ ಘಟಿಸಬಹುದೆಂದು ನಾನೆಷ್ಟೂ ತಿಳಿದುಕೊಂಡಿರಲಿಲ್ಲ. ಕ್ಷಮಿಸಬೇಕೆಂದೇ ಮಾಡಿದ್ದೆನು. ಆ ದಿನ ನನ್ನನ್ನವಳೂ ನನ್ನ ಬಗೆಗೆ ಬಹಳೇ ಆದರ ತೋರಿಸತೊಡಗಿದಳು. ವಿವಾಹ ಜೀವನದ ಮೊದಮೊದಲಿನ ಕೆಲದಿನಗಳಲ್ಲಿ ತೋರಿಸುತ್ತಿದ್ದ ಅವಳ ಆದರವೂ ಅವಳ ಪ್ರೇಮವೂ ಇಂದು ಮತ್ತೆ ಅವಳಲ್ಲಿ ಕಾಣತೊಡಗಿದವು. ಆದರೆ ಅದೆಲ್ಲಾ ಕೃತ್ರಿಮ. ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಈ ಪ್ರೇಮದ ಪರದೆಯನ್ನು ಎಳೆಯುತ್ತಿದ್ದಾಳೆಂಬುದನ್ನು ನಾನು ಅರಿತಿದ್ದೆ. ಆದರೂ ನಾನು ಇದೊಂದು ಸಾರೆ ಕ್ಷಮಿಸಬೇಕೆಂದೇ ಒಳಗೊಳಗೆ ಆಲೋಚಿಸುತ್ತಿದ್ದೆ. ಕೆಲಹೊತ್ತಿನ ಮೇಲೆ ಅವಳು ಒಮ್ಮೆ ಹೀಗೆಂದಳು 'ನಾನು ಆತನನ್ನು ಪ್ರೀತಿಸುತ್ತೇನೆಂದು ತಾವು ಭಾವಿಸಿಕೊಂಡಿರುವಿರೆಂದು ತೋರುತ್ತದೆ. ಇದು ಕೇವಲ ಸಂದೇಹ. ಅವನು ನನಗೆ ನಡೆವಳಿಯಲ್ಲಿ ಅಣ್ಣನಾಗಬೇಕು' ನಾನು ನನ್ನ ಮನದ ಭಾವವನ್ನೂ ಒಂದು ತುಟಿ ಎರಡು ಮಾಡಲಿಲ್ಲ. ಪ್ರಕಾಶಪಡಿಸಲಿಲ್ಲ. ಯೋಚಿಸಿದೆ; ಮನದಲ್ಲಿಯೇ ಯೋಚಿಸಿದೆ. ಹೀಗಿರುವಂತೆಯೇ ಹೊತ್ತು ಮುಳುಗಿತು. ಆ ದಿನದ ಗಂಭೀರವಾದ ರಾತ್ರಿಯಲ್ಲಿ ಅವಳು ನಿರಾಶಾಮಯವಾದ ನಿದ್ರೆಯಲ್ಲಿ ಮುಳುಗಿರುವಾಗ ಅವಳನ್ನು ನೋಡಿದೆ. ನನ್ನ ಕ್ಷಮೆಯೆಲ್ಲಾ ಹಾಳಾಗಿ ಹೋಯಿತು. ಒಂದು ತೀಕ್ಷ್ಣವಾದ ಚೂರಿಯನ್ನು ಕೈಯಲ್ಲಿ ತೆಗೆದುಕೊಂಡೆ. ಸಾವಕಾಶವಾಗಿ ಅವಳ ವಕ್ಷಸ್ಥಳದ

ಬಟ್ಟೆಯನ್ನು ಸರಿಸಿದೆ. ಸರಿಸಿ ಗುರಿಯಿಟ್ಟೆ. ಅವಳಂಗದ ಯಾವ ಸ್ಥಾನಕ್ಕೆ ನನ್ನಂಗದ ಮೊದಲನೆಯ ಸಂಸ್ಪರ್ಶವಾಗಿದ್ದಿತೋ, ಅವಳ ಯಾವ ಸ್ಥಾನದ ಸಂಸ್ಪರ್ಶದಿಂದ ನನ್ನ ಸರ್ವನಾಶದ ಮೂಲಕಾರಣವಾಯಿತೊ, ನನ್ನ ಶಾಂತಿಯ ದಿನಗಳೆಲ್ಲಾ ಯಾವದರಿಂದ ಅಳಿಕಿ ಹೋದವೋ ಅವಳ ಆ ಅಂಗವನ್ನು ನೋಡಿ ನೋಡಿ 'ನನ್ನ ಸರ್ವನಾಶದ ಸ್ಮಶಾನವೇ, ನೀನೇ ಇಷ್ಟೆಲ್ಲಾ ಮಾಡಿರುವಿಯಲ್ಲವೆ!' ಎಂದು ಅದನ್ನೇ ಗುರಿಯಿಟ್ಟು ಆ ಚೂರಿಯನ್ನು ಬಲವಾಗಿ ಎಸೆದನು. ಮುಂದೆ ನಾನೇನು ಮಾಡಿದೆನು, ಏನೇನು ಘಟಿಸಿತು ಎಂಬುದನ್ನೇನೂ ಅರಿಯೆನು. ಆ ನನ್ನ ಹೆಂಡತಿಯು— ಮುದುಕಾ, ಮುದುವಾ, ಎಂದು ಬಡಬಡಿಸುತ್ತ ಪ್ರಾಣಬಿಟ್ಟದ್ದು ಮಾತ್ರ ಏನೋ ಅಲ್ಪಸ್ವಲ್ಪ ಸ್ಮರಣಕ್ಕೆ ಬರುತ್ತದೆ.'

'ಒಂದೇ ಕೈಯಿಂದಲೇ ಇದನ್ನೆಲ್ಲಾ ಮಾಡಲು ಶಕ್ಯವಾಯಿತೊ?' ಎಂದು ನ್ಯಾಯಾಧೀಶರು ಕೇಳಿದರು.

'ಹೌದು ರಾಯರೇ, ಒಂದು ಕೈಯಿಂದಲೇ ಇದನ್ನೆಲ್ಲ ಮಾಡಿದೆ. ಅದನ್ನು ಯಾವ ರೀತಿಯಿಂದ ಮಾಡಿದೆನೆಂಬುದು ಮಾತ್ರ ನನ್ನ ಜ್ಞಾಪಕ ದಲ್ಲಿಲ್ಲ. ನನ್ನ ಕೈಹಿಡಿದ ನನ್ನ ಹೆಂಡತಿಯು ಎರಡನೆಯವರಿಗೆ ಒಲೆಯ ಕೂಡದೆಂಬ ಆ ನನ್ನ ಕಿಚ್ಚು ಇದನ್ನೆಲ್ಲ ಮಾಡಿಸಿತು.'

ಆಗ ಆ ಅಪರಾಧಿಯ ಅತ್ತೆಯು ನ್ಯಾಯಾಲಯವನ್ನು ಪ್ರತಿಧ್ವನಿ ಗೊಳಿಸುತ್ತ ವಿಕಟವಾಗಿ ಚೀರತೊಡಗಿದಳು. ಆಗಿನ ಅವಳ ಉಗ್ರ ಸ್ವರೂಪವನ್ನು ನೋಡಿದರೆ ಆ ಅಪರಾಧಿಯನ್ನು ಹಿಡಿದೆಳೆದು ಹರಿದು ತಿನ್ನುವಳೋ ಏನೋ ಎಂದು ಅನಿಸಿತು. ಅಷ್ಟರಲ್ಲಿ ಒಬ್ಬ ಚಪರಾಸಿಯು ಅವಳನ್ನು ಬೇರೆ ಕಡೆಗೆ ಸಾಗಿಸಿಕೊಂಡು ಹೋದನು.

ಅಪ್ಪಾಸಾಹೇಬರು ಅನೇಕ ಕ್ಷಣಗಳವರೆಗೆ ವಿಚಾರಮಗ್ನರಾಗಿ

ಕುಳಿತುಕೊಂಡರು. ವಿಚಾರಾಂತ್ಯದಲ್ಲಿ ಅವರು ಹೀಗೆಂದರು 'ನೀನು ನಿನ್ನ ಸ್ವಂತದ ದೋಷವನ್ನು ಒಪ್ಪಿಕೊಂಡದ್ದು ಇಹಕಾಲ ಪರಕಾಲ ಗಳೆರಡಕ್ಕೂ ಮಂಗಲದಾಯಕವಾಗಿದೆ. ಇಲ್ಲವಾದರೆ ನಿನ್ನನ್ನೇ ನೀನು ವಂಚಿಸಿಕೊಂಡಂತಾಗುತ್ತಿತ್ತು. ಒಪ್ಪಿಕೊಂಡು ಒಳ್ಳೆಯದನ್ನೇ ಮಾಡಿದಿ. ಅದಿರಲಿ, ಸತ್ಯಸತ್ಯವಾಗಿಯೂ ಆ ಇನ್ನೂರಾ ಐವತ್ತು ರೂಪಾಯಿ ಗಳನ್ನು ನೀನು ಭಿಕ್ಷೆಯಿಂದ ಸಂಪಾದಿಸಿದ್ದಿಯೋ ಅಥವಾ ಕಳ್ಳತನ ಮಾಡಿದ್ದಿಯೊ ?'

ಆಗ ಆ ಅಪರಾಧಿಯು ಹೆಚ್ಚು ಗಂಭೀರತೆಯಿಂದ ಹೇಳಿದನು– ಪಿತೃಪಿತಾಮಹರ ಪವಿತ್ರವಾದ ಹೆಸರನ್ನು ತಗೆದುಕೊಂಡು ಹೇಳು ತ್ತೇನೆ. ಸತ್ಯಸತ್ಯವಾಗಿಯೂ ನನ್ನ ಜೀವನದಲ್ಲಿ ಒಂದು ಜೋಳದ ಕಾಳನ್ನೂ ಕೂಡ ಕದ್ದಿರುವದಿಲ್ಲ. ಯಾವ ಸಮಯದಲ್ಲಿ ಯಾವ ಸ್ಥಳದಲ್ಲಿ ಆ ಹಣವನ್ನು ನಾನು ಸಂಪಾದಿಸಿದೆನೋ ಆ ಸ್ಥಳದ ಹಾಗೂ ಸಮಯದ ಚಿತ್ರವು ಇನ್ನೂ ನನ್ನ ಕಣ್ಣೆದಿರು ಕಟ್ಟಿಬಿಟ್ಟಿರುವುದು. ಅದನ್ನು ನೆನಿಸಿ ದಾಗೆಲ್ಲ ನಿನ್ನೆಯೇ ಸಂಪಾದಿಸಿದೆನೆನ್ನುವಷ್ಟು ನಿಚ್ಚಳವೆನಿಸುವದು. ಯಾವ ದಾನಿಯು ನನಗೆ ದಾನ ಕೊಟ್ಟನೋ ಅವನು ಘನವಂತನು; ಅಧಿಕಾರಿಯು. ಆತನು ಮಠದ ಸಮೀಪದಲ್ಲಿರುವ ಬಾಲಿಕಾ ವಿದ್ಯಾ ಲಯಕ್ಕೆ ಅಂದು ಬಂದಿದ್ದನು.'

ಅಪ್ಪಾಸಾಹೇಬರು ಚಕಿತರಾದರು. ಇಷ್ಟುಹೊತ್ತಿನ ವರೆಗೆ ಆ ಅಪರಾಧಿಯನ್ನು ಅಷ್ಟು ಲಕ್ಷ್ಯಗೊಟ್ಟು ನೋಡಿರಲಿಲ್ಲ. ಈಗ ಆತನ ಕಡೆ ತುಂಬಾ ಲಕ್ಷ್ಯಗೊಟ್ಟು ನೋಡಿದರು. ಅಪರಾಧಿಯೂ ಅವರ ಕಡೆಗೆ ನೋಡಿದನು. ಮಿಂಚಿನ ಚಳಕ ಮತ್ತು ಗುಡುಗಿನ ಗದ್ದರಣೆಯ ನಡುವಿನ ಶಾಂತತೆಯಂತೆ ಉಭಯರೂ ಸ್ತಬ್ಧರಾದರು. ಕಟ್ಟಕಡೆಗೆ

ಅಪರಾಧಿಯು ಧೀರಭಾವದಿಂದ ಹೀಗೆಂದನು 'ರಾಯರೇ, ತಾವೇ ಆ ದಾನಿಗಳು! ತಮ್ಮ ದಾನವೇ ಇದೆಲ್ಲ ಅಕಾಂಡ ತಾಂಡವಕ್ಕೆ ಮೂಲ!'

ಅಪ್ಪಾಸಾಹೇಬರ ತಲೆಗೆ ಸಿಡಿಲು ಒಡೆದಂತಾಯಿತು. ಎಲ್ಲರೂ ಸ್ತಬ್ಧರಾದರು. ಆಗ ನ್ಯಾಯಾಲಯದಲ್ಲಿ ಇರುಳಿನ ಗಾಢತೆಯು ವ್ಯಾಪಿಸಿಕೊಂಡಂತಾಯಿತು. ಅಪ್ಪಾಸಾಹೇಬರು ಪೋಲೀಸರ ಕಡೆಗೆ ಮುಖವನ್ನು ಹೊರಳಿಸಿ 'ಇವನನ್ನು ಇಂದಿನಮಟ್ಟಿಗೆ ತಿರುಗಿ ಲಕಾಪಿಗೆ ಒಯ್ಯಬೇಕು' ಎಂದು ಆಜ್ಞೆಯನ್ನು ಮಾಡಿದರು.

ಅಪರಾಧಿಯನ್ನು ಕಾರಾಗೃಹಕ್ಕೆ ತೆಗೆದುಕೊಂಡು ಹೋದಮೇಲೆ ಮತ್ತೆ ಅವರು ವಿಚಾರಿಸತೊಡಗಿದರು. 'ಈ ವ್ಯಕ್ತಿಯನ್ನು ಮೃತ್ಯುವಿನ ದಂಡದಿಂದ ದಂಡಿಸಲು ನನಗಾವ ಅಧಿಕಾರವೂ ಇಲ್ಲ. ಆದರೆ ಕಾನೂನಿನಲ್ಲಿ ಈತನಿಗಾಗಿ ಒಂದೇ ಒಂದು ನಿರ್ಧಾರವು ನಿರ್ಧರಿಸಲ್ಪಟ್ಟಿದೆ. ಅದಾವದೆಂದರೆ—'ಮೃತ್ಯು'. ನ್ಯಾಯಾಧೀಶನ ಕೈಯಲ್ಲಿ ಅಪರಾಧಿಗೆ ಕೊಡಬೇಕಾಗಿರುವ ಈ ಚಿರಶಾಂತಿಯಲ್ಲದೆ ಬೇರೆ ಮತ್ತಾವ ಉಪಶಾಂತಿಯ ವಿಧಾನಗಳಿಲ್ಲ. ಹಾಗಾದರೆ ಇದಕ್ಕೆ ಉಪಾಯವೇನು? ಉಂಟು; ಉಪಾಯವುಂಟು. ಇಲ್ಲದೆಯಿಲ್ಲ. ಅಪರಾಧಿಯನ್ನು ಮೃತ್ಯುವಿನ ದಂಡದಿಂದ ದಂಡಿಸಬೇಕು. ಇಲ್ಲವೆ ಅಪರಾಧಕ್ಕೆ ಮೂಲಕಾರಣನಾದವನು ಪದತ್ಯಾಗ ಮಾಡಬೇಕು. ಇದುವೆ ಆ ಉಪಾಯ. ಮನುಷ್ಯನಿಗೆ ಎರಡನೆಯವರ ತಪ್ಪಿನ ವಿಚಾರ ಮಾಡಲು ಶಕ್ಯವಿದೆಯೆ? ಸಾಮಾನ್ಯರ ಸಂಬಂಧವು ನನಗೇಕೆ? ನನ್ನ ಪ್ರಶ್ನೆ ಒಂದೇ ಒಂದು. ಅದಾವುದೆಂದರೆ:– 'ನಾನು ಈ ನ್ಯಾಯವನ್ನು ನಿರ್ಧರಿಸಬಲ್ಲೆನೊ?' ಅದಕ್ಕೆ ನನ್ನ ಅಂತರಾಳದಿಂದ ಹೊರಡುವ ಉತ್ತರವೆಂದರೆ:–'ಇಲ್ಲ' ನನ್ನ ಅಪರಾಧಗಳ ವಿಷಯದಲ್ಲಿಯೇ ನಾನು ಹಗಲೂ ರಾತ್ರಿಯೂ ವಿಚಾರಿಸಬೇಕು!!!

ಇನ್ನು ಮುಂದೆ ಹೆರವರ ತಪ್ಪುಗಳನ್ನು ವಿಚಾರಿಸುವುದಕ್ಕೆ ನನ್ನ ಜನ್ಮವಿಲ್ಲ!'

ಅಪ್ಪಾಸಾಹೇಬರ ತಲೆಯಲ್ಲಿ ವ್ಯಾಪಿಸಿದ ಈ ಯೋಚನೆಯು ಬೇಗನೆ ಆ ದಿನದ ಕೆಲಸವನ್ನು ಮುಕ್ತಾಯಗೊಳಿಸಿತು.

ವಿಚಾರಗಳ ಅಬ್ಬರದಲ್ಲಿಯೇ ಅವರು ಮನೆಗೆ ಬಂದಿದ್ದಾರೆ. ಎಷ್ಟೋ ಹೊತ್ತು ಯಾರ ಕೂಡ ಮಾತಾಡದೆ ತಮ್ಮ ಕೋಣೆಯಲ್ಲಿ ಮೌನವಾಗಿ ಕುಳಿತು ಮತ್ತೆ ಮತ್ತೆ ವಿಚಾರಿಸಿದರು. ವಿಚಾರಗಳ ಅಂತ್ಯಕ್ಕೆಲ್ಲಾ ಒದುವುದು ಒಂದೇ ಫಲಿತಾಂಶ; ಒಂದೇ ಒಂದು ಉತ್ತರ. **'ನನ್ನ ಅಪರಾಧಗಳ ವಿಷಯವಾಗಿ ನಾನು ಹಗಲೂ ಇರುಳೂ ವಿಚಾರಿಸಬೇಕು. ಹೆರವರ ತಪ್ಪಿಗಾಗಿ ವಿಚಾರಿಸಲು ನನಗಾವ ಬಾಧ್ಯತೆಯೂ ಇಲ್ಲ'**

ಇದೇ ಮಾತನ್ನು ಮತ್ತೆ ಮತ್ತೆ ವಿಚಾರಿಸಿದರು. 'ಹಾಗಾದರೆ ಇಂದಿನಿಂದಲೇ ನಾನು ಚಾಕರಿಯಿಂದ ಮುಕ್ತನಾಗಬೇಕಲ್ಲವೆ?' ಎಂದು ಬಗೆದರು. ಬಗೆದು, ಒಡನೆಯೇ ಹೆಂಡತಿಯನ್ನು ಕರೆದು ಹೇಳಿದರು– 'ನಾನು ಇಂದಿನಿಂದ ನನ್ನ ಕೆಲಸವನ್ನು ಪರಿತ್ಯಾಗ ಮಾಡಿದೆ. ನಾನು ಯಾರ ತಪ್ಪಿನ ವಿಚಾರವನ್ನೂ ಮಾಡಲಾರೆ'

ಅವರ ಹೆಂಡತಿ ಬೆರಗಾಗಿ ಕೇಳಿದರು 'ಇದೇನು?' ಎಂದು.

ಅವರು ಹೇಳಿದರು:—'ಹೆರವರ ತಪ್ಪಿನ ವಿಚಾರ ಮಾಡಲು ನನಗೆ ಯಾವ ಅಧಿಕಾರವೂ ಇಲ್ಲ'

ಅದಕ್ಕೆ ಅವರ ಹೆಂಡತಿ ಪಾರ್ವತೆಮ್ಮನವರು:—'ಎಷ್ಟು ಮಂದಿ ನ್ಯಾಯಾಸನದಲ್ಲಿ ವಿರಾಜಿಸುವರಲ್ಲ!' ಎಂದು.

ಅದಕ್ಕೆ 'ಅವರ ಗೊಡವೆ ನನಗಿಲ್ಲ' ಎಂದು ಅಪ್ಪಾಸಾಹೇಬರು ಅಂದರು.

'ತಾವು ನ್ಯಾಯಾಸನದಲ್ಲಿ ಇರಬೇಕೋ ಬಿಡಬೇಕೋ ಎಂಬುದನ್ನು ನಿರ್ಧರಿಸಲು ನಾನೇನೂ ಬಲ್ಲವಳಲ್ಲ. ತಮಗೆ ಹೆಂಡಿರುಮಕ್ಕಳು ಇದ್ದಾರೆಂಬುದನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಂಡು ಯಾವ ನಿರ್ಧಾರವನ್ನಾದರೂ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಇವರ ಭರಣಪೋಷಣದ ಭಾರವು ತಮ್ಮ ಮೇಲಿದೆ ಎಂಬುದನ್ನು ತಾವು ಮರೆಯಬಾರದು. ತಾವು ಸರ್ವಸ್ವವನ್ನೆಲ್ಲಾ ಈ ಮೊದಲೇ ದಾನ ಮಾಡಿ ಬಿಟ್ಟಿರುವಿರಿ. ಪುನಃ ಈಗ ನ್ಯಾಯಾಸನವನ್ನು ಬಿಟ್ಟರೆ ನಮ್ಮ ಪ್ರಪಂಚವು ಸಾಗಬೇಕಾದರೂ ಹೇಗೆ?'

ಆಗ ಅಪ್ಪಾಸಾಹೇಬರು 'ನಮ್ಮ ಸ್ವಗ್ರಾಮದಲ್ಲಿ ಇಸ್ಟೇಟು ಇದ್ದೇ ಇದೆಯಲ್ಲ!' ಎಂದರು.

ಅದಕ್ಕವರ ಹೆಂಡತಿ ಶ್ಲೇಷವ್ಯಂಜಕ ಸ್ವರದಿಂದ ಅಂದರು– 'ಅದಂತೂ ಇದ್ದೇ ಇದೆ! ನಿಮಗೇನು ಒಕ್ಕಲಿಗರಂತೆ ಹೊಲಗಳಲ್ಲಿ ದುಡಿಯಲಿಕ್ಕೆ ಬರುವದೆ? ಎತ್ತುಗಳನ್ನು ಕಟ್ಟಿಕೊಂಡು ನೇಗಿಲು ಹೊಡಿಯುವಿರಾ? ಗಾಳಿಬಿಸಿಲುಗಳಲ್ಲಿ ರಕ್ತ ನೀರು ಮಾಡಿ ಬೆವರು ನೆಲಕ್ಕೆ ಸುರಿಸಿದಾಗ ಹೊಟ್ಟೆಗಾದರೆ ನೆತ್ತಿಗಿಲ್ಲಾ ಎನ್ನುವಷ್ಟು ಕಾಳುಕಡಿ ಬರುತ್ತಿರುವಾಗ ನಮ್ಮದೆಲ್ಲಾ ಹೇಗೆ ಸಾಗಬೇಕು? ಆ ಹೊಲದಿಂದ ನಮ್ಮ ಒಪ್ಪತ್ತಿನ ಗಂಜಿಯೂ ಕೂಡ ಸಾಗಲಾರದು.'

ಅದಕ್ಕೆ ಅಪ್ಪಾಸಾಹೇಬರು ಯಾವ ಉತ್ತರವನ್ನೂ ಕೊಡದೆ ಮೌನವಾಗಿ ಏನೇನೋ ಆಲೋಚಿಸುತ್ತ ಕುಳಿತರು. ಆದರೆ ಅದೇ ದಿನವೇ ತಮ್ಮ ಮೇಲಧಿಕಾರಿಗಳಿಗೆ ತಮ್ಮ ಸ್ಥಾನಪರಿತ್ಯಾಗದ ಪತ್ರವನ್ನು

ಕಳಿಸಿಕೊಟ್ಟರು. ಆದರಲ್ಲಿ ಅವರು ಪದತ್ಯಾಗವನ್ನು ಮಾಡಿದ ಬಗ್ಗೆ ಯಾವ ಕಾರಣವನ್ನೂ ಬರೆದಿರಲಿಲ್ಲ.

ಹೀಗೆ ಅಪ್ಪಾಸಾಹೇಬರು ಆಕಸ್ಮಿಕವಾಗಿ ಸ್ಥಾನ ಪರಿತ್ಯಾಗ ಮಾಡಿದ ಬಗ್ಗೆ ಕಾರಣಗಳನ್ನು ತಿಳಿದುಕೊಳ್ಳುವುದಕ್ಕಾಗಿ ಕೆಲದಿನಗಳಲ್ಲಿ ಮೇಲಧಿಕಾರಿಗಳು ಸ್ವತಃ ತಾವೇ ಇಲ್ಲಿಗೆ ಬಂದರು. ಮುಪ್ಪುಬಂದಿದ್ದರಾಗಲೀ ರೋಗರುಜುವೆಗಳ ಕಾರಣಕ್ಕಾಗಲೀ ನೌಕರಿಯನ್ನು ಪರಿತ್ಯಜಿಸಿದ್ದರೆ ಅವರಿಗೆ ಪೆನ್ಸನ್ ದೊರೆಯುತ್ತಿದ್ದಿತು. ಆದರೆ ಅದಾವ ಕಾರಣಗಳೂ ಅವರಿಗೆ ದೊರೆಯಲಿಲ್ಲ.

ಅಪ್ಪಾಸಾಹೇಬರಿಗೆ ಮೇಲಧಿಕಾರಿಗಳು ಕೇಳಿದಾಗ 'ನನಗಿನ್ನು ನ್ಯಾಯಾಧೀಶನ ಕೆಲಸ ಮಾಡಲು ಶಕ್ಯವಿಲ್ಲ' ಎಂದರು. ಕಾರಣಗಳನ್ನೇನೂ ತೋರಿಸದೆ ಈ ರೀತಿಯಾಗಿ ಅವರು ಹೇಳಿದ ಮಾತು ಮೇಲಧಿಕಾರಿಗಳಿಗೆ ವಿಸ್ಮಯವನ್ನೂ ಕುತೂಹಲವನ್ನೂ ಹುಟ್ಟಿಸಿತು. ಕಡೆಗೆ ಅವರು ತಮ್ಮ ವಿಸ್ಮಯಪೂರಿತ ವಾಣಿಯಿಂದ ಅಪ್ಪಾಜಿಯವರಿಗೆ ಸ್ಥಾನ ಪರಿತ್ಯಾಗದ ಕಾರಣವನ್ನು ಕೇಳಿದರು. ಅದಕ್ಕೆ ಅಪ್ಪಾಸಾಹೇಬರು 'ಅನ್ಯರ ಅಪರಾಧಗಳನ್ನು ವಿಚಾರಿಸಲು ನನಗಾವ ಅಧಿಕಾರವೂ ಇಲ್ಲ' ಎಂದು ಉತ್ತರಕೊಟ್ಟರು. ಇವರ ಈ ಅವ್ಯವಹಾರ್ಯ ಉತ್ತರದ ರೀತಿಯನ್ನು ನೋಡಿ ಆ ಮೇಲಧಿಕಾರಿಗಳಿಗೆ ಒಂದು ಸಂದೇಹ ಉಂಟಾಯಿತು. 'ಇವರಿಗೆ ಭ್ರಮೆ ಏನಾದರೂ ಆಗಿದೆಯೆ?' ಎಂದು ಅವರು ಮನಸಿನಲ್ಲಿ ಅಂದುಕೊಂಡರು. ಹೀಗೆ ಅಂದುಕೊಂಡರೂ ಶಾಂತವಾದ ಭಾವದಿಂದ ಅಪ್ಪಾಸಾಹೇಬರಿಗೆ ಹೇಳಿದರು:—'ತಾವು ದೊಡ್ಡ ಹುದ್ದೇದಾರರು. ಸರಕಾರದ ಉಪ್ಪನ್ನುಂಡವರು; ಅಲ್ಲದೆ ಅದರ ಹಿತಕ್ಕಾಗಿ ತಾವು ಪ್ರತಿಜ್ಞೆ ಮಾಡಿದವರು. ಅದರ ಮಾಂಗಲ್ಯಕ್ಕಾಗಿ ಪರಿಪಾಲಿಸ-

ಬೇಕಾದ ಆದರ ಕಾನೂನುಗಳನ್ನು ಪರಿಪಾಲಿಸದೆ ಹೀಗೆ ಅನಿಚ್ಛೆಯುಳ್ಳವ ರಾದ ಕಾರಣವೇನು?'

ಅಪ್ಪಾಸಾಹೇಬರು ಪ್ರತ್ಯುತ್ತರದಲ್ಲಿ ತಿಳಿಸಿದ್ದು:- 'ಸರಕಾರವು ಕಾನೂನುಗಳನ್ನು ಪ್ರತಿಪಾಲಿಸುವ ಜನರನ್ನೆಷ್ಟೋ ಹೊಂದಬಹುದು. ಸತ್ಯದ ಅನುಸಂಧಾನವೇ ಬುದ್ಧಿವಂತನಿಗೆ ಮುಖ್ಯ ಪುರುಷಾರ್ಥವಾಗಿದೆ. ಅದಕ್ಕಾಗಿ ನಾನದನ್ನು ಕೈಕೊಳ್ಳುವೆ'

'ವಿವೇಕದಿಂದ ತಾವು ನ್ಯಾಯಗಳನ್ನು ವಿವೇಚಿಸಿದ್ದಾದರೆ ಸತ್ಯದ ಅನುಸಂಧಾನವನ್ನೇ ಮಾಡಿದಂತಾಗುವದಿಲ್ಲವೆ?'

ಅದಕ್ಕೆ ಅಪ್ಪಾಸಾಹೇಬರು 'ಆ ಸತ್ಯವನ್ನು ನನ್ನಲ್ಲೇ ಅರಸ ಬೇಕಾಗಿದೆ. ಅನ್ಯರಲ್ಲಿ ಅಲ್ಲ' ಎಂದು ಉತ್ತರಕೊಟ್ಟರು.

ಮೇಲಧಿಕಾರಿಗಳು ಬಹುರೀತಿಯಾಗಿ ಪ್ರಯತ್ನಿಸಿದರು. ಅಧಿಕಾರ ದಿಂದ ಚ್ಯುತರಾದರೆ ಮುಂದೆ ಬರುವ ಸಂಕಟದ ಚಿತ್ರಗಳನ್ನೆಲ್ಲ ಇವರ ಕಣ್ಣೆದಿರು ಕಟ್ಟುವಂತೆ ಚಿತ್ರಿಸಿ ನೋಡಿದರು. ಕಡೆಗೂ ಬಗೆಹರಿಯಲಿಲ್ಲ. ಅವರು ಹೇಳುವ ಮಾತುಗಳಿಗೆಲ್ಲ ಇವರು ಒಂದೇ ಒಂದು ಉತ್ತರವನ್ನು ಕೊಡುತ್ತಿದ್ದರು. 'ಹಗಲು ರಾತ್ರಿಗಳೆನ್ನದೆ ನನ್ನ ಅಪರಾಧಗಳನ್ನೇ ವಿಚಾರಿಸಲು ಬದ್ಧಕಂಕಣನು' ಎಂಬುದೇ ಆ ಉತ್ತರವು. ಕಡೆಗೂ ಬಗೆಹರಿಯದಾಗ ಆ ಮೇಲಧಿಕಾರಿಗಳು ಈತನು ವೃಥಾ ತರ್ಕ ಮಾಡುತ್ತಾನೆಂದು ತಿಳಿದುಕೊಂಡು 'ಹೀಗೆ ಮಾಡುವುದರಿಂದ ನಿಮಗೆ ಯಾವ ಕಲ್ಯಾಣವೂ ಉಂಟಾಗದು' ಎಂಬ ಕಡೆಯ ಮಾತನ್ನೊಂದು ಹೇಳಿ ಅವರ ಪದತ್ಯಾಗ ಪತ್ರವನ್ನು ತೆಗೆದುಕೊಂಡು ಹೋದರು. ಅಪ್ಪಾಸಾಹೇಬರು ಪೆನ್ಶನ್ ಇಲ್ಲದೆ ಅಂದೇ ಕೆಸಲದಿಂದ ನಿವೃತ್ತರಾದರು.

ಈಗ ಅಪ್ಪಾಸಾಹೇಬರು ಕೆಲಸವಿಲ್ಲದೆ ಮನೆಯಲ್ಲಿ ಕುಳಿತಿದ್ದಾರೆ. ಅವರಿಗೆ ಬರುತಿದ್ದ ಆ ವೇತನವು ಅಂದಿಗೇ ಕಟ್ಟಾಗಿಹೋದ್ದರಿಂದ ಅದರ ಹಾದಿಯನ್ನು ಕಾಯುವ ಕಾರಣವಂತೂ ಇಲ್ಲವೇ ಇಲ್ಲ. ತಮ್ಮ ಧನ ದೌಲತ್ತುಗಳಲ್ಲಿ ಬಹುಭಾಗವನ್ನು ಈ ಮೊದಲೇ ಸೂರೆಮಾಡಿದ್ದ ಅಪ್ಪಾ ಸಾಹೇಬರಿಗೆ ಇನ್ನು ಎಲ್ಲಿಂದ ಹಣ ಬರಬೇಕು? ಅವರ ಮನೆಯ ವೆಚ್ಚವು ಹೇಗೆ ಸಾಗಬೇಕು? ಇದಾವುದನ್ನೂ ಅವರು ವಿಚಾರಿಸುವ ಗೊಡವೆಗೇ ಹೋದಂತೆ ಕಾಣಲಿಲ್ಲ. ಅಂತೂ ಕೆಲಕಾಲ ಹೇಗೋ ಕಳೆದರು. ಅವರು ಆಗ ವಿಚಾರಿಸುತ್ತಿರುವುದು ಬರಿ ತಮ್ಮ ಒಳಜೀವನದ ವಿಷಯದಲ್ಲಿಯೆ. ಪತ್ನಿಯವರು ಕರೆದಾಗ ಇವರು ಊಟಕ್ಕೆ ಹೋಗುವರು. ಇಲ್ಲದಿದ್ದರೆ ಮರೆತೇ ಕೂಡುವರು.

ಹೀಗೆ ದಿನ ಕಳೆದು ಹೋದಂತೆಲ್ಲ ಮನೆಯ ವೆಚ್ಚಗಳು ಹೆಚ್ಚೆಚ್ಚು ಭಾರವಾಗತೊಡಗಿದವು. ಆಳುಗಳು ತಮ್ಮ ವೇತನವನ್ನು ಬೇಡತೊಡಗಿದರು. ಅವರಿರುವ ಮನೆಯವರು ಬಾಡಿಗೆಗಾಗಿ ಎಡತಾಕಹತ್ತಿದರು. ಅಲ್ಲದೆ ಜೀನಸುಗಳನ್ನು ಕೊಟ್ಟ ಅಂಗಡಿಯವರು ತಮ್ಮ ಲೆಕ್ಕವನ್ನು ತೀರಿಸಲು ಕೇಳಲಾರಂಭಿಸಿದರು.

ಇದನ್ನೆಲ್ಲ ನೋಡಿ ಪಾರ್ವತೆಮ್ಮನವರು ದಿನದಿನಕ್ಕೆ ಚಿಂತಾಗ್ನಿಯಿಂದ ಬೇಯುತೊಡಗಿದರು. ಅವರಿಗಾವುದೂ ತಿಳಿಯದಾಗಿ ವಿಮೂಢರಾಗಿ ಕುಳಿತಾಗ 'ಎಂಥ ಕಾಲವು ಬಂದಿತಲ್ಲಾ! ದೇವರು ನಮ್ಮವರಿಗೆ ಎಂಥ ಬುದ್ಧಿಯನ್ನು ಕೊಟ್ಟನೊ!' ಎಂದು ಒಂದೇಸವನೆ ಶೋಕಿಸುವರು. ಹಗಲು ರಾತ್ರಿಯೆನ್ನದೆ 'ಇನ್ನುಮುಂದೆ ಹೇಗೆ ಮಾಡುವದು?' ಎಂದು ಚಿಂತಿಸುವರು.

ಒಂದು ದಿನ ಅಪ್ಪಾಸಾಹೇಬರು ತಮ್ಮ ವಿಚಾರದಲ್ಲಿಯೇ ತಾವು

ಕುಳಿತಾಗ ಇವರು ಅತ್ತುತ್ತು ಕೆಂಪಾದ ಕಣ್ಣುಗಳನ್ನು ಸೆರಗಿನಿಂದ ಒರಿಸಿಕೊಳ್ಳುತ್ತ ಬಾಗಿಲಕಡೆಗೆ ಬಂದು ನಿಂತಿದ್ದರು. ಕಿಡಿಕಿಯಿಂದ ಬರುವ ಸುಳಿಗಾಳಿಯು ಮೆಲ್ಲಡಿಯಿಡುತ್ತ ಬಾಗಿಲ ಬಳಿಯಿಂದ ಹಾಯ್ದು ಹೋಗುವಾಗ, ಎಂದೋ ಎರೆದುಕೊಂಡಿದ್ದ ಪಾರ್ವತಿಮ್ಮನವರ ಒಣಗಿದ ಮುಂಗೂದಲುಗಳನ್ನು ತೂರಾಡಿ ಅಪ್ಪಾಸಾಹೇಬರ ಕಣ್ಣಿಗೆ ಮನೆತನದ ದುರ್ದಶೆಯನ್ನು ತೋರಿಸಬೇಕೆಂದಿತು. ಆದರೆ ಇತ್ತಕಡೆಗೆ ಲಕ್ಷ್ಯವೇ ಇಲ್ಲದ ಅಪ್ಪಾಸಾಹೇಬರು ಇದಾವುದನ್ನೂ ನೋಡಲೇ ಇಲ್ಲ. ಆಗ ಪಾರ್ವತಿಮ್ಮನವರು ನೆಟ್ಟಗೆ ಒಳಗೆ ಹೋಗಿ ಅವರ ಸನಿಹದಲ್ಲಿಯೇ ನಿಂತರು. ಆದರೂ ಅವರು ನೋಡಲಿಲ್ಲ. ಅವರ ಮೈಗೇ ಕೈ ಹಚ್ಚಿ 'ಏನು ಆಲೋಚಿಸುತ್ತಲಿದ್ದೀರಿ?' ಎಂದು ಕೇಳಿದರು. ಅವರು ಕೇಳಿದ್ದು ಈಗ ಒಂದಿಷ್ಟು ಇವರ ಕಿವಿಗೆ ಕೇಳಿಸಿತಾದರೂ ಹೀಗೆ ಒಂದಿಷ್ಟು ಹೊರಳಿ ನೋಡಿ ಪುನಃ ವಿಚಾರಮಗ್ನರಾಗಿಬಿಟ್ಟರು. ಆಗ ಪಾರ್ವತಿಮ್ಮನವರು ಅವರನ್ನು ಚೆನ್ನಾಗಿ ಎಚ್ಚರಿಸಿ 'ಹೀಗೇಕೆ ಮಾಡುತ್ತಿರುವಿರಿ?' ಎಂದು ಕೇಳಿದರು. ಈಗ ಅವರು ತುಂಬಾ ಎಚ್ಚತ್ತು ಮೋರೆ ಹೊರಳಿಸಿ ಕಣ್ತುಂಬಾ ನೋಡಿದರು. ಇಂಥ ದುರ್ದಶೆಗೀಡಾದ ರೂಪವನ್ನು ಈ ಮೊದಲು ಅವರು ಎಂದೂ ಕಂಡಿರಲಿಲ್ಲ. ಅದನ್ನು ನೋಡಿ ವಿಷಾದವಾಗುವುದಕ್ಕೆ ಬದಲು ನಗೆಯ ಮಿಂಚು ಒಮ್ಮೆ ಮಿಂಚಿಹೋಯ್ತು. ಆ ಮಿಂಚೂ ಒಂದಿಷ್ಟು ಹೆಚ್ಚು ಹೊತ್ತು ಉಳಿದಿದ್ದರೆ ಅವರ ಹೆಂಡತಿಗೆ ಅದೊಂದು ಹಿಗ್ಗಿನ ಕಡಲಾಗುತ್ತಿತ್ತು. ಆದರೆ ಅದು ಪಾರ್ವತಿಮ್ಮನವರ ಹೃದಯಕ್ಕೆ ಇಲ್ಲದ ಆಶೆಯೊಂದನ್ನು ಹಚ್ಚಿ ಹಾ ಅನ್ನುವಷ್ಟರಲ್ಲಿ ಮರೆಯಾಗಿ ಹೋಯಿತು. ಪುನಃ ಅದೇ ಗಾಂಭೀರ್ಯ. ಆಗ ಪಾರ್ವತಿಮ್ಮನವರು ಇನ್ನೇನು ಮಾಡಬೇಕೆಂದು ಆಲೋಚಿಸಿ ಇನ್ನಿಷ್ಟು ಅವರ

ಸಮೀಪಕ್ಕೆ ಹೋದರು. 'ಯಾವಾಗಲೂ ತಾವು ಇಷ್ಟೊಂದು ತದೇಕ ಚಿತ್ತರಾಗಿ ಏನು ವಿಚಾರಿಸುವುದು?' ಎಂದು ಕೇಳಿದರು.

ಆಗ ಅಪ್ಪಾಸಾಹೇಬರು ತಮ್ಮ ಮಾನಸಾಂತರದ ಸಾದ್ಯಂತವನ್ನೆಲ್ಲ ವಿವರಿಸಿ ಹೇಳಿ 'ಸತ್ಯದ ಅನುಸಂಧಾನಕ್ಕಿಂತ ಮುಖ್ಯವಾದ ಪುರುಷಾರ್ಥವು ಮನುಷ್ಯನಿಗೆ ಇಲ್ಲ. ಜೀವನವು ಅಸ್ಥಿರವಾದದ್ದು. ಪ್ರತಿ ನಿಮಿಷದಲ್ಲಿಯೂ ನಾವು ಮೃತ್ಯುವಿನ ಪಥದಲ್ಲಿ ಅಡಿಯಿಡುತ್ತಲಿರುವುದನ್ನು ಮರೆತು ಪರಕಾಲವನ್ನು ನಷ್ಟಮಾಡಿಕೊಂಡಿದ್ದೇವೆ. ಆ ನಮ್ಮ ಪರಕಾಲದ ಕಲ್ಯಾಣಕ್ಕಾಗಿಯೇ ನಾವೀಗ ದುಡಿಯಬೇಕು. ನೀನೂ ಕೂಡ ನಿನ್ನ ಪರಕಾಲದ ವಿಷಯವಾಗಿ ನೆನಸಿಕೊ. ಇನ್ನು ನಾನು ನಡೆಯಬೇಕಾದ ಹಾದಿಯೊಳಗೆ ನೀನೂ ಸಹಾಯಕಳಾಗಿ ನನ್ನ ಹೆಜ್ಜೆಯಲ್ಲಿ ಹೆಜ್ಜೆಯಿಡಬೇಕು.' ಎಂದು ತಮ್ಮ ಮನೋಗತವನ್ನೆಲ್ಲ ತಿಳಿಸಿದರು. ಅದೆಲ್ಲಾ ಪಾರ್ವತೆಮ್ಮನವರ ಮನಸ್ಸಿಗೆ ಎಷ್ಟೂ ಹಿಡಿಸದು. ಹಿಂದೆ ಕಳೆದು ಹೋದ ಸುಖದ ಚಿತ್ರಗಳನ್ನೆಲ್ಲ ನೆನೆನೆನಿಸಿ ವ್ಯಥೆಪಟ್ಟು ಕೊನೆಗೆ ಅವರು ತಮ್ಮ ಯಜಮಾನರಿಗೆ ಹೀಗೆ ಹೇಳಿದರು—

'ಸತ್ತ ಮೇಲೆ ಏನಾಗುವುದೋ ಅದನ್ನಾರು ಬಲ್ಲರು! ಇದ್ದಾಗ ಉಂಡುಟ್ಟು ಸುಖಪಡೋಣ. ನಾವು ಗಂಡಹೆಂಡರು ಅಂದು ಬಯಸುತ್ತಿದ್ದ ಆ ಬಯಕೆಗಳನ್ನೆಲ್ಲ ಈಡೇರಿಸಿಕೊಳ್ಳದೆಯೆ ಈ ಲೋಕವನ್ನು ಬಿಟ್ಟು ಹೋಗುವುದೆ? ಇಲ್ಲಿ ಸುಖವಿಲ್ಲವೆ? ಮಗುವಿನ ಲಗ್ನವನ್ನು ಸಂಭ್ರಮದಿಂದ ಮಾಡಬೇಕೆನ್ನುವ ನಿಮ್ಮ ಆ ವಿಚಾರ ಈಗ ಎಲ್ಲಿ ಅಡಗಿತು? ಬೇಡ, ಈ ಸನ್ಯಾಸದ ವಿಚಾರಗಳು ನಮಗೆ ಬೇಕಾಗಿಲ್ಲ. ಇನ್ನೇನಾದರೂ ಮಾಡಿರಿ ಆದರೆ ಈ ಬೂದಿಬಡಕರ ವಿಚಾರವನ್ನು ಮಾತ್ರ ಬಿಟ್ಟು ಪುಣ್ಯಕಟ್ಟಿಕೊಳ್ಳಿರಿ.' ಎಂದು ಪರಿಪರಿಯಾಗಿ

ಬೇಡಿಕೊಂಡರು. ಹೀಗೆ ಅಪ್ಪಾಸಾಹೇಬರ ವಿಚಾರಕ್ಕೂ ಪಾರ್ವತೆಮ್ಮ ನವರ ವಿಚಾರಕ್ಕೂ ಸಾವಿರ ಹರದಾರಿಯ ಅಂತರ ಬಿತ್ತು.

ಈಗ ಅಪ್ಪಾಸಾಹೇಬರಿಗೆ ತಾವಿರುವ ಮನೆಯ ಬಾಡಿಗೆಯನ್ನು ಕೊಡಲು ಶಕ್ಯವಾಗದಿರಲು ಅದನ್ನು ಬಿಟ್ಟುಕೊಡುವ ವಿಚಾರವನ್ನೇ ಮಾಡಿದರು. ಸುಖಶಾಂತಿಮಯವಾದ ಆ ಮನೆಯನ್ನೂ, ದಾಸದಾಸಿ ಯರನ್ನೂ ಬಿಟ್ಟುಕೊಡುವಾಗ ಪಾರ್ವತೆಮ್ಮನವರಿಗೆ ಎಷ್ಟೂ ಸಹಿಸಿ ಕೊಳ್ಳುವುದಾಗಲಿಲ್ಲ. ಅವರ ಕಣ್ಣೊಳಗಿಂದ ಧಾರೆಧಾರೆಯಾಗಿ ಹರಿಯುವ ನೀರನ್ನು ನೋಡಿದರೆ ನಾವು ಅವರ ನೋವನ್ನು ಒಂದಿಷ್ಟು ಕಲ್ಪಿಸಿ ಕೊಳ್ಳಬಹುದು. ಅವರು ತಮ್ಮ ಮಗುವಿನ ಭವಿಷ್ಯವನ್ನು ನೆನಿಸಿಕೊಂಡು ಒಳಗೊಳಗೇ 'ಕಂದಾ! ನಿನ್ನ ಹಡೆದವರ ದೆಸೆಯಿಂದಲೇ ನಿನಗೆ ಇಂದಿ ನಿಂದ ದುರ್ಗತಿಯು ಆರಂಭವಾಯಿತಪ್ಪಾ!' ಎಂದು ರೋದಿಸಿದರು. ದಾಸದಾಸಿಯರಿಗೆ–'ಹೋಗಿರೆಮ್ಮಾ! ನಮ್ಮ ದುರ್ದೈವವು ನಿಮ್ಮನ್ನು ಇಂದಿಗೆ ಅಗಲಿಸಿತು. ಹಿಂದೆ ಅಧಿಕಾರದ ಮದದಲ್ಲಿ ನಿಮಗೇನಾದರೂ ಬಿರಸು ಮಾತಾಡಿ ನಾವು ನಿಮ್ಮ ಮನ ನೋಯಿಸಿದ್ದರೆ ಕ್ಷಮಿಸಿರೆಮ್ಮಾ! ನೀವು ಎಲ್ಲಿಯಾದರೂ ಇನ್ನು ಮುಂದೆ ಸುಖವಾಗಿ ಇದ್ದುಬಿಡಿರಿ' ಎಂದು ಕಣ್ಣೀರಿಡುತ್ತ ಹೇಳಿದರು. ಇದನ್ನು ಕೇಳಿದಾಗ ಅವರಿಗೂ ದುಃಖ ತಡೆಯಲಿಲ್ಲ. ಪರಿಪರಿಯಾಗಿ ಅವರೂ ಕಳವಳಿಸಿ ಕಂಬನಿಗರೆದರು.

ಕೊನೆಗೆ ಮನೆಬಿಟ್ಟು ನಡೆದಾಗ ಬೀದಿಯ ಮೇಲಿನ ಭಿಕ್ಷುಕರನ್ನು ಕಂಡು ಪಾರ್ವತೆಮ್ಮನವರು ತಮ್ಮ ಯಜಮಾನರಿಗೆ–'ನಾವು ಭಿಕ್ಷುಕ ರಂತಾದರೂ ಆಗಲೊಲ್ಲೆವೇಕೆ; ಆದರೆ ತಮ್ಮ ಈ ಭಿಕ್ಷುಕರಾದರೂ ನಮ್ಮಂತೆ ಸುಖಿಗಳಾಗಿ ಇದ್ದರೆ ಸಾಕು!' ಎಂದು ಮಾರ್ಮಿಕವಾಗಿ ಆಡಿದರು. ಆದಕ್ಕೆ ಅಪ್ಪಾಸಾಹೇಬರು ಈ ಮಾತಿಗೆ ಉತ್ತರ ಕೊಡುವ

ಆಗತ್ಯವನ್ನೇನೂ ಕಾಣಲಿಲ್ಲವಾದರೂ ಏನೋ ಒಂದು ಮಾತು ಹೇಳೋಣ ವೆಂದು ಬಗೆದು–' ಭಿಕ್ಷುಕರಿಗಾಗಿ ನಾನು ಏನನ್ನೂ ಕೊಟ್ಟಿಲ್ಲ. ನನ ಗಾಗಿಯೇ ನಾನು ಕೊಟ್ಟಿದ್ದೇನೆ ' ಎಂದು ಗಂಭೀರವಾಗಿ ನುಡಿದರು.

ತಮ್ಮ ಪತ್ನಿಯವರನ್ನೂ ಮಗುವನ್ನೂ ಕರೆದುಕೊಂಡು ತಮ್ಮ ಸ್ವಗ್ರಾಮಕ್ಕೆ ಅಪ್ಪಾಸಾಹೇಬರು ಹೊರಟಿದ್ದಾರೆ. ಆಗಿನ ಪಾರ್ವತೆಮ್ಮ ನವರ ದುಃಖಕ್ಕೆ ಪಾರವಿಲ್ಲ. ಮಾನಸಿಕ ದುಃಖವಂತೂ ಬೇರೆ ಇರಲಿ, ಬಿಸಿಲು ಮಾರಿಯನ್ನೇ ಕಾಣದ ಅವರು ಇಂದು ಕಾಲುನಡಿಗೆಯಾಗಿ ಬಿಸಿಲುಗಾಳಿಗಳಲ್ಲಿ ಹೊರಟಿರುವುದು ಅವರ ದುಃಖವನ್ನು ಇಮ್ಮಡಿಸಿತು.

ಅವರೀಗ ದೊಡ್ಡದಾದ ದನಿತೆಗೆದು ಮಕ್ಕಳಂತೆ ಒಂದೇ ಸವನೆ ಅಳತೊಡಗಿದರು. ಅಪ್ಪಾಸಾಹೇಬರು–' ಇಂಥ ರೀತಿ ಒಳ್ಳೆಯದಲ್ಲ ' ವೆಂದು ಎಷ್ಟು ಹೇಳಿದರೂ ಅವರ ಅಳುವು ನಿಲ್ಲಲಿಲ್ಲ. ಮತ್ತೆ ಮತ್ತೆ ಅದೇ ಹಾಡು. ' ಯಾವ ನಾಲಿಗೆಯಿಂದ ನೀವು ನನ್ನ ಈ ದುಃಖವನ್ನು ನುಂಗಿಕೊಳ್ಳಲು ಹೇಳುವಿರಿ ? ನಿಮ್ಮ ಪ್ರತಾಪವೇ ಇದಕ್ಕೆಲ್ಲ ಕಾರಣ ವಲ್ಲವೇನು ! ' ಎಂದು ತಮ್ಮ ಗಂಡನಿಗೆ ಅಂದರು.

ಅವರಾಡಿದ ಕಟುವಾಕ್ಯಗಳಿಗೆ ಅಪ್ಪಾಸಾಹೇಬರು ಬಹಳೇ ಬೇಸರ ಗೊಂಡು–' ಏನೇ ! ನಾನು ಮಾತ್ರ ಇನ್ನೂ ಬೇಕಾದಷ್ಟು ಉಳಿದಿದ್ದೇ ನಲ್ಲಾ ! ನಿನಗೇನು ಯೋಚನೆ ? ಸುಮ್ಮನೆ ಮುಂದೆ ಹೆಜ್ಜೆ ಹಾಕು. ' ಎಂದು ಉಗ್ರಸ್ವರದಿಂದ ಬಲವಾಗಿ ಆಜ್ಞಾಪಿಸಿದರು. ಆ ವಾದದ ಮೂಲಕ ಪಾರ್ವತೆಮ್ಮನವರು ಬಹಳ ಕಕ್ಕಾವಿಕ್ಕಿಯಾದರು. ಗಾಬರಿ ಯಾಗಿ ತಮ್ಮ ಸ್ವಾಮಿಯ ಮುಖವನ್ನು ಬೆದರುಗಣ್ಣಿನಿಂದ ನೋಡ ತೊಡಗಿದರು. ಕಣ್ಣಿವೆಗಳ ಅಂಚಿನಗುಂಟ ನೀರಿನ ಧಾರೆ ಹಾಗೇ ಮೀರಿ ಏರುತ್ತಲೇ ಇದ್ದಿತು. ಆದರಿಂದ ಮುಂದಿನದಾವುದೂ ಆಕೆಗೆ

ತೋಚದಾಗಿದ್ದಿತು. ಆದ್ದರಿಂದ ತಮ್ಮ ಮೋರೆಯಮೇಲೆ ಸೆರಗನ್ನು ಎಳೆದು ಕೊಂಡು ರಸ್ತೆಯ ಒಂದು ಮಗ್ಗುಲಲ್ಲಿ ಮುದುಡಿಕೊಂಡು ನೆಲ ಹಿಡಿದು ಕುಳಿತು ಬಿಟ್ಟರು. ಮಗು ಕೂಡ ತಾಯಿಯ ಹತ್ತರ ಬೆಪ್ಪಾಗಿ ನಿಂತಿತು. ಸುಪ್ಪತ್ತಿಗೆಯ ಮೇಲೆ ಹೊರಳಾಡುವವರು ಈ ಹಾದಿಯ ಹುಡಿಮಣ್ಣಿನಲ್ಲಿ ಹೀಗೆ ಬಿದ್ದುಕೊಂಡ ಮಡದಿಯ ಆ ಚಿತ್ರವು ಅಪ್ಪಾಸಾಹೇಬರಿಗೂ ಪರಿಣಾಮಗೊಳಿಸದೆ ಬಿಡಲಿಲ್ಲ. ಆದರೂ ಅವರ ದೃಢ ಸಂಕಲ್ಪವು ಅವರನ್ನು ಕದಲಿಸಲಿಲ್ಲ.

ಅಪ್ಪಾಸಾಹೇಬರೂ ಹಾಗೇ ಕೆಲಹೊತ್ತು ಮೌನವಾಗಿ ನಿಂತು ಕೊಂಡು ಕೊನೆಗೆ ' ಮಗೂ, ನಾವಿಬ್ಬರೆ ಹೊರಡೋಣ. ಇವಳು ಇಲ್ಲೇ ಎಷ್ಟೊತ್ತು ಬಿದ್ದುಕೊಂಡಿರುವಳೋ ನೋಡುವಾ ನಡೆ ! ' ಎಂದು ಯುಕ್ತಿಯಿಂದ ಮಗುವಿನ ಕೈ ಹಿಡಿದುಕೊಂಡು ಮುಂದೆ ಹೆಜ್ಜೆ ಚೆಲ್ಲಿದರು. ಆಗ ಮಗೂ ಕೂಡ ಅಳತೊಡಗಿತು. ಅಳುತ್ತ ಅಳುತ್ತ ತಾಯಿಯ ಕಡೆಗೆ ನೋಡತೊಡಗಿತು. ಆಗ ಆ ತಾಯಿಯೂ ನಿರ್ವಾಹ ವಿಲ್ಲದ್ದಕ್ಕೆ ಸಾವರಿಸಿಕೊಂಡು ಎದ್ದು ಬಂದು ಮಗುವನ್ನು ಎತ್ತಿ ಕೊಂಡರು. ಆಗ ಅಪ್ಪಾಸಾಹೇಬರು ತಮ್ಮ ಮನದಲ್ಲಿ—' ಹೀಗೆಲ್ಲಾ ಮಾಡಿದರೆ ಇನ್ನು ನಡೆಯಲಾರದು. ಇನ್ನು ಇವಳನ್ನು ರಂಬಿಸುವದೇ ಬೇಡ ' ಯಾಕೆಂದರೆ ಕೇವಲ ಹೆಂಡರುಮಕ್ಕಳ ಮನವನ್ನು ಒಲಿಸುವದರಲ್ಲಿಯೇ ನನ್ನ ಧ್ಯೇಯವೆಲ್ಲ ಹಾಳಾಗಿ ಹೋದೀತು ! ' ಎಂದು ಅನ್ನುತ್ತ ಮುಂದೆ ನಡೆದುಬಿಟ್ಟರು. ಪಾರ್ವತೆಮ್ಮನವರೂ ತಮ್ಮ ಪತಿಯು ನಿರಾಶರಾಗಿ ತಮ್ಮನ್ನು ಬಿಟ್ಟು ನಡೆದಿರುವುದನ್ನು ನೋಡಿ ಗಾಬರಿಗೊಂಡು, ಇನ್ನು ಹೀಗೆಲ್ಲಾ ನೊಂದುಕೊಂಡು ಫಲವಿಲ್ಲವೆಂದು ಬಗೆದು ಯಜಮಾನರ ಬೆನ್ನುಹತ್ತಿ ಮೌನವಾಗಿ ನಡೆದರು.

ಹೀಗೆ ಹೆಂಡತಿ ಮತ್ತು ಮಗುವನ್ನು ಕಟ್ಟಿಕೊಂಡು ಅಪ್ಪಾ ಸಾಹೇಬರು ಅದೇ ದಿನ ಸಂಜೆಗೆ ಹುಟ್ಟಿದೂರಲ್ಲಿರುವ ತಮ್ಮ ಮನೆಗೆ ಬಂದುಬಿಟ್ಟರು.

## ೨

ಅಪ್ಪಾಸಾಹೇಬರಂತೂ ವಜ್ರದಂಥ ಗಟ್ಟಿಮನಸ್ಸಿನವರು. ಪಾರ್ವತೆಮ್ಮನವರೂ ನಿರ್ವಾಹವಿಲ್ಲದ್ದಕ್ಕೆ ತಮ್ಮ ಮನಸ್ಸನ್ನೂ ಯಜಮಾನರಂತೆಯೇ ಕಲ್ಲುಮಾಡಿಬಿಟ್ಟರು. ಅಂತೂ ಹೀಗೊಮ್ಮೆ ಸ್ವಂತ ಗ್ರಾಮದ ಜೀವನಕ್ಕೆ ಆರಂಭವಾಯಿತು.

ಯಜಮಾನರು ಬಂದಿದ್ದಾರೆಂದು ಗೊತ್ತಾದೊಡನೆಯೇ ಅವರ ಹೊಲವನ್ನು ಸಾಗುಮಾಡುತ್ತಿದ್ದ ರೈತನು ಹಿರಿಹಿಗ್ಗಿನಿಂದ ಭೆಟ್ಟಿಗೆ ಬಂದನು. ಯಜಮಾನರ ಪುಣ್ಯವನ್ನುಂಡು ಸ್ಥಿತಿವಂತನಾಗಿದ್ದ ಆ ರೈತನು ಧನಿಯರ ಕ್ಷೇಮಸಮಾಚಾರವನ್ನೆಲ್ಲ ಕೇಳಿಕೊಂಡ ಬಳಿಕ 'ಇನ್ನುಮುಂದೆ ಏನೇನು ಮಾಡಬೇಕೆಂದಿದ್ದೀರಿ ಧನಿಯರೇ?' ಎಂದು ಕೇಳಿದನು. ಅದಕ್ಕೆ ಅಪ್ಪಾಸಾಹೇಬರು—'ನಿನ್ನಂತೆ ನಾವೂ ಸ್ವಂತ ಮೈಮುರಿದು ಹೊಟ್ಟೆಹೊರಕೊಳ್ಳಬೇಕೆಂದಿದ್ದೇವೆ' ಎಂದರು. ಅದಕ್ಕೆ ರೈತನು 'ಬೇಡ ನನ್ನೊಡೆಯಾ, ನಿಮ್ಮಿಂದಲೇ ನಾವೆಲ್ಲಾ ಕಂಡಿದ್ದೇವೆ.

ನೀವು ಅಧಿಕಾರದಲ್ಲಿದ್ದಾಗ ನಿಮ್ಮ ಪಾದರಕ್ಷೆಯ ದರುಶನವೂ ಸಹ ನಮಗೆ ಆಗುತ್ತಿರಲಿಲ್ಲ. ಅಂಥಾ ನೀವು ಇಲ್ಲಿಗೇ ದಯಮಾಡಿಸಿರುವಾಗ ನಾನು ನಿಮಗೆ ದುಡಿಯುವುದಷ್ಟೇ? ನನ್ನೊಡೆಯಾ ನೀವು ಸುಮ್ಮನೆ ಕೂತು ಉಣ್ಣಿರಿ. ನಾನು ಮನೆಯ ಮಗನಂತೆ ದುಡಿದು ಒದುಕುವಮಾಡಿ ಕೊಡುವೆ' ಎಂದನು. ಅದಕ್ಕೆ ಅಪ್ಪಾಸಾಹೇಬರು—'ಮರಿಯಪ್ಪಾ, ಈಗ ನಮ್ಮ ಮನಸ್ಸೇ ಒಂದು ಬೇರೆ ತರಹದ್ದಾಗಿದೆ. ಸ್ವಂತ ಮೈ ದುಡಿಸಿ ಹೊಟ್ಟೆತುಂಬಿಕೊಳ್ಳುವುದೊಂದು ಪುಣ್ಯಕಾರ್ಯದಂತೆ ನಮ ಗೀಗ ಅನಿಸತೊಡಗಿದ್ದರಿಂದ ಹಾಗೆ ಮಾಡಬೇಕೆನ್ನುತ್ತೇನೆ. ಇನ್ನೇನೂ ಬೇರೆ ಕಾರಣವಿಲ್ಲ' ಎಂದರು. ಅದಕ್ಕೆ ರೈತನು—'ಎಂದೂ ಮಾಡಿ ಗೊತ್ತಿಲ್ಲದ ನೀವು ಅದನ್ನೆಲ್ಲಾ ಹೇಗೆ ಸಾಗಿಸುವಿರಿ? ಅಲ್ಲದೆ ಲಕ್ಷ್ಮೀ ದೇವಿಯನ್ನು ದೂರ ಸರಿಸಿ ಬಂದಿರುವುದರಿಂದ ಒಕ್ಕಲತನದ ವೆಚ್ಚಕ್ಕೆಲ್ಲ ಹೇಗೆ ಮಾಡುವಿರಿ? ಒಕ್ಕಲತನಕ್ಕೆ ಒಂದು ಬೇಕೆ, ಒಂದು ಬೇಡವೆ? ಹಲವು ಸಾಮಾನು ಸಡಿಗಳನ್ನು ನೆರವಬೇಕು' ಎಂದು ಬಿನ್ನವಿಸಿದನು. ಒಕ್ಕಲತನವೆಂದರೆ ಈ ಎಲ್ಲ ಸಾಮಾನುಗಳು ಬೇಕೆಂಬ ಕಲ್ಪನೆ ಈ ಮೊದಲು ಅಪ್ಪಾಸಾಹೇಬರಿಗೆ ಇರಲಿಲ್ಲ. ಆದ್ದರಿಂದ ಒಂದಿಷ್ಟು ಯೋಚನೆಗೊಳಗಾದರು. ಅದನ್ನು ರೈತನು ನೋಡಿ—'ರಾಯರೇ, ಇದೊಂದೇ ವರುಷದಲ್ಲಿ ಸ್ವತಂತ್ರವಾಗಿ ಭೂಮಿಯನ್ನು ಮಾಡಲು ನಿಮಗಾವುದೂ ಸಾಧ್ಯವಿಲ್ಲ' ಎಂದನು. ಆದರೂ ಅವರ ಸಂಕಲ್ಪ ಸ್ಥಿರವೇ ಆಗಿದ್ದುದನ್ನು ಕಂಡು ಪುನಃ ರೈತನು—'ಈಗ ನಮ್ಮವೆರಡು ಹೆಚ್ಚಿನ ಎತ್ತುಗಳನ್ನ ನೀವು ತೆಗೆದುಕೊಳ್ಳಿರಿ. ನಿಮಗೆಲ್ಲಾ ದಗದ ಗೊತ್ತಾಗುವ ವರೆಗೆ ನನ್ನ ಮಗನೊಬ್ಬನನ್ನು ನಿಮ್ಮ ಸ್ವಾಧೀನಕ್ಕೆ ಕೊಟ್ಟುಬಿಡುತ್ತೇನೆ. ನಿಮ್ಮ ಇಚ್ಛೆಯಂತೆ ಸ್ವಂತ ಒಕ್ಕಲಿಗರಾಗಿ

ಹೊಲಗಳನ್ನೇ ಸಾಗಿಸಿರಿ; ಆಗಲಿ' ಎಂದು ನಿರ್ವಾಹವಿಲ್ಲದೆ ಒಡಂಬಟ್ಟನು. ಅಪ್ಪಾಸಾಹೇಬರು ರೈತನ ಅಪಾರವಾದ ಸ್ವಾಮಿಭಕ್ತಿಗೆ ಬಹಳ ಬೆರಗಾದರು.

ಮುಂದೆ ಯಜಮಾನರು ಯಾವ ಅಭಿಮಾನವನ್ನೂ ಇಟ್ಟುಕೊಳ್ಳದೆ ಹೊಲದಲ್ಲಿ ಕೆಲಸಗಳನ್ನು ಮಾಡತೊಡಗಿದರು. ಮನೆಯಿಂದ ಎತ್ತುಗಳನ್ನು ಬಿಟ್ಟುಕೊಂಡು ಕೈಯಲ್ಲಿ ಬಾರಕೋಲನ್ನು ಹಿಡಿದು ಮಧ್ಯಾಹ್ನದ ಬುತ್ತಿಯನ್ನು ಬೆನ್ನಿಗೆ ಇರಿಸಿಕೊಂಡು ಹೊರಡುವ ಅವರ ಚಿತ್ರವನ್ನು ವಾಚಕರೇ ಊಹಿಸಿಕೊಳ್ಳಲಿ. ಅವರ ಹೆಂಡತಿಯವರೂ ಸ್ವತಃ ತಾವೇ ಮನೆಯಲ್ಲಿ ಅಡುಗೆಯನ್ನು ಮಾಡಿ ಒಮ್ಮೊಮ್ಮೆ ತಮ್ಮ ಯಜಮಾನರಿಗೆ ರೊಟ್ಟಿಯನ್ನು ಕೊಡಲು ಹೊಲಕ್ಕೆ ಹೋಗುತ್ತಿದ್ದರು. ಆದರೆ ಅವರಿಗೆ ಬಹಳ ಲಜ್ಜೆ ಬರುತ್ತಿತ್ತು. ಯಾರಿಗೂ ಗೊತ್ತಾಗಬಾರದೆಂದು ತಮ್ಮ ಮೋರೆಯ ಸೆರಗನ್ನು ಮುಂದಕ್ಕೆ ಎಳೆದುಕೊಂಡು ಸರಕ್ಕನೆ ಊರು ದಾಟಿ ಹೊಲದ ಹಾದೀ ಹಿಡಿದು ಹೋಗಿಬಿಡುವರು. ಅವರು ತಮ್ಮ ಹರಿದ ಸೀರೆ, ಮಾಸಿದ ಕುಪ್ಪಸಗಳನ್ನು ಯಾರಿಗೂ ತೋರಿಸಿಗೊಡುತ್ತಿದ್ದಿಲ್ಲ. ತಪ್ಪಿ ಯಾರಾದರೂ ನೋಡಿದರೆ ಅವರಿಗೆ ಬಹಳ ವೇದನೆಯಾಗುತ್ತಿತ್ತು. ಆದರೆ ಅಪ್ಪಾಸಾಹೇಬರಿಗೆ ಅದಾವ ವೇದನೆಯೂ ಇಲ್ಲ; ಅಭಿಮಾನವೂ ಇಲ್ಲ. ತಮ್ಮ ಉಟ್ಟ ದೋತರದಲ್ಲಿ ತೊಡೆ ಕಾಣುತ್ತಿರಲಿ,ತೊಟ್ಟ ಅಂಗಿ ಮೈ ತೆರೆದಿರಲಿ,ಅದಾವ ಪರವೆಯೂ ಇಲ್ಲದೆ ನೆಟ್ಟಗೆ ಹೊಲಕ್ಕೆ ಹೋಗುವರು. ಹೊಲದ ಬೆಳೆ ನಾ ಮೇಲೆ ನೀ ಮೇಲೆ ಎಂದು ಬೆಳೆಯತೊಡಗಿದಾಗಂತೂ ಅವರ ಹಿಗ್ಗಿಗೆ ಆಳತೆಯಿರಲಿಲ್ಲ. ಹೊಲದ ಮೂಲೆಯೊಂದರಲ್ಲಿ ನಿಂತು ಬೆಳೆ ನೋಡುತ್ತ ಆಗಾಗ ಹರುಷಪಡುವರು. ತಮ್ಮ ಹೆಂಡತಿಗೆ ಬೆಳೆಯನ್ನು ತೋರಿಸಿ

ಸಂತಸಪಡಲು ಸೂಚಿಸುವರು. 'ಮುಂಚೆ ಇಷ್ಟು ಸುಖವಾಗಿ ನಾನೆಂದೂ ಇರಲಿಲ್ಲ. ಹೊಲದ ಕೆಲಸಗಳನ್ನು ಮಾಡಿ ಜೀವಿಸುವದರಲ್ಲಿ ಎಲ್ಲಕ್ಕೂ ಹೆಚ್ಚಿನ ಸುಖವಿದೆ. ನೌಕರಿಯನ್ನು ಬಿಟ್ಟು ನನ್ನ ಊರಿಗೆ ಬಂದು ಹೊಲಗಳ ಕೆಲಸ ಮಾಡುತ್ತಿದ್ದದರಿಂದ ನಾನು ಬಲು ಸುಖಿಯಾದೆ' ಎಂದು ಅನ್ನುವರು. ಆದರೆ ಪಾರ್ವತೆಮ್ಮನವರ ಬಾಡಿದ ಮುಖ ಎಷ್ಟೂ ಅರಳುತ್ತಿರಲಿಲ್ಲ.

ಅಪ್ಪಾಸಾಹೇಬರಿಗೂ ದುರ್ದೈವದ ಮೂಲಕ ಆ ಹಿಗ್ಗು ಬಹಳ ದಿನಗಳವರೆಗೆ ಉಳಿಯಲಿಲ್ಲ. ಯಾಕೆಂದರೆ ಭರದಿಂದ ಕುಣಿಯುತ್ತ ಬಂದ ಬೆಳೆಯು ತಕ್ಕ ಸಮಯಕ್ಕೆ ಮಳೆಬಾರದ್ದರಿಂದ ಬಾಡತೊಡಗಿತು; ಮುಂದೆ ಮುಂದೆ ಬಣಗಿಯೂ ಬಿಟ್ಟಿತು. ಅಳಿದುಳಿದ ಅಲ್ಪಸ್ವಲ್ಪ ಪೈರಿನಿಂದ ಅವರ ಉಪಜೀವನಕ್ಕೆ ಬೇಕಾಗುವಷ್ಟು ಕಾಳು ಎಲ್ಲಿಂದ ಬರಬೇಕು ? ಇಷ್ಟೊತ್ತಿಗೆ ಇವರ ರೈತನು ಬೇರೆ ಸ್ವರ್ಗಸ್ಥನಾದನು !!! ಆಗ ಏನು ಮಾಡಬೇಕು ? ಆ ವರುಷ ಹಳ್ಳಿಯ ಒಕ್ಕಲಿಗರೆಲ್ಲರೂ ತೊಂದರೆಗೀಡಾಗಿಬಿಟ್ಟರು. ಯಜಮಾನರಿಗೂ ಅದೇ ಹಾಡು ಬಂದುಬಿಟ್ಟಿತು. ಒಮ್ಮೊಮ್ಮೆ ಉಪವಾಸ ಬೀಳುವ ಪ್ರಸಂಗವೂ ಅವರಿಗೆ ಬರತೊಡಗಿತು. ಅರಹೊಟ್ಟೆಯಿಂದ ಜೀವಿಸುತ್ತಿರುವಾಗ ಶಕ್ತಿಯಾದರೂ ಹೇಗೆ ಉಳಿಯಬೇಕು ? ಮನಸ್ಸನ್ನು ಎಷ್ಟೇ ಗಟ್ಟಿಮಾಡಿದ್ದರೂ ಉಗ್ರಪರಿಸ್ಥಿತಿಯ ಮೂಲಕ ಆ ದಂಪತಿಗಳು ದಿನದಿನಕ್ಕೆ ಕ್ಷೀಣರಾಗುತ್ತ ನಡೆದರು.

ಇಷ್ಟಕ್ಕೇ ವಿಧಿ ತೀರಿತೆಲ್ಲಿ ? ಬರಗಾಲದ ಮೂಲಕ ಹೊಟ್ಟೆಗೆ ಅಂಥಿಂಥ ಕೂಳು ಬಿದ್ದದ್ದರಿಂದ ಅವರ ಬಂಗಾರದಂಥ ಮುದ್ದು ಮಗುವಿಗೆ ಬಂದು ದಿನ ಹಗುರಾಗಿ ಮೈಕಾಯಲಿಕ್ಕೆ ಮೊದಲಾಯಿತು. ದಿನದಿನಕ್ಕೆ ಜ್ವರದ ಅಬ್ಬರ ಮಿತಿಮೀರುತ್ತ ಬಂತು. ಮಗುವನ್ನು ಎಷ್ಟು

ಎಚ್ಚರಿಸಿದರೂ ಒಂದು ದಿನ ಅದು ಕಣ್ಣೇ ತೆರೆಯಲೊಲ್ಲದು. ಮೈಗೆ ಕೈಹಚ್ಚಿ ನೋಡಿದರೆ ಕೆಂಡದಂತೆ ಮೈ ಸುಡುತ್ತಿದ್ದಿತು. ಮಗುವನ್ನು ತೊಡೆಯ ಮೇಲೆ ಇರಿಸಿಕೊಂಡು ಯಜಮಾನರು ಅದರ ತಲೆಯ ಮೇಲೆ ಕೈಯಾಡಿಸುತ್ತ–'ಸಾಯುವದಕ್ಕೆ! ಸಾಯುವದಕ್ಕೆ!!' ಎಂದು ಅಂದು ಕೇಳಿದ ಮಾತು ಇಂದು ಮತ್ತೆ ಏನೋ ನೆಪವುಕೊಡಲಿಕ್ಕೆ ಹೀಗೆ ಮೋರೆ ತೋರಿಸಿತೇ?' ಎಂದು ಆಲೋಚನಾ ಮಗ್ನರಾದರು.

ತಾಸುಗಳು ಕಳೆದಂತೆ ಜ್ವರ ಏರುತ್ತಲೇ ನಡೆಯಿತು. ಬೇನೆಯಿಂದ ಮಗುವಿನ ಬಾಯಲ್ಲಿ ಮಾತಿಲ್ಲ. ಭ್ರಮೆಯಿಂದ ತಾಯಿಯ ಬಾಯಲ್ಲಿ ಮಾತಿಲ್ಲ. ವಿಚಾರ ಮಗ್ನರಾದ್ದರಿಂದ ಯಜಮಾನರ ಬಾಯಲ್ಲಿಯೂ ಮಾತಿಲ್ಲ. ಹೀಗೆ ಎಲ್ಲೆಲ್ಲಿಯೂ ಉಗ್ರಮೌನ ವ್ಯಾಪಿಸಿತ್ತು. ತಾಯಿಯ ಹೊಟ್ಟೆಯಲ್ಲಿ ಕಸಪಿಸಿಯು ಘಳಿಗೆ ಘಳಿಗೆಗೆ ಹೆಚ್ಚಾಗತೊಡಗಿತು. ಇನ್ನು ಮಗು ಉಳಿಯದೆಂದೆನಿಸಿದಾಗ ಏನು ಮಾಡಬೇಕೆಂಬುದು ತಿಳಿಯದಾಯಿತು. ರಾತ್ರಿಹಗಲುಗಳೆನ್ನದೆ, ಹೊಟ್ಟೆಗೆ ಒಂದು ತುತ್ತು ಅನ್ನವಿಲ್ಲದೆ, ಮಗುವನ್ನು ತಬ್ಬಿಕೊಂಡು ಕಣ್ಣೀರಿಡುತ್ತ ತಾಯಿ ಕುಳಿತಿದ್ದರು. ಸೊರಗಿ ಸಾಯಲಾದ ತಾಯಿಯ ತೊಡೆಯ ಮೇಲೆ ಬಾಯಿ ಬಿಡುತ್ತ ಬಳಲುತ್ತಿರುವ ಮಗುವಿನ ಗತಿ ನೋಡಿ ಆ ತಂದೆಯ ಕರುಳೂ ಕೊರೆಯದಿರಲಿಲ್ಲ. ಆದರೂ ಅವರು ಅತಿ ಗಂಭೀರಪ್ರಕೃತಿಯವರಾದ್ದರಿಂದ ಚೇತರಿಸಿಕೊಂಡು ಮನದೊಳಗೆ ಹೀಗನ್ನುತ್ತಾರೆ:—'ಇದು ನನ್ನ ಮಗು ಎನ್ನುವ ಮೋಹವು ನನಗೆ ಮುಸುಕಿಕೊಂಡು ಈ ರೀತಿ ಅಧೀರನನ್ನಾಗಿ ಮಾಡಿದೆ. ನಿಜವಾಗಿ ನಾನು ಪರಿತಪಿಸಬೇಕಾಗಿಲ್ಲ. ಯಾಕೆಂದರೆ ಹುಟ್ಟಿಸಿದ ದೇವನ ಕಡೆಗೆ ರಕ್ಷಿಸುವ ಭಾರವಿದೆ. ನಮಗಿರಬೇಕಾದದ್ದು ಆ ದೇವನ ರಾಜ್ಯದ ಚಿಂತೆಯೊಂದೇ. ನಮ್ಮ ಚಿಂತೆ ಆತನಿಗೆ' ಎಂದೆನ್ನುತ್ತ

ಈಗ ತಮ್ಮ ಕರ್ತವ್ಯವೇನಾದರೂ ಇದೆಯೆ ? ಎಂದು ವಿಚಾರಿಸುತ್ತ ಧೀರಭಾವದಿಂದ ಕುಳಿತುಕೊಂಡರು.

ತಾಸೆರಡುತಾಸುಗಳಲ್ಲಿಯೇ ಮಗುವಿನ ಪ್ರಾಣವು ಹಾರಿ ಹೋಗುವದೆಂದೆನಿಸುತ್ತಿದ್ದರೂ, ಒಳ್ಳೆಯ ವೈದ್ಯರು ತಕ್ಕ ಔಷಧ ಕೊಟ್ಟರೆ ಉಳಿಯಲು ಶಕ್ಯವೂ ಇದೆ. ಆದರೆ ಹಳ್ಳಿಯಲ್ಲಿ ಅಂಥ ಔಷಧ ಕೊಡುವ ವೈದ್ಯರೊಂದು ಬೇಕಲ್ಲ! ಎಲ್ಲಿಂದ ಬರಬೇಕು? ಅಲ್ಲದೆ ಬರಗಾಲದ ಮೂಲಕ ದಿನದ ಹೊಟ್ಟೆಯ ವ್ಯವಸ್ಥೆಗೇನೇ ಕಷ್ಟವಿರುವಾಗ ಔಷಧದ ವ್ಯವಸ್ಥೆ, ವೈದ್ಯರ ವ್ಯವಸ್ಥೆ ಹೇಗೆ ತಾನೆ ಶಕ್ಯ?

ಆದರೆ, ಏನೇ ಇದ್ದರೂ ತಾಯಿಯು ಕರುಳೆಂಬುದು ಇದನ್ನೆಲ್ಲ ಮೌನವಾಗಿ ಹೇಗೆ ಸಹಿಸಬೇಕು! 'ಅಯ್ಯಯ್ಯೋ! ದೈವವು ಎಂಥ ವೇಳೆ ತಂದಿತಲ್ಲಾ! ಒಬ್ಬ ವೈದ್ಯನೂ ಕೂಡ ನಮಗೆ ಸಿಗಬಾರದೆ! ಆತನಿಗೆ ಕೊಡಲು ಒಂದು ದುಡ್ಡೂ ಕೂಡ ನಮ್ಮ ಮನೆಯಲ್ಲಿ ಉಳಿಯಬಾರದೆ!' ಎಂದು ಒಂದೇಸಮನೆ ಗೋಳಾಡತೊಡಗಿದರು. ಆಗ ಅಪ್ಪಾಸಾಹೇಬರು ಮೌನವಾಗಿ ಒಂದು ಕಡೆ ಕುಳಿತುಕೊಂಡು ಮಗುವಿನ ಮೃತ್ಯುದಶೆಯನ್ನೂ ಹೆಂಡತಿಯ ಕರುಣಾಜನಕ ಸ್ಥಿತಿಯನ್ನೂ ತಮ್ಮ ತಾತ್ವಿಕ ಧ್ಯೇಯವನ್ನೂ ತೂಗಿ ತೂಗಿ ಸಿದ್ಧಾಂತ ಮಾಡುವಂತೆ ಆಲೋಚನಾಪರರಾಗಿ ಕುಳಿತಿದ್ದರು. ನಿಷ್ಠುರ ದೈವವು ಮರೆಯಲ್ಲಿ ನಿಂತು ನಗುತ್ತಿರಬೇಕು.

'ನಿಮ್ಮದೂ ಹೆತ್ತ ಕರುಳಲ್ಲವೆ? ನಮ್ಮ ವಂಶಕ್ಕೆ ಈ ಕೂಸಲ್ಲದೆ ಇನ್ನಾವುದಿಹುದು. ಸರ್ವಸಂಪತ್ತನ್ನೆಲ್ಲಾ ಕಳೆದುಕೊಂಡು ಭಿಕ್ಷೆಗೀಡಾದಂತೆ ಇದ್ದ ಒಬ್ಬ ಮಗುವನ್ನೂ ಅದಕ್ಕೌಷಧೋಪಚಾರ ಮಾಡದೆ ಕಳೆದುಕೊಂಡು ಪರದೇಶಿಯಾಗಬೇಕೆನ್ನುವಿರಾ? ನಾಡಿಗೇ ನ್ಯಾಯವನ್ನು

ಹೇಳುತ್ತಿದ್ದವರು ನೀವು. ಈಗ ನಿಮ್ಮ ನ್ಯಾಯವನ್ನು ಯಾರು ಹೇಳಬೇಕು? ಒಂದಿಷ್ಟು ಔಷಧವನ್ನಾದರೂ ತಂದುಕೊಡಲು ನೀವು ಪ್ರಯತ್ನಿಸಬಾರದೆ?' ಎಂದು ಪರಿಪರಿಯಾಗಿ ಪಾರ್ವತಿಮ್ಮನವರು ಮೊರೆಯಿಟ್ಟದ್ದರಿಂದ ಗಂಭೀರರಾದರೂ ದಯಾರ್ದ್ರಚಿತ್ತರಾದ ಅಪ್ಪಾ ಸಾಹೇಬರು 'ಒಳ್ಳೆಯದು ಎಲ್ಲಿಯಾದರೂ ಔಷಧದ ಪ್ರಯತ್ನಮಾಡು ವೆನು. ದುಃಖಿಸಬೇಡ' ಎಂದು ಹೇಳಿ ಮನೆಯಿಂದ ಹೊರಬಿದ್ದರು. ಆದರೂ ಅವರಿಗೆ ಯಾವ ಸಂಕಟವಾಗಲೀ ಅಥವಾ ಚಿತ್ತಚಂಚಲತೆಯಾ ಗಲೀ, ಉಂಟಾಗಲಿಲ್ಲ. 'ನನ್ನ ಧ್ಯೇಯವನ್ನು ಸಾಧಿಸಿಕೊಳ್ಳುವದಕ್ಕಾಗಿ ಕಾಲವು ತಂದ ಪ್ರಸಂಗಗಳಿಗೆಲ್ಲ ನಾನು ಎದೆಕೊಡುವೆನು. ಸಧ್ಯದ ಪ್ರಸಂಗವು ನನಗೆ ಏನೋ ಬುದ್ಧಿಯನ್ನು ಕಲಿಸಲಿಕ್ಕಲ್ಲದೆ ಇನ್ನಾವು ದಕ್ಕೂ ಬಂದಿರಲಾರದು. ಜೀವನದ ಮಹಾಸಾರ್ಥಕತೆಯನ್ನೇ ಗುರಿ ಯಾಗಿ ಇಟ್ಟುಕೊಂಡಿರುವ ನನಗೆ ಎಂದಾದರೂ ಒಂದು ದಿನ ಸನ್ಯಾಸ ವನ್ನು ಸ್ವೀಕರಿಸದೆ ಗತ್ಯಂತರವೇ ಇಲ್ಲ. ಆದರೆ ಸನ್ಯಾಸಕ್ಕಿಂತ ಮೊದಲು ಸರ್ವ ಅಭಿಮಾನಗಳು ಅಳಿದುಹೋಗಬೇಕಲ್ಲ! ಆದ್ದರಿಂದ ಅಹಂಕಾರದ ಅಂಕುರವನ್ನೂ ಕೂಡ ಕತ್ತರಿಸಿಬಿಡುವ ಭಿಕ್ಷುಕುತನದ ಪ್ರಥಮಪಾಠ ವನ್ನು ಈಗ ನಾನು ಯಾಕೆ ಕಲಿಯಬಾರದು?' ಎಂದು ಆಲೋಚಿಸಿ ಅಪ್ಪಾಸಾಹೇಬರು ಹಿಂಸಕ್ಕೆ ತಮಗೆ ಅಧಿಕಾರವಿದ್ದ ಪಟ್ಟಣದ ಹಾದಿ ಯನ್ನೇ ಹಿಡಿದರು. ಆ ಪಟ್ಟಣವೂ ಈ ಹಳ್ಳಿಯಿಂದ ಬಹಳ ದೂರವೇನೂ ಇರಲಿಲ್ಲ. ಕೆಲವು ತಾಸುಗಳಲ್ಲಿಯೇ ಅಲ್ಲಿಗೆ ಸೇರಿ ನಗರದ ಮುಖ್ಯ ದೇವಾಲಯದ ಮುಂದೆ ಧೈರ್ಯವಮಾಡಿ ಭಿಕ್ಷುಕರ ಗುಂಪಿನಲ್ಲಿ ನಿಂತು ಕೊಂಡು ಅವರೊಂದಿಗೆ ತಾವೂ 'ದಯವೇ ಧರ್ಮದ ಮೂಲವಯ್ಯಾ!' ಎಂದು ಉಚ್ಚಸ್ವರದಿಂದ ದಿಗಂತವನ್ನೆಲ್ಲ ವ್ಯಾಪಿಸುವಂತೆ ಗದ್ದರಿಸಿದರು.

ಎಷ್ಟೇ ಗಟ್ಟಿಮನಸ್ಸಿನವರಾದರೂ ಬಹುದಿನದ ಸಂಸ್ಕಾರವು ಒಮ್ಮೆಲೆ ಎಲ್ಲಿ ಮಾಯವಾಗುತ್ತದೆ? ಮನಸ್ಸಿನಲ್ಲಿ ಬಹು ವಿಧದ ವಿಚಾರಗಳ ಕಾವರವು ಏಳತೊಡಗಿತು. ಆ ಕಾವರದಲ್ಲಿ ಅವರು ಒಮ್ಮೊಮ್ಮೆ ತಮ್ಮ ಆಗಿನ ಕೈಕೊಂಡ ಕಾರ್ಯವೇ ಮರೆತುಹೋಗುತ್ತಿತ್ತು. 'ಏನು? ನನ್ನ ಜೀವನದಲ್ಲಿ ತಪ್ಪು ಹೆಜ್ಜೆಗಳನ್ನೇನಾದರೂ ಇಡುತ್ತಿದ್ದೇನೆಯೇ? ನನ್ನ ಹೆಂಡತಿ ಅನ್ನುವಂತೆ ನಾನು ನನ್ನ ನೌಕರಿಯನ್ನು ಬಿಟ್ಟುಕೊಟ್ಟಿದ್ದು ತಪ್ಪಾಗಿರಲಿಕ್ಕಿಲ್ಲವೆ? ಹೊಟ್ಟೆಯ ಮಗುವನ್ನೂ ಕೈ ಹಿಡಿದ ಹೆಂಡತಿಯನ್ನೂ ಈ ರೀತಿ ಗೋಳಿಗೀಡು ಮಾಡಿದ್ದು ಪಾಪವಾಗಲಿಕ್ಕಿಲ್ಲವೇನು?' ಎಂದು ನಾನಾಪರಿಯಾಗಿ ವಿಚಾರಿಸುವರು. ಆಗಾಗ ನನ್ನ ಹೆಂಡತಿಯು 'ಪರಕಾಲದ ಜೀವನಕ್ಕಾಗಿ ಇಹಜೀವನವನ್ನೆಲ್ಲಾ ಹಾಳುಮಾಡಿಕೊಂಡಿರಲ್ಲಾ! ಸತ್ತಮೇಲೆ ಏನಾಗುವದೋ ಯಾರು ಬಲ್ಲರು'—ಎಂದು ಅನ್ನುತ್ತಿದ್ದ ಅವಳ ಮಾತು ಸತ್ಯವಾಗಿರಲಿಕ್ಕಿಲ್ಲವಷ್ಟೇ?...... ಇಲ್ಲ: ಇಲ್ಲ. ನಾನು ತಪ್ಪುಮಾಡಿರುವದಿಲ್ಲ ತಪ್ಪುಹಾದಿಯಲ್ಲಿ ನಡೆಯುತ್ತಲೂ ಇಲ್ಲ. 'ಸತ್ತಮೇಲೆ ಏನಿದೆ?' ಎಂಬ ಸಂದೇಹವೇಕೆ? ಉಂಟು; ಇಹ ಪರಕಾಲಗಳುಂಟು. ಸ್ವರ್ಗ ನರಕಗಳುಂಟು. ಮಾಡಿದವರ ಉಡಿಯಲ್ಲಿ ಮಾಡಿದಷ್ಟು ಫಲವುಂಟು. ನಾನು ಹೇರಳವಾಗಿ ದಾನಮಾಡಿದ್ದೂ ನಿಜ. ಅಧಿಕಾರವನ್ನು ಪರಿತ್ಯಜಿಸಿ ಹೆಂಡರು ಮಕ್ಕಳನ್ನು ಗೋಳಿಗೀಡು ಮಾಡಿದ್ದೂ ನಿಜ. ಹೀಗೆ ಮಾಡಿರದಿದ್ದರೆ ನನ್ನ ಪಾರಮಾರ್ಥಿಕ ಕರ್ತವ್ಯವನ್ನು ನೆರವೇರಿಸಿದಂತಾಗುತ್ತಿರಲಿಲ್ಲ' ಎಂದು ನಿರ್ಧರಿಸಿಬಿಟ್ಟು ಪ್ರಸ್ತುತ ಕಾರ್ಯಕ್ಕೆ ಪ್ರವರ್ತಿಸಿದರು.

ಭಿಕ್ಷುಕರ ಸಾಲಿನಲ್ಲಿ ಬಹಳ ವೇಳೆಯವರೆಗೆ ನಿಂತುಕೊಂಡು ಯಾಚಿಸ ತೊಡಗಿದರೂ ಯಾವ ಒಂದು ತಾಮ್ರದ ಕಾಸೂ ಕೂಡ ಇವರಿಗೆ

ದೊರೆಯಲಿಲ್ಲ. ವೇಳೆ ಗತಿಸಿದಂತೆಲ್ಲ ಅವರಿಗೆ ತಮ್ಮ ಮನೆಯಲ್ಲಿಯ ದಾರುಣವಾದ ದೃಶ್ಯವು ಕಣ್ಣಮುಂದೆ ಕಟ್ಟತೊಡಗಿತು. ಮೃತ್ಯುಶಯ್ಯೆಯಲ್ಲಿರುವ ಮಗುವಿನ ಮುಂದೆ ಕಣ್ಣೀರು ಸುರಿಸುತ್ತಿದ್ದ ಆ ದೀನಳ ಚಿತ್ರ. ಅದನ್ನುಳಿದು ಅವರ ಕಣ್ಣೆದುರಿಗೆ ಇನ್ನಾವುದೂ ಕಾಣುತ್ತಿರಲಿಲ್ಲ. ತಾವು ಯಾವ ಕೆಲಸಕ್ಕಾಗಿ ಆ ಮಂದಿರದ ಹತ್ತಿರ ನಿಂತಿರುವುದೆಂಬುದನ್ನೂ ಕೂಡ ಮರೆತುಬಿಟ್ಟರು. ಆದರೆ ಭಿಕ್ಷೆಗೆಂದು ಚಾಚಿದ ಅವರ ಕೈ ಮಾತ್ರ ಅಲುಗದೆ ಹಾಗೇ ಚಾಚಿಯೇ ಇತ್ತು. ಹೀಗಿರುವಾಗಲೇ ಆ ಕೈಯಲ್ಲಿ ಏನೋ ಬಿದ್ದಂತಾಯಿತು. ಪ್ರಜ್ಞೆಗೆ ಬಂದು ನೋಡುತ್ತಾರೆ, ಒಂದು ತಾಮ್ರದ ದುಡ್ಡು. ಒಬ್ಬ ಶ್ರೀಮಂತರ ಹೆಣ್ಣುಮಗಳು ದೇವಾಲಯದ ಮುಂದಿನ ಭಿಕ್ಷುಕರೆಲ್ಲರಿಗೂ ಒಂದೊಂದು ಬಿಲ್ಲಿ ದಾನಮಾಡುತ್ತಿದ್ದಳು. ನಮ್ಮೀ ಹೊಸ ಭಿಕ್ಷುವಿನ ಸರತಿ ಬಂದಾಗ ಆ ಮಹಿಳೆಯು ಅವರ ಕೈಯಲ್ಲಿಯೂ ಒಂದು ದುಡ್ಡನ್ನಿಟ್ಟಿದ್ದಳು. ಆಕೆಯನ್ನು ಅಪ್ಪಾಸಾಹೇಬರು ನೋಡಿದಾಗ 'ಇವಳಿಗೆ ಇನ್ನಿಷ್ಟು ಬಿಲ್ಲಿಗಳನ್ನು ಕೇಳಲೇ?' ಎಂದು ಬಗೆದರು. ಅಷ್ಟರಲ್ಲಿ ಅವಳು ಇವರನ್ನು ಬಿಟ್ಟು ಬಂದಿಷ್ಟು ದೂರ ಹೋಗಿದ್ದಳು. 'ನಿಂತ ಸ್ಥಳವನ್ನು ಬಿಟ್ಟು ಅವಳಿದ್ದಲ್ಲಿಗೆ ಹೋಗಲೇ?' ಎಂದರು. ಅಷ್ಟರಲ್ಲಿ ಅವಳು ಇನ್ನಿಷ್ಟು ದೂರ ಹೋದಳು. 'ಭಿಕ್ಷೆ ಬೇಡುವ ರೀತಿ ಸಹ ಗೊತ್ತಿಲ್ಲ. ಗೊತ್ತಿಲ್ಲದಿದ್ದರೆ ಬಿಡಲಿ. ಅದರಲ್ಲೇನು ದೊಡ್ಡ ವಿದ್ಯೆ. ಬಾಯಿ ಬಿಚ್ಚಲಿಕ್ಕೆ ಒಂದರಾಯಿತು. ರೂಢಿಯಿಲ್ಲದ ಮನಸ್ಸು ನಾಚಿಕೆಪಡುತ್ತದೆ. ಆದರೆ ನಿರ್ಧಾರದ ದೃಢಸಂಕಲ್ಪವನ್ನು ನೆನಪಿನಲ್ಲಿಟ್ಟುಕೊಂಡರೆ ಎಲ್ಲಾ ಸರಿಹೋಗುತ್ತದೆ' ಹೀಗೆಲ್ಲಾ ಆಲೋಚಿಸುತ್ತಿರುವಷ್ಟರಲ್ಲಿಯೇ ಅವಳು ಮರೆಯಾಗಿಬಿಟ್ಟಳು.

ಕೊನೆಗೆ ಅಪ್ಪಾಸಾಹೇಬರು ಗುಡಿಯೊಳಗೆ ಹೊಕ್ಕು ಅವಳನ್ನು

ಹುಡುಕಾಡತೊಡಗಿದರು. ಅಲ್ಲಿ ಅವಳಿದ್ದಿಲ್ಲ. ಈ ಮೊದಲೇ ಆ ಮಂದಿರದ ಮತ್ತೊಂದು ಮಾರ್ಗದಿಂದ ಅವಳು ತನ್ನ ಮನೆಗೆ ಹೋಗಿಬಿಟ್ಟಿದ್ದಳು. ಆಗ ಇವರು ಅವಳ ಆಶೆಯನ್ನು ತೊರೆದು 'ಇನ್ನೊಬ್ಬರು ಬರಲಿ ಅವರಿಂದ ಕೆಲಸ ಸಾಧಿಸುವಾ' ಎಂದುಕೊಂಡು ಮತ್ತೆ ಮೊದಲಿನ ಸ್ಥಾನಕ್ಕೆ ಬಂದು ನಿಂತರು. ಆದರೆ ಆಶೆಯು ಮಾತ್ರ ಎಷ್ಟೂ ಇರಲಿಲ್ಲ. ಆಗ ಅವರ ಚಿತ್ತದ ಇದುರಿಗಿದ್ದುದೇನು? ತಮ್ಮ ಮಗುವಿನ ಸ್ಮೃತಿಯೇ ಹ. ಆದರ ಬಳಿಯಲ್ಲಿ, ಹೊಟ್ಟೆಯೊಳಗೆ ಬೆಂಕಿಬಿದ್ದು ಹೊರಳಾಡಿ ಗೋಳಾಡುತ್ತಿರುವ ಪಾರ್ವತಿಯಮ್ಮ; ಇಷ್ಟೆ. ಹೀಗಿದ್ದರೂ ಅವರು ಬೇರೊಬ್ಬ ದಾನಶೂರರು ಬರುವ ದಾರಿಯನ್ನೇ ನೋಡುತ್ತಿದ್ದರು.

ಹೀಗೆ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ನೋಡುನೋಡುತ್ತಿರುವುದರಲ್ಲಿ ಬೇರೆ ಒಬ್ಬ ಭಿಕ್ಷುಕನ ಮೇಲೆ ಇವರ ದೃಷ್ಟಿ ಬಿದ್ದಿತು. ಆ ಭಿಕ್ಷುಕನು ವೃದ್ಧನಾಗಿದ್ದನು. ಇವರನ್ನು ಆತನೂ ನೋಡಿದನು.

ಆತನಿಗೆ ಆ ನಗರದ ಸರ್ವಭಿಕ್ಷುಕರೆಲ್ಲಾ ಪರಿಚಯದವರಿದ್ದರು. ತನಗೆ ಗುರುತಿಲ್ಲದ ಈ ಭಿಕ್ಷುಕನೆಲ್ಲಿಂದ ಬಂದನು ? ಎಂದು ಕೂತೂಹಲವುಳ್ಳವನಾಗಿ ಇವರ ಕಡೆಗೆ ಮತ್ತೆ ಮತ್ತೆ ನೋಡುತ್ತ 'ನಿನ್ನನ್ನು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ ! ನೀನು ಎಲ್ಲಿ ಕೂಡುತ್ತಿದ್ದಿ ?' ಎಂದು ಕೇಳಿದನು.

'ಎಲ್ಲಿಯೂ ಇಲ್ಲ' ಎಂಬ ಎರಡೇ ಶಬ್ದಗಳಿಂದ ಅಪ್ಪಾಜಿಯವರು ತಮ್ಮ ಉತ್ತರವನ್ನು ಮುಗಿಸಿದರು. ಆ ಉತ್ತರದಿಂದ ಆ ಭಿಕ್ಷುಕನಿಗೆ ಸಮಾಧಾನವೆನಿಸಲಿಲ್ಲ. ಮತ್ತೆ ಕೇಳಿದನು:—

'ನೀನು ಮುಂದಿರದ ಮುಂದೆ ಇರದಿದ್ದರೆ ಮತ್ತೆಲ್ಲಿಯಾದರೂ ನಿನ್ನ ಕಾಯಕವನ್ನು ಮಾಡುತ್ತಿರಬಹುದಲ್ಲಾ' ಎಂದನು.

ಆಗ ಇವರು ತಮ್ಮ ಗೋಣು ಅಗಳಾಡಿಸಿ ' ಇಲ್ಲ ' ಎಂದು ಹೇಳಿದರು.

ಆ ಕಾಯಕದಲ್ಲಿ ಕುಶಲನಾದ ಆ ವೃದ್ಧಭಿಕ್ಷುಕನು ಅಷ್ಟಕ್ಕೇ ಬಿಡಲಿಲ್ಲ. ' ಓಹೋ ತಿಳಿಯಿತು ಈ ಉದ್ಯೋಗವನ್ನು ನೀನು ಹೊಸ ದಾಗಿಯೇ ಆರಂಭಮಾಡಿರುವಿ. ನಿನ್ನನ್ನು ನೋಡಿದರೆ ಹಾಗೇ ಅನಿಸು ತ್ತದೆ. ಇದೇನು ಸಾಮಾನ್ಯ ವ್ಯವಹಾರವೆಂದು ತಿಳಿದಿರುವಿಯೇನು ? ಈ ಭಿಕ್ಷೆಯ ಉದ್ಯೋಗದಲ್ಲಿಯೂ ಲೆಕ್ಕಾಚಾರವಿದೆ ' ಎಂದು ತಿರಸ್ಕಾರ ಪೂರಿತವಾಗಿ ನುಡಿದನು.

' ಭಿಕ್ಷೆಬೇಡುವುದೂ ಒಂದು ವ್ಯವಹಾರವೆಂದು ಹೇಳುವಿರಾ? ' ಎಂದು ಅಪ್ಪಾಸಾಹೇಬರು ಅನ್ನುವಾಗ ಅವರಿಗಾಗುತ್ತಿದ್ದ ಸಹಿಸಲಾರದ ಸಂಕಟವನ್ನು ಬಣ್ಣಿಸಲಳವಲ್ಲ.

ಇಷ್ಟರಲ್ಲಿ ಆ ವೃದ್ಧನು–ಇದಕ್ಕೂ ಗುರುಮುಖದಿಂದ ವಿದ್ಯಾ ಭ್ಯಾಸವಾಗಬೇಕು. ಮೇಲಾಗಿ ವಸೀಲಿಬೇಕು. ಅಲ್ಲದೆ ಸುಂಕಾ ಸಲ್ಲಿಸ ಬೇಕು. ನಾನು ಈ ನಗರದ ಬುನಾದಿಯ ಭಿಕ್ಷುಕ. ನನ್ನಲ್ಲಿಗೆ ಬಂದು ಕಾಣಿಕೆ ಸಲ್ಲಿಸಿ ಹೇಳಿಕೊಂಡಲ್ಲದೆ ಇಲ್ಲಿ ಭಿಕ್ಷೆಬೇಡುವುದಕ್ಕೆ ಯಾವನಿಗೂ ಅಧಿಕಾರವಿಲ್ಲ. ನಾನು ನೇಮಿಸಿಕೊಟ್ಟ ಓಣಿಯಲ್ಲಿಯೇ ಅಂಥವನು ತನ್ನ ಭಿಕ್ಷೆಯ ಉದ್ಯೋಗವನ್ನು ಮಾಡತಕ್ಕದ್ದು. ಇದೇನು ಪೋಕಳಾ ಪಂಥರ ಪುರವೆಂದು ತಿಳಿದುಕೊಂಡಿರುವಿಯೇನು ? ಹೀಗೆ ನಮ್ಮನ್ನು ಠಕ್ಕಿಸಿ ಎಷ್ಟು ಗಳಿಸಿರುವಿ ? ನಿನ್ನ ಬಕ್ಕಣವನ್ನೆಲ್ಲಾ ಝಾಡ್ತೀ ಮಾಡಿಸಿ ಬಿಡು ತ್ತೇನೆ. ಏನಂತ ತಿಳಿದುಕೊಂಡಿದ್ದಿ......? ' ಅಂದನು.

ಇದನ್ನೆಲ್ಲಾ ಕೇಳಿ ಅಪ್ಪಾಸಾಹೇಬರಿಗೆ ದಿಗಿಲೇಬಿತ್ತು. ' ಇದೇನು

ಚಮತ್ಕಾರ! ಭಿಕ್ಷೆಗೂ ಕೂಡ ಬಂಧನಗಳೇ! ಜಗತ್ತು ಭಾರಿ ಚಮತ್ಕಾರದ ಸಂತೆಯಾಗಿದೆ!!!' ಎಂದು ವಿಸ್ಮಯ ಪಟ್ಟರು.

ಆ ಭಿಕ್ಷುಕ ಇಷ್ಟಕ್ಕೇ ಎಲ್ಲಿ ಬಿಡುತ್ತಾನೆ. ತನ್ನ ವಶೀಲಿಯ ಪೋಲೀಸನೊಬ್ಬನನ್ನು ಕರೆದು—' ಈ ಠಕ್ಕನು ಎಲ್ಲಿಯವನೋ ಬಂದಿದ್ದಾನೆ. ಎಲ್ಲಿ ಏನು ಮಾಡಿ ಬಂದು ಈಗ ಭಿಕ್ಷುಕರ ಗುಂಪಿನಲ್ಲಿ ಸೇರಿಕೊಂಡಿದ್ದಾನೆಯೋ ಯಾರು ಬಲ್ಲರು. ನಾಳೆ ಪೋಲೀಸಿನವರು ಈತನ ಸಲುವಾಗಿ ನಮ್ಮನ್ನೆಲ್ಲಾ ಈತನ ಮುಸಲತ್ತಿನವರೆಂದು ದಂಡಿಸಿದರೆ ನಾವೇನು ಮಾಡೋಣ. ಈತನ ಚಾಲಚಲಾವಣೆಯ ಮೇಲಿಂದ ಇವನು ಗೈರಚಾಲಿಯ ಮನುಷ್ಯನಿರಲಿಕ್ಕೇಬೇಕೆಂದು ಸ್ಪಷ್ಟವಾಗಿ ತೋರುತ್ತದೆ. ಆದ್ದರಿಂದ ನೀವು ಇವನ ಯೋಗ್ಯ ಬಂದೋಬಸ್ತ ಮಾಡಿಸಲಿಕ್ಕೇಬೇಕು' ಎಂದು ವಿಜ್ಞಾಪಿಸಿಕೊಂಡನು. ಆಗ ಪೋಲೀಸನೂ—ಹೌದು ಹೌದು! ಈಗೊಂದು ತಾಸಿನ ಹಿಂದೆ ಇವನು ಕಕ್ಕಾವಿಕ್ಕಿಯಾಗಿ ಮಂದಿರದಲ್ಲಿ ಅತ್ತಿತ್ತ ಸುಳಿದಾಡುತ್ತಿದ್ದುದನ್ನು ನಾನು ಸಹ ನೋಡಿ ಆವಾಗಿನಿಂದ ಇವನ ಮೇಲೆ ಲಕ್ಷ್ಯವನ್ನಿಟ್ಟುಕೊಂಡೇ ನಿಂತಿದ್ದೇನೆ' ಎಂದು ಹೇಳಿದವನೇ ಕಾಗದಪತ್ರ ತಯಾರಿಸಿ ಹೊಸಬನನ್ನು ಠಾಣ್ಯಕ್ಕೆ ಕಳಿಸಿಯೇ ಬಿಟ್ಟನು. ಭಲಾ ವಿಧಿಯೆ!!!

ಇವರನ್ನು ಹೀಗೆ ಪೋಲೀಸಿನವರು ಬಂಧಿಸಿಕೊಂಡು ಹೊರಟ ಕೂಡಲೆ ಒಮ್ಮೆಲೆ ನಡುಬಜಾರದಲ್ಲಿ 'ತುಡುಗ, ತುಡುಗ' ಎಂಬ ಶಬ್ದವಾಗ ತೊಡಗಿತು. ಜನರೆಲ್ಲರೂ ತಂಡ ತಂಡವಾಗಿ ನೆರೆಯ ತೊಡಗಿದರು. ಎಲ್ಲಿ ಏನು ನಡಿಯಿತೆಂಬುದು ಯಾರಿಗೂ ಗೊತ್ತಾಗಲಿಲ್ಲ. 'ಬಿಡಬೇಡಿರಿ ಬಿಡಬೇಡಿರಿ ಬಾಂಚೋದ್ ಬದ್ಮಾಷ್‌ಕೋ' ಅಂತ ಜನರ ಕೂಗಾಟವೇ ಕೂಗಾಟ. ಹಾಹಾ ಅನ್ನುವುದರಲ್ಲಿಯೇ ಸಾವಿರಾರು ಜನರು ನೆರೆದರು.

ನೆರೆದ ಜನರಲ್ಲಿ ಅಪ್ಪಾಸಾಹೇಬರನ್ನು ಒದೆಯುವನೊಬ್ಬ; ನುಗಿಸುವನೊಬ್ಬ; ಕೆನ್ನೆಗೆ ಏಟುಕೊಡುವವನು ಮತ್ತೊಬ್ಬ. ಈ ರೀತಿಯಾಗಿ ಯಾತನೆಗೆ ಮೊದಲಾಯಿತು. ಇಷ್ಟರಲ್ಲಿ ಒಬ್ಬನು ಅವರನ್ನು ಗುರುತಿಸಿದನು. 'ಓಹೋ ಹಾಗೆ ಮಾಡಬೇಡಿರೋ, ಬಡವರ ಬಂಧುಗಳಾದ ಅಪ್ಪಾಸಾಹೇಬರು ಇವರು! ಅಂಥವರಿಗೆ ಇಂಥ ಕೆಟ್ಟಬುದ್ಧಿ ಹೇಗೆ ಬಂತೋ!!' ಎಂದು ಕೂಗಿದ ಕೂಡಲೆ ಎಲ್ಲರೂ ವಿಸ್ಮಯಪಟ್ಟು ದೂರ ಸರಿದರು. ಜನರು ಬೆರಗಾಗಿ ಹೀಗೆ ನೋಡುತ್ತಿರುವಂತೆಯೇ ಪೋಲೀಸಿನವರು ಕೈದಿಯನ್ನು ಕಚೇರಿಗೆ ಒಯ್ದರು. ಅವರನ್ನು ತಗೆದುಕೊಂಡು ಹೋದಾಗ ಫೌಜದಾರರು ತಮ್ಮ ಟೇಬಲಿನಲ್ಲಿ ಕುಳಿತು ಏನನ್ನೋ ಬರೆಯುತ್ತಿದ್ದರು. ತಮ್ಮ ಬರೆಯುವ ಏಕಾಗ್ರತೆಯಲ್ಲಿ ಕೈದಿ ಬಂದನ್ನು ಎಷ್ಟೋ ವೇಳೆ ಗೊತ್ತಾಗಲಿಲ್ಲ. ಸಿಪಾಯಿಯು ಎರಡು ಮೂರು ಸಾರೆ ವಿಜ್ಞಾಪಿಸಿಕೊಂಡಾಗ ಮಾತ್ರ ಫೌಜದಾರರು 'ಏನು?' ಎಂದು ಪ್ರಶ್ನೆ ಮಾಡಿದರು. ಪ್ರಶ್ನೆಮಾಡಿದರಿಷ್ಟೆ. ಆದರೆ ಅವರ ಕಡೆ ಹೊರಳಿ ನೋಡದೆ ತಮ್ಮ ಕೆಲಸದಲ್ಲಿಯೇ ಮಗ್ನರಾಗಿದ್ದರು. ಸಿಪಾಯಿಯು ನಡೆದ ಎಲ್ಲ ಸಂಗತಿಯನ್ನು ಬಿನ್ನವಿಸಲು 'ಹಾಂ' ಎನ್ನುತ್ತ ಫೌಜದಾರರು ಅಪರಾಧಿಯ ಕಡೆಗೆ ನೋಡಿದರು. ಆಗ ಕೈದಿಯಲ್ಲಿದ್ದ ಅಪ್ಪಾಸಾಹೇಬರ ಗುರುತು ಚೆನ್ನಾಗಿ ಹತ್ತಿದ್ದರಿಂದ ಫೌಜದಾರರು ಚಕಿತರಾದರು. ಅಪರಾಧಿಯಾಗಿ ಇದುರಿನಲ್ಲಿ ನಿಂತ ನಿವೃತ್ತ ನ್ಯಾಯಾಧೀಶರನ್ನು ನೋಡಿ ಫೌಜದಾರರಿಗೆ ಏನು ಅನಿಸಲಿಕ್ಕಿಲ್ಲ? ಆಗ ಅವರ ಕೈಯಲ್ಲಿಯ ಲೆಕ್ಕಣಿಕೆಯು ತನ್ನಿಂದ ತಾನೇ ಕಳಚಿ ಬಿದ್ದಿತು. ಮೊದಲು ಒಂದು ಖುರ್ಚಿಯನ್ನು ಮುಂದಕ್ಕೆ ಸರಿಸಿ ಕೂತುಕೊಳ್ಳುವುದಕ್ಕೆ ಯಜಮಾನರಿಗೆ ವಿಜ್ಞಾಪಿಸಿಕೊಂಡನು.

ಆ ಫೌಜದಾರನು ಎಷ್ಟೋ ಸಾರೆ ಅಪ್ಪಾಸಾಹೇಬರ ಕೈಕೆಳಗೆ ತನ್ನ ಫೌಜದಾರಿ ಖಟ್ಲೆಗಳನ್ನು ಪರಿಚಯ ಮಾಡಿಕೊಡುತ್ತಿದ್ದನು. ಈಗ ಅವನ ಮುಂದೆಯೆ ದೈವವಶಾತ್ ಅಪ್ಪಾಸಾಹೇಬರು ಅಪರಾಧಿಯಾಗಿ ನಿಲ್ಲಬೇಕಾಯಿತು.

ಅಪ್ಪಾಸಾಹೇಬರು ಹಾಗೇ ನಿಂತುಕೊಂಡೇ ಇದ್ದರು. ಫೌಜದಾರರೇ ಆಗ್ರಹದಿಂದ ಕೈ ಹಿಡಿದು ಕುರ್ಚಿಯ ಮೇಲೆ ಕುಳ್ಳಿರಿಸಿದರು. ಕೆಲವು ವೇಳೆ ಮೌನವಾಗಿ ಕುಳಿತು ಫೌಜದಾರರು—'ಆದದ್ದಾದರೂ ಏನು ?' ಎಂದು ಉಪಾಯವಿಲ್ಲದೆ ಕೇಳಿದರು. 'ತಾವು ಒಳ್ಳೇ ಮನುಷ್ಯರು. ನ್ಯಾಯಾಧೀಶರಾಗಿ ತಾವು ಈ ಊರಲ್ಲಿ ಬಾಳಿದವರು. ತಮ್ಮ ದೈವವು ಹೀಗೇಕಾಯಿತು ?' ಎಂದು ಮತ್ತೆ ಮತ್ತೆ ಫೌಜದಾರನು ಕೇಳತೊಡಗಿದಾಗ ಯಜಮಾನರು ತಮ್ಮ ಎಲ್ಲ ಸಂಗತಿಯನ್ನು ಹೇಳಿಕೊಂಡರು. ತಮ್ಮ ಉದ್ದೇಶವನ್ನೂ ದುರ್ದೈವ ತರುವ ತೊಂದರೆಗಳನ್ನೂ ಉಸುರಿದರು. ಮನ ಕರಗಿಸುವ ಅವರ ಎಲ್ಲ ಸಂಗತಿಗಳನ್ನು ಕೇಳಿ ಆ ಫೌಜದಾರನೂ ಕಣ್ಣೀರಿಟ್ಟನು. ಅಲ್ಲಿರುವ ಸಿಪಾಯಿಗಳೂ ಮರುಗಿದರು. ಕಡೆಗೆ ಫೌಜದಾರರು ಯಾರಿಗೆ ಹೆಂಡರುಮಕ್ಕಳಿದ್ದಾರೆಯೋ ಅವರು ಈ ರೀತಿಯಾಗಿ ನೌಕರಿಯನ್ನು ಪರಿತ್ಯಜಿಸಿ ಅನ್ನನ್ನಗತಿಯಾಗಿ ತಿರುಗುವುದು ಉಚಿತವಲ್ಲ. ಅದನ್ನೆಲ್ಲ ತಮಗೆ ಉಪದೇಶ ಮಾಡುವ ವೇಳೆಯೂ ಇದಲ್ಲ. ಈಗ ತಮ್ಮ ಮಗುವಿನ ಆರೈಕೆಯನ್ನು ಮಾಡುವುದೇ ಮೊದಲನೆಯ ಕೆಲಸವಾಗಿದೆ. ಆದರೆ ತಾವು ಮಾತ್ರ ಈ ದಿನ ಇಲ್ಲೇ ಇರಬೇಕಾಗುವದು. ತಮ್ಮ ಮುಕ್ತತೆಯ ಬಗೆಗೂ ನನಗೆ ಶಕ್ಯವಿದ್ದಷ್ಟು ನಾನು ಪ್ರಯತ್ನಿಸುತ್ತೇನೆ.' ಎಂದು ಆಡಿದರು. ಆದಕ್ಕೆ ಅಪ್ಪಾಸಾಹೇಬರು ಧೈರ್ಯಯುಕ್ತವಾಣಿಯಿಂದ 'ನಾನು ದೈವಕ್ಕೆ ಹೆದರುವದನ್ನೇ

ಎಂದೂ ಅರಿಯೆನು. ನನಗೆ ಯುಕ್ತ ಕಂಡಂತೆ ನಾನು ಮಾಡಿದ್ದೇನೆ. ನಿಮಗೆ ಯುಕ್ತಕಂಡಂತೆ ನೀವು ಮಾಡಿರಿ' ಎಂದರು. ಅದಕ್ಕೆ ಫೌಜದಾರರು—' ತಾವು ಮಾತ್ರ ಈ ದಿನ ಕಾರಾಗೃಹದಲ್ಲಿಯೇ ಇರಬೇಕಾತ್ತದೆ. ಯಾಕೆಂದರೆ ಪೋಲಿಸರ ಕಾಗದಪತ್ರಗಳ ವಿಚಾರಣೆ ನಡಿಸದೆ ಬಿಡಲಿಕ್ಕಾಗುವದಿಲ್ಲ. ಅದಕ್ಕಾಗಿ ನನಗೆ ಕೆಡಕೆನಿಸುವದು. ಉಪಾಯವಿಲ್ಲ. ಆದರೆ ಅಲ್ಲಿ ತಾವು ನಿಶ್ಚಿಂತರಾಗಿರಬೇಕೆಂದು ಬೇಡಿಕೊಳ್ಳುತ್ತೇನೆ. ನಾಳೆ ಸೂರ್ಯೋದಯಕ್ಕೇನೇ ತಮ್ಮ ಬಿಡುಗಡೆಯನ್ನು ನಿಶ್ಚಯವಾಗಿ ಮಾಡಿಸುತ್ತೇನೆ. ಮತ್ತು ಈಗಲೇ ನಾಯ್ಕಲ್ಲಿನಿಂದ ನಿಮ್ಮ ಊರಿಗೆ ಔಷಧ ಕಳಿಸುತ್ತೇನೆ' ಎಂದು ಹೇಳಿ ಅವರನ್ನು ಕಳಿಸಿಕೊಟ್ಟರು.

ಫೌಜದಾರರು ಆಜ್ಞಾಪಿಸಿದ ಮೇರೆಗೆ ಪೋಲೀಸಿನವರು ಅಪ್ಪಾಸಾಹೇಬರನ್ನು ಲಕಾಪಿಗೆ ತಗೆದುಕೊಂಡು ಹೋದರು. ಆಗ ಮೂರೂ-ಸಂಜೆಯ ಹೊತ್ತು. ಲಕಾಪಿನಲ್ಲಿ ದೀಪವಿಲ್ಲ. ಕಗ್ಗತ್ತಲಲ್ಲಿ ಬರಿನೆಲದ ಮೇಲೆ ಶಯನ. ಆಯಿತು ಸಂಜೆಯ ವರೆಗೆ ತೊಳಲಾಡಿ ದಣಿದ ಅಪ್ಪಾಸಾಹೇಬರಿಗೆ ಅಂಥಲ್ಲಿಯೂ ನಿದ್ರೆ ಬಂದಿತು. ಆ ಗುಡಿಯ ಮುಂದಿನ ಮುದಿ ಭಿಕ್ಷುಕನು ಇನ್ನುಮೇಲಾದರೂ ಇವರ ಸಮಾಚಾರವನ್ನು ಬಿಟ್ಟುಬಿಡಬೇಕಾಗಿದ್ದಿತಷ್ಟೇ? ಆದರೆ ಆತನು ಹಾಗೆ ಮಾಡಲಿಲ್ಲ. ಇವರ ಕನಸಿನಲ್ಲಿ ಕಾಳಾಗಿ ಕುಳಿತೇ ಇದ್ದನು. ಆದರೆ ಹಗಲು ಹೊತ್ತಿನಲ್ಲಿದ್ದ ಆತನ ಉಗ್ರತನವು ಮಾತ್ರ ಈಗ ಇರಲಿಲ್ಲ. ಆತನು ಇವರನ್ನು ಬಹಳೇ ಪ್ರೀತಿಯಿಂದ ನೋಡುತ್ತ ಇವರಿಗೊಂದು ತತ್ವವನ್ನು ಕಲಿಸುವ ಬೋಧಕನಂತೆ ತನ್ನ ಆತ್ಮಚರಿತ್ರವನ್ನು ಹೇಳತೊಡಗಿದನು. ಅದು ಹೇಗೆಂದರೆ:—' ಓ ವಿಲಕ್ಷಣ ಮನುಷ್ಯನೆ ಕೇಳು! ಇದು ವ್ಯವಹಾರವಲ್ಲದಿದ್ದರೆ ಏನೆಂದು ತಿಳಿದುಕೊಂಡಿರುವಿ? ಎಲ್ಲ ವೃತ್ತಿಗಳಂತೆ

ಭಿಕ್ಷಾವೃತ್ತಿಯನ್ನೂ ಕಲಿಯಬೇಕಾಗುವುದೆಂಬ ಮಾತು ಯಾವಾಗಲೂ ನೆನಪಿಸಲ್ಲಿರಲಿ. ನಾನು ಸುಮಾರು ಹತ್ತು ಹನ್ನೆರಡು ವರುಷಗಳ ಪೂರ್ವದಲ್ಲಿ ಭಿಕ್ಷೆ ಬೇಡಲು ಆರಂಭಮಾಡಿದೆ. ಆಗ ಭಿಕ್ಷೆ ಹೇಗೆ ಬೇಡಬೇಕು, ಎಂಬ ವಿದ್ಯೆ ನನಗೆ ಗೊತ್ತಿರಲಿಲ್ಲ. ನಾನು ಎಷ್ಟು ರೀತಿ ಬಾಯಿ ತೆರೆದು ಮುಂದಿಗೆ ಬೇಡುವೆನೊ ಅಷ್ಟು ಹೆಚ್ಚಾಗಿ ಭಿಕ್ಷೆಯನ್ನು ದೊರಕಿಸುವೆನೆಂದು ತಿಳಿದುಕೊಂಡಿದ್ದೆ. ಆದರೆ ಆ ಕಲ್ಪನೆಯು ಆಕಾಶ ಕುಸುಮವುವೆಂದು ಹಿಂದಿನಿಂದ ತಿಳಿಯಿತು. ಬಂದ ಭಿಕ್ಷಾನ್ನದಿಂದಲೇನೇ ನನ್ನ ಮತ್ತು ರೋಗದಿಂದ ಪೀಡಿತಳಾದ ನನ್ನ ಪತ್ನಿಯ ಉದರಪೋಷಣೆಯು ಹಾಗೂ ಹೀಗೂ ಆಗಬೇಕಾಗಿದ್ದಿತು. ಮುಂದೆ ಕೆಲ ದಿನಗಳಲ್ಲಿ ನಾನೂ ರೋಗದಿಂದ ಪೀಡಿತನಾದೆ. ಇದ್ದರಿಂದ ಭಿಕ್ಷೆ ಬೇಡುತ್ತ ತಿರುಗುವುದು ಕೂಡ ನನ್ನಿಂದ ಶಕ್ಯವಾಗಲಿಲ್ಲ. ಆಗ ನನ್ನ ಹೆಂಡತಿಗೆ ಅನ್ನ ನೀರುಗಳು ಸಿಗಲಾರದೆ ಸತ್ತುಹೋದಳು. ಅಯ್ಯೋ! ಏನು ಹೇಳಲಿ. ಐವ್ವತ್ತು ಸಾವಿರ ಜನರುಳ್ಳ ಈ ಊರಲ್ಲಿ ಯಾವ ಹಣವಂತರು ತಾವು ಉಂಡ ಪೃಷ್ಟಾನ್ನ ಭೋಜನದ ಉಳಿದುಳಿದ ಭಾಗವನ್ನು ಗಟಾರಕ್ಕೆ ಹಾಕುತ್ತಿದ್ದರೋ ಅಂಥ ಶ್ರೀಮಂತರ ಓಣಿಯಲ್ಲಿ ನನ್ನ ಹೆಂಡತಿಗೆ ಒಂದು ತುತ್ತು ಅನ್ನ, ಒಂದು ಗುಟುಕು ನೀರು ಲಭಿಸಲಿಲ್ಲ. ಈ ರೀತಿ ಹಳ್ಳಿಗಳಲ್ಲಿ ಸಂಭವಿಸುವುದಿಲ್ಲ. ಆದರೆ ಪಟ್ಟಣದ ರೀತಿಯೇ ಬೇರೆ. ಕೊನೆಗೆ ನನ್ನ ಹೆಂಡತಿ ಅಗಲಿಯೇ ಬಿಟ್ಟಳು. ಆಕೆ ತೀರಿಹೋದ ಮೇಲೆ ನಾನು ಪರದೇಶಿಯಾದೆ. ಮುಂದೆ ರೋಗಾರ್ತನಾದ ನನಗೂ ಅನ್ನ ದೊರೆಯುದಾಯಿತು. ಒಂದು ದಿನ ಒಂದು ಬೀದಿಯ ಮಗ್ಗುಲಲ್ಲಿ ಬಿದ್ದುಕೊಂಡು ಆಲೋಚಿಸತೊಡಗಿದೆನು. ಕೆಲಹೊತ್ತಿನಲ್ಲಿಯೇ ನಿಬಿಡವಾದ ಈ ಜನಮಧ್ಯದಲ್ಲಿಯೇ ಹೊಟ್ಟೆಗಿಲ್ಲದೆ ಸಾಯುವೆನೇನೋ ಎಂಬುದೇ ನನ್ನ ಆ

ಆಲೋಚನೆ. ಆದರೆ ಏನು ಆಶ್ಚರ್ಯ ಹೇಳಲಿ! ಆಗ ಬೀದಿಗುಂಟ ಹೋಗಿ ಬರುವ ಜನರು ಒಂದೊಂದೇ ಬಿಲ್ಲೆಯನ್ನು ನನ್ನ ಮುಂದೆ ಒಗೆಯತೊಡಗಿದರು. ಸಾಯಂಕಾಲಕ್ಕೆ ನಾನು ಅವುಗಳನ್ನೆಲ್ಲ ಎಣಿಸಿ ಕೊಂಡು ನೋಡಿದರೆ ಹತ್ತಾಣೆ ರೊಕ್ಕ ಬಂದಿದ್ದವು. ಎಷ್ಟೋ ದಿನಗಳಿಂದ ಮರುಗಿದ ನನ್ನ ಕರುಳುಗಳಿಗೆ ಅಂದು ಸಾಕಾಗುವಷ್ಟು ಅನ್ನಬಿತ್ತು. ನನ್ನ ತೃಪ್ತಿಯು ತೇಗಿನೊಡನೆ ನಾನು ನನ್ನ ಹೆಂಡತಿಯ ಶ್ರಾದ್ಧದ ಊಟ ವನ್ನು ಉಣ್ಣುತ್ತಿದ್ದೇನೆ ಎಂದೆನಿಸುತ್ತಿದ್ದಿತು. ಅಂದಿನಿಂದ ನನಗೆ ಭಿಕ್ಷೆ ಬೇಡುವ ಕುಶಲತೆ ಗೊತ್ತಾದ್ದರಿಂದ ಅಲ್ಲಿಯಿಂದ ಮುಂದೆ ಎಂದೂ ನಾನು ಉಪವಾಸ ಬೀಳಲಿಲ್ಲ. ಈಗ ಭಿಕ್ಷೆಯನ್ನು ಬೇಡುವ ಆ ಕುಶಲತೆ ಯನ್ನು ನೀನೂ ಕಲಿತುಕೊ. ನಿನಗೆ ನಾನು ಹೇಳಿ ಕೊಡುತ್ತೇನೆ. '**ಬೇಡುವವ ಭಿಕ್ಷುಕನಲ್ಲ; ಬೇಡಿಸಿಕೊಳ್ಳುವವ ದಾನಿಯಲ್ಲ**' ಇನ್ನು ಮುಂದೆ ನೀನು ಯಾರಿಗೂ ಏನೂ ಬೇಡ ಬೇಡ. ಅಷ್ಟಾದರೆ ನಿನಗೆ ಏನೂ ಕೊರತೆಯುಂಟಾಗಲಾರದು. ಇದೇ ನಿನಗೆ ನಾನು ಹೇಳುವ ದಿವ್ಯ ಉಪದೇಶ.'

ಯಜಮಾನರು ಕನಸು ತಿಳಿದು ಎದ್ದರು. ಎಚ್ಚರಾದರೂ ಆ ಸ್ವಪ್ನವು ಕಣ್ಣ ಮುಂದೆ ಕಟ್ಟಿದಂತೆಯೇ ಅನಿಸುತ್ತಿತ್ತು. ಆ ವೃದ್ಧ ಭಿಕ್ಷುಕನು ಹೇಳುತ್ತಿದ್ದ ಮಾತು ಮತ್ತೆ ಮತ್ತೆ ಇವರ ಕಿವಿಯಲ್ಲಿ ಕೇಳಿಸಿದಂತೆ ಆಗುತ್ತಲೇ ಇತ್ತು. **ಬೇಡುವವ ಭಿಕ್ಷುಕನಲ್ಲ, ಬೇಡಿಸಿಕೊಳ್ಳುವವ ದಾನಿಯಲ್ಲ**' ಆದ್ದರಿಂದ ಯಾರಿಗೂ ಬೇಡ ಬೇಡ. ಅಷ್ಟಾದರೆ ನಿನಗೆ ಏನೂ ಕೊರತೆಯುಂಟಾಗದು.'

'ಸತ್ಯವನ್ನು ಪಡೆಯಬೇಕೆನ್ನುವವರು ಸತ್ಯ-ಸತ್ಯವಾಗಿಯೂ ಸರ್ವವನ್ನು ತ್ಯಾಗಮಾಡಬೇಕಾಗುವದು. ತ್ಯಾಗವನ್ನು ಮಾಡಲು

ಎಂದು ನಾವು ಸಿದ್ಧರಾಗುವೆವೋ ಅಂದೇ ಸತ್ಯದ ಸವಿಯನ್ನು ಸೇವಿಸುವೆವು. ಆದರೆ ಇಂಥ ಸತ್ಯಾಸುರರಾಗಿಯು ಕುಟುಂಬದವರ ಹಗರಣವು ಮಾತ್ರ ತಪ್ಪಿದ್ದಲ್ಲ. ಅದಕ್ಕಾಗಿಯೇ ಫೌಜದಾರರು ' ಯಾರಿಗೆ ಹೆಂಡರು ಮಕ್ಕಳಿದ್ದಾರೆಯೋ ಅವರು ಈ ರೀತಿ ವರ್ತಿಸುವದು ಉಚಿತವಲ್ಲ ಎಂದು ಹೇಳಿದರು. ಸತ್ಯವಿದೆ; ಸತ್ಯವಿದೆ. ಈ ಮಾತು ಅಕ್ಷರಶಃ ಸತ್ಯವಿದೆ. ಕುಟುಂಬವಿದ್ದವರು ಹೀಗೆ ವರ್ತಿಸಬಾರದು. ಅಂದ ಮೇಲೆ ಹೀಗೆ ವರ್ತಿಸುವವರು ಕುಟುಂಬದೊಡನೆ ಇರಬಾರದು. ಇನ್ನು ನನ್ನ ಸತ್ಯವನ್ನು ಸಾಧಿಸುವದಕ್ಕಾಗಿ ನಾನೇನು ಮಾಡಬೇಕಾಗಿದೆಯೋ ಅದೆಲ್ಲವನ್ನೂ ಮಾಡಿಬಿಡುವೆನು ' ಎಂದು ಅಪ್ಪಾಸಾಹೇಬರು ಮನದೊಳಗೆ ನಿರ್ಧರಿಸಿದರು. ಹೊತ್ತು ಹೊರಡಬಂದಿದ್ದರೂ ಇನ್ನೂ ಹಾಗೇ ಬಿದ್ದುಕೊಂಡು ಮತ್ತೆ ಮತ್ತೆ ಅದನ್ನೇ ವಿಚಾರಿಸುತ್ತಲಿದ್ದರು. ಅಂದಿನ ಆ ಕತ್ತಲೆಯ ರಾತ್ರಿಯು ಹೀಗೆ ಅವರ ಜೀವನಕ್ಕೆ ಒಂದು ಪರಿಯಿಂದ ಬೆಳಕನ್ನೇ ಕೊಟ್ಟು ಓರೆಯಾಯಿತು.

ಸೂರ್ಯೋದಯಕ್ಕೇ ಅಪ್ಪಾಸಾಹೇಬರ ಬಿಡುಗಡೆಯಾಯಿತು. ಅವರು ಕಾರಾಗೃಹದಿಂದ ಹೊರಬೀಳುತ್ತಲೇ ಸೂರ್ಯಭಗವಂತನ ದರ್ಶನವಾಯಿತು. ಆ ಒಂದು ರಾತ್ರಿಯಲ್ಲಿ ಆದ ಅವರ ಭಾವಪರಿವರ್ತನವು ಸೂರ್ಯೋದಯದಂತೆಯೆ ಅವರ ಮುಖದ ಮೇಲೆ ಬೆಳಗುತ್ತಿತ್ತು.

ಯಜಮಾನರು ಬಳಕುತ್ತ ತಮ್ಮ ಮನೆಯಲ್ಲಿ ಕಾಲಿಟ್ಟರು. ಒಳಗೆ ಹೋಗಿ ನೋಡುತ್ತಾರೆ ಅವರ ಪತ್ನಿಯವರು ಮಗುವಿಗೆ ಹಾಲನ್ನು ಬೆಚ್ಚಗೆ ಮಾಡಿ ಕುಡಿಸುತ್ತಿದ್ದರು. ಅದನ್ನು ನೋಡುತ್ತ ಕ್ಷಣ ಹೊತ್ತು ಏನನ್ನೂ ಮಾತಾಡದೆ ಹಾಗೇ ನಿಂತುಕೊಂಡರು. ಅಪ್ಪಾಸಾಹೇಬರನ್ನು ನೋಡಿ ಪಾರ್ವತೆಮ್ಮನವರು ಮಗುವನ್ನು ಹೃದಯದಲ್ಲಿ ಅವಚಿಕೊಂಡು

ಅವಸರದಿಂದ ಇವರ ಕಡೆಗೆ ಬಂದು ಹರುಷಭರದಿಂದ ಹೀಗೆ ಉದ್ಗಾರ ತೆಗೆದರು—' ಓಹೋ! ನೀವು ಯಾವಾಗ ಬಂದಿರಿ? ನಿನ್ನೆ ಕೂಸು ಎಷ್ಟು ಕಷ್ಟ ಪಟ್ಟಿತು! ಸಾಯಂಕಾಲ ಕೂಸಿನ ಸಾಯುವ ಕಾಲವೇ ಬಂದಂತಾಗಿದ್ದಿತು! ಅಷ್ಟರಲ್ಲಿ ತಮ್ಮ ಮಿತ್ರರಾದ ಫೌಜದಾರರು ಔಷಧವನ್ನು ತಗೆದುಕೊಂಡು ಬಂದು ಕೂಸನ್ನು ಉಪಚರಿಸಿ ಹೋದರು. ಭಕ್ತವತ್ಸಲನಾದ ಶಂಕರನ ಹಾಗೆ ಬಂದು ನಮ್ಮ ದುಃಖವನ್ನು ದೂರು ಮಾಡಿದರು. ಪರಮಾತ್ಮನು ಎಂಥ ದಯಾಮಯನು!' ಹೀಗೆ ಜಗದೀಶನನ್ನು ಕೊಂಡಾಡುತ್ತ ಪಾರ್ವತೆಮ್ಮನವರು ಮಗುವನ್ನು ಅಪ್ಪಿಕೊಂಡು ಮುದ್ದಾಡುತ್ತ ಆ ಕಂದನನ್ನು ಪತಿದೇವರ ಕೈಯಲ್ಲಿ ಕೊಟ್ಟರು. ಮೃತ್ಯುಮುಖದಿಂದ ಪಾರಾದ ಶಿಶುವನ್ನು ನೋಡಿ ಯಜಮಾನರೂ ಪರಮಾತ್ಮನ ಅಗಾಧಲೀಲೆಯನ್ನು ಹೃದಯತುಂಬಿ ಕೊಂಡಾಡಿದರು.

ಅಪ್ಪಾಸಾಹೇಬರ ಅಂತರಂಗವಾದರೋ ತನ್ನ ದಾರುಣ ಸಿದ್ಧಾಂತವನ್ನು ಪುನಃ ಪುನಃ ಜಪಿಸುತ್ತಲೇ ಇದೆ. ' ಈ ಹೆಂಡತಿ, ಈ ಮಗು, ಈ ಮನೆ ಇವೆಲ್ಲವೂ ನನ್ನ ಸತ್ಯಾನುಸಂಧಾನಕ್ಕೆ ಬಂಧಕಗಳು ' ಎಂಬುದೇ ಅವರ ಒಳಗೊಳಗಿನ ನಿಬಿಡವಾದ ಆಲೋಚನೆಯು. ಅಷ್ಟರಲ್ಲಿ ಆ ಮಗು ಒಂದೇ ಸವನೆ ಅಳತೊಡಗಿತು. ಆಗ ಅವರು ಪಾರ್ವತೆಮ್ಮನವರಿಗೆ ' ಜ್ವರವಂತೂ ಇಲ್ಲ. ಆದರೂ ಹುಡುಗನು ಬಹಳೇ ಅಶಕ್ತನಾದ್ದರಿಂದ ಗಾಳಿಯಲ್ಲಿ ಬಹಳ ಹೊತ್ತು ನಿಲ್ಲುವುದು ಉಚಿತವಲ್ಲ, ನನಗೂ ಇರುಳಲ್ಲಿ ಚೆನ್ನಾಗಿ ನಿದ್ರೆಯಾಗಿಲ್ಲ. ಆದ್ದರಿಂದ ನೀನು ಕೂಸನ್ನು ಸಮಾಧಾನ ಪಡಿಸು. ನಾನು ಒಂದಿಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತೇನೆ. '

ಎಂದು ಹೇಳಿ ಒಂದು ಕೋಣೆಯಲ್ಲಿ ಹೋಗಿ ಮಲಗಿಕೊಂಡರು.

ಅವರಿಗೆ ಇನ್ನೂ ನಿದ್ರೆ ಹತ್ತಿರಲಿಲ್ಲ. ಇತ್ತ ಹೊರಗೆ ಪಡಸಾಲೆಯಲ್ಲಿ ಅವರ ಹೆಂಡತಿ ಕೂಸನ್ನು ಸಮಾಧಾನಪಡಿಸುತ್ತ ತಮ್ಮೊಳಗೇ ತಾವು ಏನೋ ಒಂದಿಷ್ಟು ಉಲ್ಲಾಸದಿಂದ ನುಣುನುಣು ಹಾಡತೊಡಗಿದರು. ಎಷ್ಟೋ ದಿನಗಳಿಂದ ಹೇಳಹೆಸರಿಲ್ಲದೆ ಎಲ್ಲೋ ಓಡಿಹೋಗಿದ್ದ ಹಾಡುಗಳು ಇಂದು ಪುನಃ ಪಾರ್ವತಮ್ಮನವರ ನಾಲಗೆಯ ಗದ್ದುಗೆಯನ್ನೇರಿದವು.

ಅಂತೂ ಹೀಗೆ ಹಗಲು ಕಳೆಯಿತು. ಇರುಳು ಬಂತು. ನಡುರಾತ್ರಿಯಲ್ಲಿ ಅಪ್ಪಾಸಾಹೇಬರು ನಿದ್ರೆಯಿಂದ ಎಚ್ಚತ್ತರು. ಎಚ್ಚತ್ತು ನೋಡುತ್ತಾರೆ ಎಲ್ಲಕಡೆಗೂ ನಿಶ್ಶಬ್ದವಾಗಿದ್ದಿತು. ಪೌರ್ಣಿಮೆಯ ಚಂದ್ರನ ಕಿರಣಗಳು ಪ್ರತಿಬಿಂಬಿಸಿ ಅವರ ಮನೆಯನ್ನೆಲ್ಲ ಬೆಳಗುತ್ತಿದ್ದವು. ಒಂದು ಕಡೆಗೆ ಒಂದೇ ಹಾಸಿಗೆಯ ಮೇಲೆ ತಾಯಿಮಕ್ಕಳಿಬ್ಬರೂ ಮುಖಕ್ಕೆ ಮುಖವನ್ನಿಟ್ಟು ಮಲಗಿಕೊಂಡಿದ್ದನ್ನು ನೋಡಿದರು. ಮಗುವು ತನ್ನ ಚಿಕ್ಕ ಕೈಯೊಂದನ್ನು ತಾಯಿಯ ಗಲ್ಲದಲ್ಲಿ ಇರಿಸಿದ್ದಿತು. ಆ ತಾಯಿ ಮಕ್ಕಳ ಆ ಸ್ವರ್ಗೀಯ ದೃಶ್ಯವು ಅಪ್ಪಾಸಾಹೇಬರ ಚಿತ್ತಕ್ಕೆ ಒಂದು ಬಗೆಯ ಪಾರಮಾರ್ಥಿಕ ಸಮಾಧಾನವನ್ನು ತಂದುಕೊಟ್ಟಿತು. ಎರಡೂ ಜೀವಗಳು ಒಂದನ್ನೊಂದು ಆಶ್ರಯಿಸಿ ನಿಶ್ಚಿಂತರಾಗಿ ಮಲಗಿಕೊಂಡಂತೆ ಅವರ ಮುಖದಲ್ಲಿ ಹೊಮ್ಮಾಡುವ ಆನಂದ ಕಿರಣಗಳು ಅಪ್ಪಾಸಾಹೇಬರಿಗೆ ಸೂಚಿಸುತ್ತಿದ್ದವು. 'ಇಂದಿಗೆ ಇವರು ಅನಾಥರಲ್ಲವಲ್ಲಾ! ಈ ಕಂದಯ್ಯನನ್ನು ಪರಮಾತ್ಮನು ಬದುಕಿಸಿದ್ದು ಇದಕ್ಕಾಗಿಯೇ! ನಾನು ಇನ್ನು ತುಂಬಾ ನಿಶ್ಚಿಂತನು!' ಎಂದೆನ್ನುತ್ತ ಅಪ್ಪಾಸಾಹೇಬರು ತಮ್ಮ ಹಾಸಿಗೆಯನ್ನು ಬಿಟ್ಟು ಎದ್ದರು. ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿದ ಆ ಹುಣ್ಣಿಮೆಯ ಬೆಳದಿಂಗಳು ಅವರಿಗೆ ಬಹಳ ಮನೋಹರವಾಗಿ ತೋರತೊಡಗಿತು.

'ಎಂಥ ಹಾಲು ಚೆಲ್ಲಿದ ಬೆಳದಿಂಗಳು ಇದು! ಎಷ್ಟು ಸುಖಮಯ ವಾಗಿದೆ!' ಎಂದು ಮನಸ್ಸಿನಲ್ಲಿಯೇ ಅನ್ನತೊಡಗಿದರು. ಈ ಬೆಳದಿಂಗಳು ಇಂದು ಈ ಮನೆಯನ್ನು ಈ ಪರಿ ಅಭೂತಪೂರ್ವವಾಗಿ ಬೆಳಗುತ್ತಿರುವುದಕ್ಕೆ ಕಾರಣವಿಲ್ಲದೆಯಿಲ್ಲ! ಸ್ವರ್ಗಸುಖವನ್ನು ಅನುಭವಿಸುತ್ತ ಮಲಗಿರುವ ಈ ತಾಯಿಮಕ್ಕಳ ಈ ರಮ್ಯದೃಶ್ಯವನ್ನು ನನಗೆ ತೋರಿಸಿ ತಾನೂ ಕಂಡು ತಣಿದು ನನ್ನ ಮುಂದಿನ ದಾರಿಯನ್ನು ನಿಚ್ಚಳಗೊಳಿಸಲಿಕ್ಕೆ ಈ ಬೆಳದಿಂಗಳು ಇದೆಲ್ಲ ಆಟವನ್ನು ಹೂಡಿದೆ!' ಎಂದು ಭಾವಿಸುತ್ತಿರುವಾಗ ಅಪ್ಪಾಸಾಹೇಬರಿಗೆ ಸೃಷ್ಟಿಯ ಸರ್ವಪದಾರ್ಥಗಳೂ ಹೊಸ ಹೊಸವಾಗಿ ಕಾಣತೊಡಗಿದವು. ತಾಯಿಯನ್ನು ಮಗು, ಮಗುವನ್ನು ತಾಯಿ ಹೀಗೆ ಒಬ್ಬರನ್ನೊಬ್ಬರು ಅಪ್ಪಿಕೊಂಡು ಮಲಗಿರುವುದನ್ನು ಅಪ್ಪಾಸಾಹೇಬರು ಮತ್ತೆ ನೋಡಿ 'ಈ ಎರಡು ಜೀವಗಳ ನಡುವೆ ಇನ್ನು ನನಗೆ ಎಳ್ಳಷ್ಟೂ ಸ್ಥಳವಿಲ್ಲ. ಇಲ್ಲಿ ಇವರಿಬ್ಬರಿಗೇನೇ ಸ್ಥಳವಿದೆ. ಮೂರನೆಯವನಾದ ನನ್ನ ಸ್ಥಳವು ಸತ್ಯದೆಡೆಯಲ್ಲಿದೆ. ಅದನ್ನು ಹುಡುಕುವುದಕ್ಕಾಗಿ ನಾನು ಹೋಗುತ್ತೇನೆ' ಎಂದು ಅನ್ನುತ್ತ ತಮ್ಮ ಹೆಂಡತಿ ಮತ್ತು ಮಗುವಿನ ಕಡೆಗೆ ತಿರುಗಿ ನೋಡದೆ ಮನೆಯನ್ನು ಬಿಟ್ಟು ಹೊರಬಿದ್ದರು! ಈ ತ್ಯಾಗವು ಅವರ ಚಿರಕಾಲದ ತ್ಯಾಗವಾಯಿತು! ಇಂದಿನಿಂದಲೇ ಇವರು ಚಿರಸನ್ಯಾಸಿ !!!

———

## ೩

ಅಪ್ಪಾಸಾಹೇಬರು ಹೆಂಡರು ಮಕ್ಕಳು, ಮನೆಮಾರುಗಳನ್ನೆಲ್ಲ ಬಿಟ್ಟುಕೊಟ್ಟು ಸನ್ಯಾಸಿಗಳಾಗಿ ಇಂದಿಗೆ ನಾಲ್ಕು ವರುಷಗಳಾದವು. ಈ ನಾಲ್ಕುವರುಷ ಅವರೆಲ್ಲಿದ್ದರೆಂಬುದು ಮನೆಯವರಿಗಾಗಲೀ ಊರವರಿಗಾಗಲೀ ಗೊತ್ತಾಗಲಿಲ್ಲ. ಇತ್ತ ಅವರ ಹೊಲವೀಗ ಪ್ರತಿವರುಷ ತಪ್ಪದೆ ವಿಪುಲವಾಗಿ ಬೆಳೆಯುಹತ್ತಿದ್ದರಿಂದ ಮನೆಯವರಿಗೆ ದುಡ್ಡಿನ ಕೊರತೆ ಎಷ್ಟೂ ಉಳಿದಿಲ್ಲ. ಪಾರ್ವತೆಮ್ಮನವರು ಅಪ್ಪಾಸಾಹೇಬರನ್ನು ಶೋಧಮಾಡುವುದಕ್ಕಾಗಿ ಎಷ್ಟೋ ಪ್ರಯತ್ನಿಸಿದರು. ಶ್ರೀಶೈಲವಲ್ಲಿ ಇರುವರೆಂಬ ಸುದ್ದಿಯನ್ನು ಕೇಳಿ ಅಲ್ಲಿಗೆ ಒಮ್ಮೆ ಹೋಗಿಯೂ ಬಂದರು. ಪಂಪಾಸರೋವರದ ದಂಡೆಯ ಮೇಲೆ ತಪಶ್ಚರ್ಯಮಾಡುತ್ತಿದ್ದಾರೆಂದು ಕೇಳಿದಾಗ ಯಾರನ್ನೋ ಕಳಿಸಿ ಹುಡುಕಿಸಿದರು. ಆದರೆ ಎಲ್ಲಿಯೂ ಅವರು ಸಿಗಲಿಲ್ಲ. ಅತ್ತ ಅಪ್ಪಾಸಾಹೇಬರು ಮನೆ ಬಿಟ್ಟಂದಿನಿಂದ ಒಂದೇ ಊರಲ್ಲಿ ಇರದೆ ಇಡೀ ಭರತಭೂಮಿಯನ್ನು ಕಾಲುಕೆಳಗೆ ಹಾಕಿದ್ದರು.

ಕಾಶಿಗೆ ಹೋದರು; ಉಜ್ಜಯಿನಿಗೆ ಹೋದರು; ಬದರೀನಾಥಕ್ಕೆ ಹೋದರು; ಶ್ರೀಶೈಲ ಕಂಚಿಗಳನ್ನು ಸಂದರ್ಶಿಸಿದರು; ಅಲ್ಲದೆ ರಾಮೇ-ಶ್ವರದ ಉಸುಬಿನಲ್ಲಿ ಬಿದ್ದುಕೊಂಡು ಅಪಾರವಾದ ಸಮುದ್ರರಾಜನನ್ನು ನೋಡುತ್ತ ಸಾಧನದ ಅಪಾರತೆಯನ್ನು ನೆನಸಿದರು.

ಕ್ಷೇತ್ರಯಾತ್ರೆಗಳನ್ನು ಮುಗಿಸಿ, ಆ ಮೇಲೆ ತಮ್ಮ ಸತ್ಯಸಂಕಲ್ಪಕ್ಕೆ ಬಂದು ಶಕ್ತಿಯನ್ನು ದೊರಕಿಸುವುದಕ್ಕಾಗಿ ತಪಶ್ಚರ್ಯನಿರತರಾದ ಸಾಧು ಸನ್ಯಾಸಿಗಳನ್ನು ಕಾಣಲು ಹೊರಟರು. ಹೇಮಕೂಟ ಪರ್ವತದಲ್ಲಿರುವ ಶಿವಯೋಗಿಗಳನ್ನು ಕಂಡರು; ಮಾತುಂಗ ಪರ್ವತದಲ್ಲಿಯ ಗುಹೆಯಲ್ಲಿ ಇರುತ್ತಿದ್ದ ಶಂಭುನಾಥರನ್ನು ಕಂಡರು. ಉಳಿವೆಯಲ್ಲಿರುವ ಪ್ರೇಮಾನಂದರನ್ನು ಸಂದರ್ಶಿಸಿದರು. ಹೀಗೆ ಇನ್ನೂ ಎಷ್ಟೋ ಜನ ಸಾಧು ಸಂತರ ದರ್ಶನಲಾಭವನ್ನು ಪಡೆದುಕೊಂಡರು. ಆದರೆ ಅಲ್ಲೆಲ್ಲಿಯೂ ಅವರ ಮನಸ್ಸು ಸಮಾಧಾನವಾಗಲಿಲ್ಲ. ಮುಂದೆ ಮಹಾಕೂಟಕ್ಕೆ ಬಂದು ಅಲ್ಲಿ ಎಷ್ಟೋ ದಿನ ವಾಸಿಸಿದರು. ಅಲ್ಲಿ ತಮ್ಮ ಆತ್ಮಸಂಯಮನವನ್ನು ಸಾಧಿಸುವುದಕ್ಕಾಗಿ ಎಷ್ಟೆಷ್ಟೋ ಸಾಧನೆಗಳನ್ನು ಮಾಡತೊಡಗಿದರು. ಆದಾವುದೂ ಅವರ ಮನಸ್ಸಿಗೆ ಶಾಂತಿಯನ್ನು ಕೊಡಲಿಲ್ಲ.

ಒಂದು ದಿನ ಬದಾಮಿಯ ಹೊಂಡದ ಆಚೆಯ ಮಗ್ಗುಲಲ್ಲಿರುವ ಗುಡ್ಡದ ಮೇಲಿನ ಒಂದು ದೊಡ್ಡದಾದ ಬಂಡೆಯ ಮೇಲೆ ಕುಳಿತು ಚಾಲುಕ್ಯರಾಜರ ಅಳಿದುಳಿದ ಕೋಟೆ ಕೊತ್ತಳಗಳನ್ನೂ ಅಸ್ತವ್ಯಸ್ತವಾಗಿ ಬೀಳುವ ಸ್ಥಿತಿಯಲ್ಲಿರುವ ಆ ಕೊಳದ ಮೆಟ್ಟಲುಗಳ ಸಾಲುಗಳನ್ನೂ ಕಠಿಣವಾದ ಕಲ್ಲುಗಳನ್ನು ಮೇಣಕ್ಕಿಂತ ಮೆತ್ತಗೆ ಮಾಡಿ ಕುಸುರು ಕುಸುರಾಗಿ ಕೆತ್ತಿರುವ ಮೇಣಬಸ್ತಿಯ ಗುಹೆಗಳನ್ನೂ ನೋಡುತ್ತ

ಅಪ್ಪಾಸಾಹೇಬರು ಪುರಾತನ ಯುಗದಲ್ಲಿ ಈಜಾಡುತ್ತಲಿದ್ದರು. ಆಗ ಪಶ್ಚಿಮಕ್ಕೆ ಸೂರ್ಯನು ಇಳಿಇಳಿಯುತ್ತ ನಡೆದಿದ್ದನು. ಹಕ್ಕಿಪಕ್ಕಿಗಳು ಚಿಲಿಪಿಲಿಗುಟ್ಟುತ್ತ ತಮ್ಮ ಗೂಡು ಸೇರಲು ಹೊರಟಿದ್ದವು. ಇದೆಲ್ಲ ವನ್ನು ನೋಡುತ್ತಿದ್ದ ಅಪ್ಪಾಸಾಹೇಬರು 'ಅಸ್ಥಿರ; ಎಲ್ಲವೂ ಅಸ್ಥಿರ. ಭಾರತದ ಕೀರ್ತಿಯನ್ನು ಬೆಳಗಿಸ ಚಾಲುಕ್ಯರಾಜರ ಮನೆಯಿದು! ಇಲ್ಲಿ ಹೇಮಸಿರ್ಮಿತ ಮನೆಗಳಿದ್ದವು. ಸಂಪತ್ತಿಗೆಯ ಹಾಸಿಗೆಯಲ್ಲಿ ಹೊರ ಳಾಡುವ ರಾಜರಾಣಿಯರಿದ್ದರು. ನವರಸಪೂರಿತವಾದ ಕಾವ್ಯಗಳನ್ನು ಬರೆದ ಕವಿಗಳಿದ್ದರು; ಕವಿತ್ರಿಯರಿದ್ದರು. ಇಂಪಾದ ಗಾನವನ್ನು ಮಾಡಿ ಮೋಹಗೊಳಿಸುವಂಥ ಗಾಯಕರಿದ್ದರು. ಅಲ್ಲದೆ ಬ್ರಹ್ಮನ ರಾಣಿಯಾದ ಸರಸ್ವತಿಯನ್ನು ನಾಚಿಸುವ ವೀಣೆಗಾರ್ತಿಯರಿದ್ದರು. ಅವರೆಲ್ಲ ಈಗ ಎಲ್ಲಿ ಅಡಗಿದರು? ಜಗತ್ತಿನಲ್ಲಿರುವ ಆ ಕೋಮಲತೆ, ಆ ಕಠಿಣತೆ, ಆ ಸೌಮ್ಯತೆ, ಆ ರೌದ್ರತೆಗಳನ್ನೆಲ್ಲ ತಮ್ಮ ಕುಂಚುಗಳಿಂದಲೂ ಸುತ್ತಿಗೆಗಳ ಏಟುಗಳಿಂದಲೂ ಕಲ್ಲಲ್ಲಿ ಮೂಡಿಸುವ ಆ ಶಿಲ್ಪಿಗಳು ಎಲ್ಲಿ ಹೋದರು! ಅಷ್ಟು ವೈಭವದಿಂದ ಮೆರೆದ ಆ ಚಾಲುಕ್ಯ ರಾಜ್ಯವು ಈಗ ಇಲ್ಲಿ ಏಸಿತ್ತೆಂಬುದನ್ನೂ ಕೂಡ ಗುರುತಿಸಲಿಕ್ಕಾಗದಂಥ ವಿದ್ರೂಪಾಕಾರ ದಲ್ಲಿ ನರಳುತ್ತಿದೆಯಲ್ಲ!' ಎಂದನ್ನುತ್ತ ಒಳಗೊಳಗೇ ಜೀವನದ ಅಸ್ಥಿರ ತೆಯ ಬಗ್ಗೆ ನೊಂದುಕೊಳ್ಳುತ್ತಲಿದ್ದ ಅವರ ಆತ್ಮದ ಹಕ್ಕಿಯೂ ತನ್ನ ನಿಜಧಾಮವನ್ನು ಅರಸಲು ಆತುರಪಡುತ್ತಲಿದ್ದಿತು.

'ಯಾವ ಆಶೆಗಾಗಿ ನಾನು ಈ ರೀತಿಯಾಗಿ ಇಲ್ಲಿ ಕುಳಿತಿರುವೆ? ಜೀವನವೇನೋ ಅನಿತ್ಯ; ಈ ಮಾತು ಸತ್ಯವಿದೆ. ಆದರೆ ಅನಿತ್ಯವೇ ಇದ್ದ ಈ ಜೀವನದಲ್ಲಿ ಏನು ಬಯಸಿ ಈಗಿನ ಈ ತಪದ ಯಾತನೆಯನ್ನು ಭೋಗಿಸುತ್ತಿರುವೆ?' ಎಂಬ ಪ್ರಶ್ನೆಗಳೇಳತೊಡಗಿದಾಗ ಗದ್ದಕ್ಕೆ ಕೈ

ಇಟ್ಟು ವಿಚಾರಿಸುವರು. ' ದುಃಖಗಳಿಂದ ಶಾಶ್ವತವಾಗಿ ಮುಕ್ತನಾಗುವ ದಕ್ಕಾಗಿ ಆ ದುಃಖಗಳನ್ನೇ ಇನ್ನೂ ಭೋಗಿಸುತ್ತಿದ್ದೇನೆ. ಮುಳ್ಳನ್ನು ಮುಳ್ಳಿನಿಂದಲೇ ತಗೆಯಬೇಕಲ್ಲವೆ? ಅನಿತ್ಯಸಂಬಂಧವಾದ ಎಲ್ಲ ಆಶೆಗಳು ನಮ್ಮನ್ನು ದುಃಖದಲ್ಲಿ ಎಳೆದುಕೊಳ್ಳುತ್ತಿವೆ. ಆದ್ದರಿಂದ ದುಃಖದಲ್ಲಿ ಎಳೆದುಕೊಳ್ಳುವ ಆ ಆಶೆಗಳನ್ನೆಲ್ಲ ಬಿಟ್ಟುಕೊಟ್ಟು ದುಃಖದಿಂದ ದೂರಾಗ ಬೇಕೆಂಬ ಆಶೆಯೊಂದನ್ನೇ ಇಟ್ಟುಕೊಳ್ಳಬೇಕು. ನಾವು ದುಃಖವನ್ನು ಪರಿತ್ಯಾಗ ಮಾಡಬೇಕಾದರೆ ಬರೇ ಹೆಂಡರುಮಕ್ಕಳನ್ನು ಬಿಟ್ಟುಕೊಟ್ಟರೆ ಆಗದು. ನನ್ನದೆನ್ನುವ ಮಮಕಾರವನ್ನು ಸಂಪೂರ್ಣವಾಗಿ ಬಿಟ್ಟು ಕೊಡದಿದ್ದರೆ ದುಃಖವು ಎಂದಿಗೂ ನಾಶವಾಗದು ' ಎಂದು ಮನಸ್ಸಿನಲ್ಲಿ ಅನ್ನತೊಡಗಿದರು.

ಮುಂದೆ ಅಪ್ಪಾಸಾಹೇಬರು ತಮ್ಮ ಆಶೆ ಆಕಾಂಕ್ಷೆಗಳನ್ನು ಬಿಟ್ಟು ಕೊಡುವ ಸಾಧನೆಯಲ್ಲಿ ತೊಡಗಿಕೊಂಡರು. ಇವರು ತಮ್ಮ ಆಶೆಗಳನ್ನು ಬಿಡಬೇಕೆಂದಷ್ಟೂ ಅವು ಇವರಿಗೆ ಹೆಚ್ಚೆಚ್ಚಾಗಿ ಕಾಡತೊಡಗಿದವು. ಇಳಿಜಾರಿನೆಡೆಗೆ ನೀರು ಓಡಿಹೋಗುವಂತೆ ಇವರ ಮನಸ್ಸು ಈಗ ಒಂದೇ ಸವನೆ ತಮ್ಮ ಹೆಂಡರು ಮಕ್ಕಳುಗಳ ಕಡೆಗೆ ಓಡತೊಡಗಿತು. ಅಲ್ಲದೆ ಅವರ ಚಿಂತೆಯಲ್ಲಿಯೇ ಸಿಕ್ಕಿಕೊಂಡಿತು. ಆಗಿನ ಅವರ ಆಶೆ ಆಕಾಂಕ್ಷೆ ಗಳೂ ಕಾಮಕ್ರೋಧಾದಿಗಳೂ ಅವರ ಸಾಧಕ ಜೀವನದ ಪರಿಪೂರ್ಣತೆ ಗಾಗಿಯೇ ಅವರನ್ನು ಕಾಡಿದವೆಂಬುದು ನಮಗೆ ಹಿಂದಿನಿಂದ ಗೊತ್ತಾ ಗುವುದು.

ಈ ಸ್ಥಿತಿಗೆ ಬಂದ ಸಾಧಕರಿಗೆಲ್ಲಾ ಆ ಕಾಮಕ್ರೋಧಾದಿಗಳು ಒಮ್ಮೆ ತಮ್ಮ ಪ್ರಚಂಡವಾದ ಉಗ್ರಸ್ವರೂಪವನ್ನು ತೋರಿಸಿ ಅವರನ್ನು ಗೋಳಾಡಿಸದೆ ಬಿಡಲಾರವು. ಬಹುಜನ ಸಾಧಕರಿಗೆ ಮುಂದೆ ಬಿಡದೆ

ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಂಡು ಮಣ್ಣುಮುಕ್ಕಿಸುವವು. ನಾವು ನಮ್ಮ ಮಾನವತ್ವವನ್ನು ಬಿಟ್ಟು ದೇವತ್ವದ ರಾಜ್ಯದಲ್ಲಿ ಅಡಿ ಇಟ್ಟೆವೆಂದರೆ ಆ ದೇವತೆಗಳ ಹೊಟ್ಟೆಯಲ್ಲಿ ಒಂದು ರೀತಿಯ ಕಸವಿಸಿ ಏಳುವುದು. ಆಗ ಅವರು ಇವರನ್ನು ಯೋಗಭ್ರಷ್ಟರನ್ನಾಗಿ ಮಾಡುವದಕ್ಕಾಗಿ, ರಂಭೆಯನ್ನೊ ಅಪ್ಸರೆಯನ್ನೋ ಕಳಿಸಿಕೊಡುವರು. ಒಮ್ಮೊಮ್ಮೆ ಕಾಮನೂ ಬಹು ದೂರದಲ್ಲಿ ನಿಂತು ಕುಸುಮಬಾಣಗಳನ್ನೆಸೆದು ನಮ್ಮ ಹೃದಯವನ್ನು ಕಲಕಿಸುವನು. ಇದೆಲ್ಲಾ ನಡೆಯುವದು ಹೊರರಾಜ್ಯದಲ್ಲಿ ಅಲ್ಲ; ಒಳರಾಜ್ಯದಲ್ಲಿ. ಆದ್ದರಿಂದ ನಾವು ಧೈರ್ಯಗೊಂಡು ಅದನ್ನು ಎದುರಿಸಬೇಕಾಗುವದು. ನಮ್ಮ ಹೃದಯ, ನಮ್ಮ ಬುದ್ಧಿ, ನಮ್ಮ ಪ್ರಾಣ, ಮತ್ತು ಮನಸ್ಸು ಇವುಗಳನ್ನೆಲ್ಲ ನಮ್ಮ ಸ್ವಾಧೀನದಲ್ಲಿಟ್ಟುಕೊಂಡು ನಮ್ಮ ಗುರಿಯ ಕಡೆಗೆ ನಾವು ಲಕ್ಷ್ಯವನ್ನಿರಿಸಿದರೆ ಆಗ ಈ ಯಾವ ವೈರಿಗಳೂ ಏನೂ ಕೊಂಕುಗೊಳಿಸಲಾರವು. ಆದರೆ ಆ ಷಡ್ರಿಪುಗಳಿಗೆ ನಮ್ಮ ಮನೋಬುದ್ಧಿಗಳು ಸಹಾಯಕಗಳಾದರೆ ಆಗ ಅವು ತಾವು ಮಾಡುತ್ತಿರುವುದೆಲ್ಲಾ ಒಳ್ಳೆಯದೇ ಎಂದು ಸಿದ್ಧಮಾಡಿಕೊಡಲು ಪ್ರಯತ್ನಿಸುತ್ತವೆ. ಆದ್ದರಿಂದ ಆ ಬುದ್ಧಿ–ಮನಸ್ಸುಗಳ ಆಚೆಗೆ ಹೋಗಿ ನಿಂತು ಇದು ಯೋಗ್ಯವಲ್ಲವೆಂದು ಅವುಗಳಿಗೆಲ್ಲಾ ನಾವು ಆಜ್ಞೆ ಮಾಡಿದರೆ ಉಪಾಯವಿಲ್ಲದೆ ಅವು ನಮ್ಮ ಅಪ್ಪಣೆಯನ್ನು ಮನ್ನಿಸುವವು. ಅಪ್ಪಾಸಾಹೇಬರ ಉಗ್ರ ಸಾಧನೆಯ ಕಾಲದಲ್ಲಿ ಘಟಿಸಿದ ಇಂಥ ಒಂದೆರಡು ಸಂಗತಿಗಳನ್ನು ಹೇಳಬೇಕೆಂದು ಇದೀಗ ಕತೆಗಾರನ ಲೆಕ್ಕಣಿಕೆಯು ಆತುರಪಡುತ್ತಿದೆ. ಕೇಳಿರಿ.

ಅಪ್ಪಾಸಾಹೇಬರು ತಮ್ಮ ಸಾಧನೆಯನ್ನು ನಡಿಸಿದ ಕಾಲದಲ್ಲಿಯೇ ಒಮ್ಮೆ ಕೂಡಲಸಂಗಮದೇವರನ್ನು ಸಂದರ್ಶಿಸಬೇಕೆಂದು ಬಯಸಿದರು.

ಭಕ್ತನಾದ ಬಸವಣ್ಣನ ಸಾಧನಭೂಮಿಯಲ್ಲಿ ಒಮ್ಮೆಯಾದರೂ ನಾನು ಹೊರಳಾಡಿ ಬಂದರೆ ನನ್ನ ಮನದ ಆವೇಗವೆಲ್ಲಾ ನೊಂದಬಹುದೆಂದು ಅವರು ತಿಳಿದಿದ್ದರು. ತಮ್ಮ ಬಯಕೆಯಂತೆ ಹತ್ತೆಂಟು ದಿನಗಳ ವರೆಗೆ ಕಾಲುನಡಿಗೆಯಿಂದಲೇ ನಡೆಯುತ್ತ ಒಂದು ದಿನ ಸಾಯಂಕಾಲಕ್ಕೆ ಅಪ್ಪಾಸಾಹೇಬರು ಅಲ್ಲಿಗೆ ಹೋಗಿ ತಲುಪಿದರು. ತಮ್ಮ ಸಾಮಾನು ಗಳನ್ನು ಒಂದುಕಡೆ ಇಟ್ಟು ನಂತರ ನದಿಯಲ್ಲಿ ಸ್ನಾನಮಾಡಿದರು. ಸ್ನಾನಮಾಡಿ ದೇವರ ದರುಶನ ಮಾಡಿಕೊಂಡು ಸುತ್ತಲಿರುವ ಪೂಜಾರಿ ಗಳ ಮನೆಗಳಲ್ಲಿ ಭಿಕ್ಷೆಯನ್ನು ಬೇಡಿದರು; ಊಟ ಮಾಡಿದರು. ನಂತರ ನದಿಯ ದಡದಲ್ಲಿ ಕುಳಿತುಕೊಂಡು ಪೌರ್ಣಿಮೆಯ ಬೆಳದಿಂಗಳಲ್ಲಿ ಪ್ರಶಾಂತವಾಗಿ ಹರಿಯುವ ನದಿಯನ್ನು ನೋಡುತ್ತ ಮನಸ್ಸಿನಲ್ಲಿ ಜೀವನ ನದಿಯ ಬಗ್ಗೆ ಏನೇನೋ ಕಲ್ಪನೆಗಳನ್ನು ಹಾಕಿದರು.

ಮರುದಿನ ಮುಂಜಾನೆ ತಮಗಾಗಿ ಪ್ರಶಸ್ತವಾದ ಸ್ಥಳವೊಂದನ್ನು ಹುಡುಕಿಕೊಂಡರು. ನದಿಯ ದಡದಲ್ಲಿ ವಿಶಾಲವಾದ ಒಂದು ವೃಕ್ಷ ತಲದಲ್ಲಿ ತಮ್ಮ ಬಿಡಾರವನ್ನು ಸ್ಥಾಪಿಸಿದರು. ಸೂರ್ಯನು ನೆತ್ತಿಯ ಮೇಲೆ ಬಂದಾಗ ಸ್ನಾನಮಾಡಿ ಭಿಕ್ಷೆ ಬೇಡುವರು. ತಂದ ಅನ್ನವನ್ನು ಊಟಮಾಡಿ ಎಡೆಬಿಡದೆ ಹರಿಯುವ ಆ ನದಿಯನ್ನು ನೋಡುತ್ತ ಮಾನವ ಜೀವಿತದ ಬಗ್ಗೆ ಪುನಃ ಪುನಃ ವಿಚಾರಿಸುವರು. ಒಂದು ದಿನವಲ್ಲ, ಎರಡು ದಿನಗಳಲ್ಲ, ಎರಡು ಮೂರು ತಿಂಗಳು ಅಲ್ಲಿ ಕಾಲಕಳೆದರೂ ಅಪ್ಪಾಸಾಹೇ ಬರು ಯಾರ ಕೂಡಲೂ ಒಂದು ಮಾತು ಸಹ ಮಾತಾಡಿದ್ದು ಬಬ್ಬರೂ ಅರಿಯರು. ಹೀಗಿರುವ ಇವರ ಇರುವಿಕೆಯು ಅಲ್ಲಿಯ ಜನರಿಗೆ ಒಂದಿಷ್ಟು ಆಗಾಧವನ್ನು ಹುಟ್ಟಿಸದೆ ಬಿಡಲಿಲ್ಲ. ಆಗಾಧವು ಹೆಚ್ಚಾದಂತೆಲ್ಲ ಅವರ ಯೋಗಕ್ಷೇಮವನ್ನು ವಿಚಾರಿಸಲು ಜನರು ಬಬ್ಬೊಬ್ಬರಾಗಿ ಬರತೊಡಗಿ ದರು. ಆದರೂ ಇವರು ಯಾರ ಕೂಡಲೂ ಮಾತಾಡುತ್ತಿರಲಿಲ್ಲ.

ಆ ಊರಲ್ಲಿ ಶ್ರೀಶೈಲಪ್ಪನವರೆಂಬ ಒಬ್ಬ ಒಳ್ಳೇ ಗೃಹಸ್ಥರಿದ್ದರು. ಅವರಿಗೆ ಒಂದಿಷ್ಟು ಅಧ್ಯಾತ್ಮದ ಒಲವು ಇದ್ದದ್ದರಿಂದ ಮನೆಯ ಕೆಲಸಗಳನ್ನು ಅಲಕ್ಷಿಸಿ ಜಗತ್ತೆಲ್ಲಾ ಮಾಯೆಯಾಗಿದೆ ಎಂದು ಮನನ ಮಾಡುತ್ತ ಎಲ್ಲಿಯಾದರೊಂದು ಗುಡಿಯಲ್ಲಿಯೋ ಮಠದಲ್ಲಿಯೋ ಕೂತುಕೊಳ್ಳುವದೇ ಅವರ ದಿನದ ಕೆಲಸವಾಗಿದ್ದಿತು. ಅವರಿಗೆ ಹತ್ತೆಂಟು ಹೊಲಗಳಿದ್ದದ್ದರಿಂದ ಆರ್ಥಿಕ ತಾಪತ್ರಯವೆಷ್ಟೂ ಇರಲಿಲ್ಲ. ಮನೆಯಲ್ಲಿ ಅವರು, ಅವರ ಹೆಂಡತಿ, ಒಂದು ಸಣ್ಣ ಮಗು ಮತ್ತು ಇಪ್ಪತ್ತು ವರುಷದ ಹಿರಿಯ ಮಗಳೊಬ್ಬಾಕೆ ಇಷ್ಟು ಜನರಿದ್ದರು. ಅವರ ಮಗಳಿಗೂ ಒಂದು ಕೂಸಿದ್ದಿತು. ತಾಯಿಗೆ ಅವಳು ಬಹಳ ಪ್ರೀತಿಯವಳಾದ್ದರಿಂದ ಗಂಡನ ಮನೆಗಿಂತ ಇಲ್ಲಿಯೇ ಬಹಳ ದಿನ ಇರುತ್ತಿದ್ದಳು. ಆಕೆಯ ಗಂಡನೂ ಇಲ್ಲಿ ಸ್ವಲ್ಪ ದಿನ, ತನ್ನೂರಲ್ಲಿ ಸ್ವಲ್ಪದಿನ ಕಾಲಕಳೆಯುತ್ತಿದ್ದನು.

ನಮ್ಮ ಸನ್ಯಾಸಿಯ ಖ್ಯಾತಿ ದಿನದಿನಕ್ಕೆ ಬೆಳೆದಂತೆ ಶ್ರೀಶೈಲಪ್ಪನವರೂ ಅವರ ಕಡೆಗೆ ಹೋಗಿಬರುವ ರೂಢಿಯನ್ನು ಇಟ್ಟರು. ಅವರು ಹೆಚ್ಚು ಮಾತಾಡದಿದ್ದರೂ ಇವರು ಅವರ ಹತ್ತರ ತಾಸೆರಡು ತಾಸುಗಳವರೆಗೆ ಹೋಗಿ ಕೂಡತೊಡಗಿದ್ದರಿಂದ ಬರಬರುತ್ತ ಶ್ರೀಶೈಲಪ್ಪನವರೊಡನೆ ಅಪ್ಪಾಸಾಹೇಬರದು ಸಖ್ಯ ಬೆಳೆದು ಮಾತುಗಳು ಸುರುವಾದವು. ಅದು ಅವರಿಗೆ ಬಹಳ ಸಂತೋಷವನ್ನುಂಟು ಮಾಡಿತು. ಯಾಕೆಂದರೆ ಈ ಮೊದಲು ಶ್ರೀಶೈಲಪ್ಪನವರಿಗೆ ತಮ್ಮ ಮಾತು ಕೇಳುವವರಾರೂ ಸಿಗದೆ ಬಹಳ ಪೇಚಾಡುತ್ತಿದ್ದರು. ಆಯ್ತು ಮುಂಜಾನೆ ಎದ್ದು ತಂಬಿಗೆ ತೆಗೆದುಕೊಂಡು ಹೋದವರು ಊಟದ ವೇಳೆಗೇ ಮನೆಗೆ ಬರುವರು. ಊಟ ಮುಗಿಸಿ ಹೋದರೆಂದರೆ ರಾತ್ರಿಯ ಊಟಕ್ಕೆ ಬರುವರು. ಈ

ರೀತಿ ದಿನದಿನಕ್ಕೆ ಅವರ ಮೈತ್ರಿಯು ಅಖಂಡವಾಗಿ ಬೆಳೆದಂತೆಲ್ಲಾ ಅಪ್ಪಾಸಾಹೇಬರನ್ನು ಶ್ರೀಶೈಲಪ್ಪನವರು ಕುಟುಂಬದ ಒಂದು ವ್ಯಕ್ತಿಯಂತೆ ಭಾವಿಸತೊಡಗಿದರು. ಶ್ರೀಶೈಲಪ್ಪನವರ ಪತ್ನಿಯವರೂ ಬಹಳ ಧರ್ಮಿಷ್ಠರು. ಸಾಧು ಸಂತರು, ಬಡಬಗ್ಗರು ಎಂದರೆ ಇವರು ಜೀವ ಕೊಡುವರು. ಆದ್ದರಿಂದ ಅಪ್ಪಾಸಾಹೇಬರೆಂಪರೆ ಬೇರೆಯವರೆಂದು ಭಾವಿಸದೆ ದಿನಾಲು ತಮ್ಮ ಮನೆಯಿಂದಲೇ ಅವರಿಗೆ ಊಟಕ್ಕೆ ಎಡೆ ಕಳಿಸತೊಡಗಿದರು.

ಈ ರೀತಿ ಮತ್ತೆ ಕೆಲದಿನ ಕಳೆದ ಮೇಲೆ ಒಂದು ದಿನ ಶ್ರೀಶೈಲಪ್ಪನವರ ಹೆಂಡತಿಯವರು ಅಪ್ಪಾಸಾಹೇಬರ ತನಕ ತಾವೇ ಬಂದು 'ತಾವು ಹೀಗೆ ಇಂಥಲ್ಲಿ ಊಟ ಮಾಡುವುದು ನಮಗೆ ಸೊಗಸೆನಿಸುವುದಿಲ್ಲ. ಆದ್ದರಿಂದ ಇನ್ನುಮುಂದೆ ನಮ್ಮ ಮನೆಗೇ ಊಟಕ್ಕೆ ಬರಬೇಕು' ಎಂದು ಪಿಜ್ಞಾಪಿಸಿಕೊಂಡರು. ಅಲ್ಲಿಯೇ ಕುಳಿತ ಶ್ರೀಶೈಲಪ್ಪನವರೂ ಆ ಮಾತನ್ನು ಎತ್ತಿಹಿಡಿದು ಜುಲುಮೆಯನ್ನು ಮಾಡಿ ಊಟಕ್ಕೆ ತಮ್ಮ ಮನೆಗೇ ಅವರನ್ನು ಅಂದು ಕರೆದುಕೊಂಡು ಹೋದರು.

ಮುಂದೆ ದಿನಾಲು ಶ್ರೀಶೈಲಪ್ಪನವರ ಮನೆಯಲ್ಲಿಯೇ ಅಪ್ಪಾಸಾಹೇಬರ ಭೋಜನವಾಗತೊಡಗಿತು. ಮನೆಯವರ ಕೂಡ ಅವರ ಪರಿಚಯ ಬೆಳೆದಂತೆಲ್ಲ ಮನೆಯಲ್ಲಿ ಶ್ರೀಶೈಲಪ್ಪನವರಿರದಿದ್ದರೂ ಒಮ್ಮೊಮ್ಮೆ ತಾವೊಬ್ಬರೇ ಊಟಮಾಡಿ ಬರುತ್ತಿದ್ದರು. ಅಡಿಗೆಯಾಗುವದಕ್ಕೆ ಇನ್ನೂ ಸ್ವಲ್ಪ ತಡವಿದ್ದರೆ ಗ್ರಂಥಗಳನ್ನು ಓದುತ್ತ ಅಲ್ಲಿಯೇ ಒಂದು ಪಕ್ಕದ ಕೋಣೆಯಲ್ಲಿ ಕೂತುಕೊಳ್ಳುವರು.

ಹೀಗೆ ಕೆಲದಿನ ಕಳೆದನಂತರ ಮುಂದೆ ದಿನಾಲು ಊಟವಾದ ಮೇಲೆ ಸ್ವಲ್ಪ ವೇಳೆಯವರೆಗೆ ಮನೆಯವರೊಡನೆ ಮಾತಾಡುತ್ತ ಕುಳಿತು

ನಂತರ ತಮ್ಮ ಸ್ಥಳಕ್ಕೆ ಹೊರಡಬೇಕಾಗಿ ಬರಹತ್ತಿತು. ಆಗ ಎಲ್ಲರ ಪರಿಚಯವೂ ಹೆಚ್ಚೆಚ್ಚು ಬೆಳೆದಂತೆ ಶ್ರೀಶೈಲಪ್ಪನವರ ಮಗಳ ಪರಿಚಯವೂ ಅವರಿಗೆ ಹೆಚ್ಚಾಯಿತು. ಅವರು ಒಮ್ಮೊಮ್ಮೆ ಓದುತ್ತ ಕೋಣೆಯಲ್ಲಿ ಕುಳಿತಾಗ ಆಕೆ ತನ್ನ ಕೂಸನ್ನೆತ್ತಿಕೊಂಡು ಬಂದು 'ಸ್ವಾಮಿ ಮುತ್ಯಾಗ ನಾಂಬ ಮಾಡಪ್ಪಾ' ಎಂದು ನಮಸ್ಕಾರ ಮಾಡಿಸುವಳು. ಆಗ ಅಪ್ಪಾ ಸಾಹೇಬರು ಆ ಮಗುವಿನ ಬೆನ್ನು ಚಪ್ಪರಿಸುವರು. ಆದರಿಂದ ಆಕೆ ಹಿಗ್ಗುವಳು.

ಮುಂದೆ ದಿನಗಳು ಕಳೆದಂತೆಲ್ಲ ಹೆಚ್ಚೆಚ್ಚು ಸಲುಗೆಯಿಂದ ಅವರ ಸಮೀಪಕ್ಕೆ ಕುಳಿತು ಮಾತುಗಳನ್ನು ಆಕೆ ಹೇಳುವಳು; ನಗುವಳು. ಮೊದಮೊದಲಿಗೆ ಆಕೆಯು ತನ್ನ ತಂದೆಯಲ್ಲಿಟ್ಟ ಭಾವನೆಯನ್ನೇ ಇವರಲ್ಲಿಟ್ಟು ಈ ರೀತಿಯಾಗಿ ವರ್ತಿಸುತ್ತಿರಬೇಕು! ಆದರೆ ಮುಂದೆ ಮುಂದೆ ಅದು ವಿಪರೀತಕ್ಕೆ ಬಂತು. ಸನ್ಯಾಸಿಯ ತೇಜಸ್ವಿತೆಯನ್ನು ನೋಡಿದಂತೆಲ್ಲ ಆಕೆಯ ಮನಸು ಕದಲತೊಡಗಿತು. ದಿನದಿನಕ್ಕೆ ಆಕೆಗೆ ಅವರೊಡನೆ ಮಾತಾಡುವ ಆಶೆ ಹೆಚ್ಚಾಗತೊಡಗಿತು. ಅಲ್ಲದೆ ಅವರ ಮೈಯನ್ನು ಮುಟ್ಟುವ ತವಕವೂ ಮೇರೆ ಮೀರಲಾರಂಭಿಸಿತು.

ಈಗ ಇಡೀ ದಿನವೆಲ್ಲ ಆಕೆಯು ಆ ಚಿಂತೆಯಲ್ಲಿಯೇ ಕಳೆಯುವಳು. ಮನಸ್ಸಿಗೆ ಸಮಾಧಾನವಿಲ್ಲ. ಇಷ್ಟೇ ಅಲ್ಲ ವಿವೇಕವೂ ಕೂಡ ತಾಳಗೆಟ್ಟು ಕುಣಿಯುತ್ತಿದೆ. ಒಮ್ಮೊಮ್ಮೆ ಅರುವಿನಲ್ಲಿ ಬಂದಾಗ 'ನಾನು ಎಂಥ ಅಧಃಪಾತಕ್ಕೆ ಇಳಿಯುತ್ತಿರುವೆನಲ್ಲಾ! ತಪಸ್ವಿಯ ತಪಕ್ಕೆ ವಿಘ್ನಕಾರಿಣಿಯಾಗ ಹವಣಿಸಿ ಎಂಥ ಪಾಪಕ್ಕೆ ಗುರಿಯಾಗುತ್ತಿರುವೆನಲ್ಲಾ! ಇದಲ್ಲದೆ ನಾನು ಹೀಗೆ ಮಾಡುತ್ತಿರುವುದು ಯಾರಿಗಾದರೂ

ಗೊತ್ತಾದರೆ ನನ್ನ ಗತಿ ಏನಾದೀತು ?' ಎಂದು ಅಂದುಕೊಳ್ಳುವಳು. ಆದರೆ ಈ ಪ್ರಜ್ಞೆ ಬಹಳ ಹೊತ್ತು ನಿಲ್ಲುತ್ತಿರಲಿಲ್ಲ.

ಒಮ್ಮೆ ಇವರು ನಾಮಸ್ಮರಣೆ ಮಾಡುತ್ತ ಕುಳಿತಾಗ ಆಕೆಯು ತನ್ನ ಮಗುವಿಗೆ ಮೊಲೆಯನ್ನು ಕುಡಿಸುತ್ತ ಅವರ ಹತ್ತಿರದಲ್ಲಿಯೇ ಬಂದು ಕುಳಿತಳು. ಮೊಲೆ ಕುಡಿಸುವ ನೆವದಿಂದ ಅವರ ಕಣ್ಣಿಗೆ ಅಂಗೋಪಾಂಗಗಳ ದರ್ಶನಮಾಡಿಸಲೆಳಸಿದಳು. ಎದ್ದು ಹೊರಡುವ ನೆವಮಾಡಿ ಅವಸರದಿಂದ ಅಪ್ಪಾಸಾಹೇಬರ ಕೈಯಲ್ಲಿ ಕೂಸನ್ನು ಕೊಡಹೋದಳು. ಕೂಸನ್ನು ತಗೆದುಕೊಳ್ಳುವಾಗ ಆಕೆಯ ಎದೆಗೆ ಇವರ ಕೈ ತಾಕಿತು. ಆಗ ಅವಳು ಬೇಕೆಂತಲೆ ಒಂದಿಷ್ಟು ನಾಚಿದಂತೆ ಮಾಡಿದಳು. ಒಂದಿಷ್ಟು ಮುಗುಳುನಗೆ ನಕ್ಕು ಬಿಟ್ಟಳು. ಆ ನಗು ಅಪ್ಪಾಸಾಹೇಬರಿಗೆ ಶೂಲದಂತೆ ವ್ಯಥೆಗೊಳಿಸಿತು. ತಮ್ಮ ಮುಂಚಿನ ಗೃಹಸ್ಥಾಶ್ರಮದ ನೆನಪು ಮಾಡಿಕೊಡಲಿಕ್ಕೆ ಅವಳ ಕೃತಿಗಳು ಕಾರಣವಾಗುವವೆಂಬುದನ್ನು ಅವರು ಕಂಡು ಹಿಡಿದು—' ಇನ್ನು ಮುಂದೆ ಇಲ್ಲಿರುವುದರಲ್ಲಿ ಅರ್ಥವಿಲ್ಲ 'ವೆಂದು ನಿರ್ಧರಿಸಿದರು. ಅಷ್ಟರಲ್ಲಿ ಅವಳು ಪುನಃ ಅಲ್ಲಿಗೆ ಬಂದಳು. ಆದರೆ ಇನ್ನು ಅವಳ ಮುಖವನ್ನು ನೋಡುವದಾಗಲೀ ಅವಳೊಡನೆ ಮಾತಾಡುವದಾಗಲೀ ಯಾವದನ್ನೂ ಮಾಡಬಾರದಾಗಿ ಅವರು ನಿಶ್ಚಯಿಸಿಕೊಂಡಿದ್ದರು. ಮೊದಲು ಅವಳ ಮುಖ ತಮಗೆ ಕಾಣಬಾರದೆಂದು ಪುಸ್ತಕವನ್ನು ಮೋರೆಗೆ ಹಿಡಿದು ಓದತೊಡಗಿದರು. ಅವಳು ಸಿಟ್ಟಿಗೆ ಬಂದವಳೆ ಅವರ ಎದುರಿನಲ್ಲಿ ಕುಳಿತುಕೊಂಡು ಮಾತಾಡಿಸಬೇಕೆನ್ನುತ್ತಿದ್ದಳು. ಆದರೆ ಅವರ ಗಾಂಭೀರ್ಯವನ್ನು ನೋಡಿ ಅವಳಿಗೆ ಮಾತಾಡಿಸುವ ಧೈರ್ಯವಾಗಲಿಲ್ಲ.

ಕೆಲಹೊತ್ತಿನ ಮೇಲೆ ಶ್ರೀಶೈಲಪ್ಪನವರು ಮನೆಗೆ ಬಂದರು. ಆಗ

ಸನ್ಯಾಸಿಯು ಇದಾವುದನ್ನೂ ತೋರಗೊಡದೆ ಬೇರೊಂದು ಬಗೆಯಿಂದ ತಮ್ಮ ನಿರ್ಧಾರವನ್ನು ತಿಳಿಸಿದರು. 'ಪರಮಾತ್ಮನು ತಮ್ಮೆಲ್ಲರಿಗೆ ಕಲ್ಯಾಣ ಮಾಡಲಿ! ನನಗಿನ್ನು ಮುಂದಕ್ಕೆ ಪಯಣ ಬೆಳೆಸುವದಕ್ಕೆ ಈಶ್ವರಾಜ್ಞೆಯಾಗಿದೆ. ಹೊರಡಬೇಕಾದುದು ಇಂದೇ' ಎಂದು ಹೇಳಿ ನಿರೂಪ ಕೇಳಿದರು. ಆಗ ಗಂಡಹೆಂಡರು ಬೇಕಾದಷ್ಟು ಚೆಲ್ಲವರಿದು 'ತಾವು ಹೋಗಬೇಡಿರಿ' ಎಂದು ಹೇಳಿಕೊಂಡರು. ಅದಕ್ಕೆ ಸನ್ಯಾಸಿಯು 'ನೀವು ಸಂಸಾರಿಕರು, ನಿಮಗೆ ಇಂಥ ಉದಾರ ಬುದ್ಧಿ ಬಹಳ ಒಳ್ಳೆಯದು. ನಾನು ನಿಮ್ಮ ಈ ಗುಣಕ್ಕೆ ಬೆರಗಾಗಿದ್ದೇನೆ. ನಿಮಗೆ ಈಶ್ವರನು ಕಲ್ಯಾಣ ಮಾಡಲಿ. ಸನ್ಯಾಸಿಯಾದ ನನ್ನಂಥವರನ್ನು ಪ್ರತಿಬಂಧಿಸಬಾರದು. ನಮ್ಮಂಥವರ ಇಚ್ಛೆಗೆ ಅಡ್ಡಬರಬಾರದು' ಎಂದೊಡನೆಯೇ ಅವರಿಬ್ಬರೂ ನಿರುಪಾಯರಾಗಿ ಒಡಂಬಟ್ಟು ಬೀಳ್ಕೊಟ್ಟರು. ಅವರ ಮಗಳೂ ಕೂಡ ಪಶ್ಚಾತ್ತಾಪ ಪಟ್ಟು ಮೌನದಿಂದ ವಂದಿಸಿದಳು.

ಮುಂದೆ ಅಪ್ಪಾಸಾಹೇಬರು ಎಲ್ಲೆಲ್ಲೋ ತಿರುಗಾಡುತ್ತ ಯಾವುದೋ ಒಂದು ಊರಿಗೆ ಬಂದು ನಿಂತರು. ಅಲ್ಲಿ ಊರ ಹೊರ ಮಗ್ಗುಲಲ್ಲಿರುವ ಒಂದು ಹಾಳು ದೇಗುಲದಲ್ಲಿ ಇದ್ದು ತಮ್ಮ ಪದ್ಧತಿಯಂತೆ ಸ್ನಾನ ಪೂಜೆಗಳನ್ನು ಮುಗಿಸಿಕೊಂಡು ನಿಯಮಿಸಿಕೊಂಡ ಕೆಲವೇ ಮನೆಗಳಿಗೆ ಭಿಕ್ಷೆಬೇಡಲು ಹೋಗುತ್ತಿದ್ದರು. ನಂತರ ಒಂದು ಹಳ್ಳದ ದಡದಲ್ಲಿ ಕುಳಿತು ಊಟಮಾಡಿ ಬಂದರೆಂದರೆ ತೀರುತ್ತಿದ್ದಿತು ಅವರ ದಿನದ ಕೆಲಸ. ಮುಂದೆ ಆ ಊರು ಅವರಿಗೆ ನೆಮ್ಮದಿ ಅನಿಸಿದ್ದರಿಂದ ಬಹಳ ದಿನ ಅಲ್ಲೇ ಇರತೊಡಗಿದರು. ಹಿಂದಿನ ಸಾರೆಯ ಅವರ ಅನುಭವವು. 'ಇನ್ನು ಯಾರ ಸಂಪರ್ಕವೂ ನಿನಗೆ ಬೇಡ ನೀನೊಂದು ನಸಿಯಂತೆ ಇರುವಿ. ನೀನು ಬಲವಾಗಬೇಕಾದರೆ ನಿನ್ನ ಸುತ್ತಲೂ

ಬೇಲಿಯಿಲ್ಲದಿದ್ದರೆ ಆಗದು.' ಎಂದು ಅವರಿಗೆ ಕಿವಿಯೂದುತ್ತಿತ್ತು. ಇದೆಲ್ಲಾ ಸರಿ. ಆದರೆ ಇವರ ದೈವವೆಲ್ಲಿ ಇವರ ಬೆನ್ನು ಬಿಡುತ್ತದೆ.?

ಒಂದು ದಿನ ರಾತ್ರಿ ತಾವಿರುವ ದೇಗುಲದಲ್ಲಿ ಒಬ್ಬರೇ ಮಲಗಿ ಕೊಂಡಿದ್ದರು. ಅಂದು ಅಮಾವಾಸೆಯ ಸಮೀಪದ ದಿನವಿದ್ದದ್ದರಿಂದ ಕರಾಳವಾದ ಕತ್ತಲೆಯು ಎಲ್ಲ ಕಡೆಗೂ ಮುಸುಕಿದ್ದಿತು. ಹಗಲು ಹೊತ್ತಿನಲ್ಲಿಯೇ ಯಾರೂ ಬರದ ಸ್ಥಳದೊಳಗೆ ರಾತ್ರಿ ಇನ್ನಾರು ಬರಬೇಕು ? ಆದ್ದರಿಂದ ಅಲ್ಲಿ ಎಲ್ಲ ಕಡೆಗೂ ಪ್ರಶಾಂತವಾದ ವಾತಾವರಣ ಹಬ್ಬಿದ್ದಿತು. ಅಪ್ಪಾಸಾಹೇಬರಿಗೆ ಯಾವ ಭೀತಿಯೂ ಇಲ್ಲದ ಆ ಪ್ರಶಾಂತ ವಾದ ಸಮಯದಲ್ಲಿ ಗಾಢವಾದ ನಿದ್ರೆಯಿಂದ ಮಲಗಿದ್ದರು.

ಸುಮಾರು ಏಳೆಂಟು ತಾಸು ರಾತ್ರಿಯಾಗಿರಬಹುದು. ಆ ಕರಾಳ ವಾದ ಕತ್ತಲೆಯೊಳಗಿಂದ ಎರಡು ವ್ಯಕ್ತಿಗಳು ಏನೇನೋ ಗುಜು ಗುಟ್ಟುತ್ತ ಗುದುಮುರುಗೆ ಹಾಕುತ್ತ ಬರುತ್ತಿದ್ದವು. ಅಪ್ಪಾಸಾಹೇ ಬರು ಗಾಢವಾದ ನಿದ್ರೆಯಲ್ಲಿ ಲೀನರಾಗಿದ್ದಾರೆ. ಅವರಿಗೆ ಇದಾವುದೂ ತಿಳಿಯಲವಕಾಶವಿಲ್ಲ. ಆ ಎರಡು ವ್ಯಕ್ತಿಗಳಲ್ಲಿ ಒಂದು ಗಂಡು ಇನ್ನೊಂದು ಹೆಣ್ಣು. ಹೆಣ್ಣುಮಗಳು ತನ್ನ ಎರಡೂ ಕೈಗಳಿಂದ ಎದೆಗೆ ಏನನ್ನೋ ಅವಚಿಕೊಂಡು ಆ ಗಂಡು ವ್ಯಕ್ತಿಯನ್ನು ಬಿಟ್ಟು ದೂರು ಸರಿಯುತ್ತಿ ದ್ದಳು. ಅವನು ಅವಳ ಮೇಲೇರಿ ಹೋಗಿ ಆಕೆ ಅವಚಿಕೊಂಡಿದ್ದ ವಸ್ತು ವನ್ನು ಕಸಿದುಕೊಳ್ಳಲು ಹವಣಿಸುತ್ತಿದ್ದನು. ತಿರಸ್ಕಾರದಿಂದ ಸಿಟ್ಟಿಗೆ ಬಂದು ತನ್ನದೊಂದು ಕೈಯಿಂದ ಹಿಂದಕ್ಕೆ ಅವನನ್ನು ಅಟ್ಟಿ ಮತ್ತ ಮುಂದೆ ನಡೆಯುವಳು. ಇವನು ಓಡಿ ಹೋಗಿ ಅವಳ ಎರಡೂ ಭುಜ ಗಳನ್ನು ಹಿಡಿದು ಅವಳನ್ನು ಬಲವಾಗಿ ನಿಲ್ಲಿಸುವನು. ಹೆಚ್ಚು ಆವೇಶದಿಂದ ಮತ್ತೆ ಅವಳು ಕೊಸರಿಕೊಳ್ಳುವಳು. ಈ ಗದ್ದಲದಲ್ಲಿ ಅಪ್ಪಾಸಾಹೇಬರಿಗೆ ಒಮ್ಮೆಲೆ ಎಚ್ಚರಾಯಿತು.

ಆದರೆ ಮೊದಮೊದಲು ಅವರಿಗೆ ತಾವು ಕನಸಿನಲ್ಲಿರುವೆವೋ ಏನೋ ಎಂದೆನಿಸಿತು. ಸಂಪೂರ್ಣ ಪ್ರಜ್ಞೆಗೆ ಬಂದ ಮೇಲೆ ಗಂಭೀರವಾದ ದನಿಯಿಂದ 'ಯಾರವರು?' ಎಂದು ಕೇಳಿದರು. ದೇಗುಲದೊಳಗಿಂದ ಬರುವ ಈ ದನಿಯನ್ನು ಕೇಳಿ ಆಗಂತುಕರು ಬೆಚ್ಚಿಬಿದ್ದರು. ಅಷ್ಟರಲ್ಲಿ ಅವರಿಬ್ಬರಿಗೆ ದೇಗುಲದ ಕಡೆಯಿಂದ ಕಾಲಸಪ್ಪಳು ಕೇಳಿಸಿದ್ದರಿಂದ ಅವರಿಗೆ ಮತ್ತಷ್ಟು ದಿಗಿಲಾಯಿತು. ಹೊಸ ವ್ಯಕ್ತಿಯು ತೀರ ಸನಿಹಕ್ಕೆ ಬಂದದ್ದು ಗೊತ್ತಾಗಲು ಆ ಗಂಡು ವ್ಯಕ್ತಿಯು ಅವಳನ್ನು ಬಿಟ್ಟು ಓಡಿಹೋದನು. ಅಪ್ಪಾಸಾಹೇಬರು ಅವಸರದಿಂದ ಧಾವಿಸಿ ಬರುತ್ತಿರುವಾಗ ಢಕ್ಕನೆ ಕತ್ತಲೆಯಲ್ಲಿ ಅವಳನ್ನು ಹಾದುಬಿಟ್ಟರು. ಆದರಿಂದ ಆಕೆಯ ಕೈಯೊಳಗಿನ ವಸ್ತು ಕೊಸರಿಕೊಂಡು ನೆಲಕ್ಕೆ ಬಿದ್ದುಬಿಟ್ಟಿತು. ಬೀಳುವುದೇ ತಡ ಶಿಶುವಿನ ಧ್ವನಿ ಹೊರಪಟ್ಟಿತು. 'ಇದೇನು?' ಎಂದು ಸನ್ಯಾಸಿಯು ಗಾಬರಿಯಾಗಿ ದೊಡ್ಡ ಧ್ವನಿಯಿಂದ 'ಶಿವಶಿವಾ' ಎಂದು ಉಚ್ಚರಿಸಿದರು. ಅಲ್ಲದೆ ಅಪ್ಪಾಸಾಹೇಬರು 'ಎಲಾ, ದುರ್ವಿಧಿಯೇ ನೀನು ನನ್ನ ಹೆಗಲ ಮೇಲೆಯೇ ಕುಳಿತುಕೊಂಡು ನಾನು ಹೋದಲ್ಲಿಗೆ ಹೋಗಿ, ಬಂದಲ್ಲಿಗೆ ಬಂದು, ಎಲ್ಲಿ ಅಂದರೆ ಅಲ್ಲಿ ನನ್ನನ್ನು ಕಾಡುವುದಕ್ಕೆ ಕಾದುಕೊಂಡೇ ಇರುವಿಯಾ? ಎಲಾ! ಇಂಥ ಕಟ್ಟಿರುಳಲ್ಲಿ, ಕಟ್ಟಡವಿಯಲ್ಲಿ ಕಟ್ಟುಗ್ರಕೃತಿಯನ್ನು ನಡಿಸಿದವರು ನೀವು ಯಾರವರು? ತಪಸ್ವಿಗಳಿಗೆ ತೊಂದರೆಕೊಟ್ಟು ಯಾವ ನರಕಕ್ಕೆ ಈಡಾಗಬೇಕೆನ್ನುವಿರಿ? ನಿಮಗೆ ಬೇರೆ ಸ್ಥಳವೇ ಸಿಗಲಿಲ್ಲವೆ?' ಎಂದು ಗುಡುಗು ಹಾಕಲು ಜಿಂಕೆಯಂತೆ ಎದೆಯೊಡೆದ ಹೆಂಗುಸೊಬ್ಬಳು ಗಾಬರಿಗೊಂಡು ಪಾದಕ್ಕೆ ಬಿದ್ದು ಗಟ್ಟಿಯಾಗಿ ಕಾಲುಗಳನ್ನು ಹಿಡಿದು– 'ನನ್ನೊಡೆಯಾ ಕ್ಷಮಿಸಿರಿ. ತಮ್ಮ ಖ್ಯಾತಿಯನ್ನು ನಾನು ಕೇಳಿ ಬಲ್ಲೆನು. ನಾನಾದರೋ ಮಹಾ ಪಾಪಿಷ್ಠೆ.

ತಮ್ಮ ಪಾವನ ಭೂಮಿಯಲ್ಲಿ ನನ್ನ ಮಾಣಿಕದಂಥ ಮಗು ಬದುಕಿ ಉಳಿಯಿತು. ತಾವು ಕೋಪವನ್ನು ಬಿಟ್ಟು ಈ ದುರ್ಭಾಗ್ಯಳನ್ನು ಆಶೀರ್ವದಿಸಿರಿ' ಎಂದು ಹಲುಬಿದಳು. ಆಗ ಸನ್ಯಾಸಿಗೆ ದಯೆ ಹುಟ್ಟಿತು. ಬಳಿಕ ಅವಳು 'ಸ್ವಾಮಿ! ನಾನು ಮಾಡಿದ ಮಹಾಪರಾಧವನ್ನು ತಾವು ಕ್ಷಮಿಸಬೇಕು. ದುರುಳೆ ನಾನು! ನಾನು ಮಾಡಿದ ಈ ಪಾಪವು ಏಳೇಳು ಜನ್ಮ ಕಳೆದರೂ ಸರಿಯದು ಕ್ಷಮಿಸಿರಿ; ಈ ಪಾಪಿಯನ್ನು ಕ್ಷಮಿಸಿರಿ. ನನ್ನ ಕರುಳನ್ನು ತಮ್ಮ ಪಾದತಲದಲ್ಲಿ ಬಿಚ್ಚಿ ಬಿಚ್ಚಿ ನಿವೇದಿಸಿಕೊಂಡಾಗ ತಾವು ನನ್ನನ್ನು ಕರುಣಿಸದೆ ಇರಲಾರಿರಿ. ನಿಮ್ಮ ಕೋಪಾನಲವನ್ನು ನನ್ನಂಥ ಪಾಪಿಯ ಮೇಲೆ ಉರಿಸಿದರೆ ನಾನು ಉಳಿಯಬಲ್ಲೆನೆ! ಶಾಂತರಾಗಿರಿ. ಶಾಂತರಾಗಿ ನನ್ನ ದುರ್ದೈವದ ಕತೆಯನ್ನೆಲ್ಲ ಕೇಳಿರಿ.' ಎಂದನ್ನುತ್ತ ಅವರ ಪಾದಗಳ ಮೇಲೆ ತಲೆಯನ್ನಿಟ್ಟು ಕಣ್ಣೀರನ್ನು ಸುರಿಸತೊಡಗಿದಳು. ಅಪ್ಪಾಸಾಹೇಬರ ಸಿಟ್ಟಿನ ಅರ್ಭಟವು ಇನ್ನೂ ಉಳಿದಿದ್ದರೆ ಆಕೆಯ ಇಹಲೋಕದ ಯಾತ್ರೆ ಇಷ್ಟರಲ್ಲೇ ಮುಗಿದು ಬಿಡುತ್ತಿದ್ದಿತು. ಆದರೆ ಪುಣ್ಯಕ್ಕೆ ಹಾಗಾಗಲಿಲ್ಲ. ಅವಳ ಎದೆ ಕರಗಿಸುವ ಇಂಥ ಮಾತುಗಳನ್ನು ಕೇಳಿ ಅವರು ತಮ್ಮ ಸಿಟ್ಟನ್ನು ನಂದಿಸಿರು. ಇಷ್ಟರಲ್ಲಿ ಮೂಡುವ ಸೂರ್ಯನ ಕಿರಣಗಳು ಮಗುವಿನ ಗಲ್ಲಗಳಲ್ಲಿ ಬಿದ್ದು ಅಪ್ಪಾಸಾಹೇಬರ ಕಣ್ಣುಗಳಿಗೆ ಹಾರಿಬಂದವು. ಅವರ ಕಣ್ಣೊಳಗೆ ಹಾರಿಕೊಂಡ ಆ ಕಿರಣಗಳು ಮೈಯಲ್ಲಾ ಇಳಿದು ವ್ಯಾಪಿಸಿ ಅಪ್ಪಾಸಾಹೇಬರ ಭಾವಾಂತರವನ್ನು ಮಾಡಿಬಿಟ್ಟವು.

ಆಕೆ ಅಪ್ಪಾಸಾಹೇಬರ ಹಿಡಿದ ಕಾಲನ್ನು ಇನ್ನೂ ಬಿಟ್ಟಿರಲಿಲ್ಲ. 'ಸ್ವಾಮಿ! ಈ ಪಾಪಿಯ ಕತೆಯೊಂದಿಷ್ಟು ಕೇಳುವಿರಾ? ಕೇಳಿರಿ. ಕೇಳಿ ಇವಳನ್ನು ಕರುಣಿಸಿರಿ' ಎಂದು ಮೇಲೆ ಮುಖಮಾಡಿ ದೈನ್ಯಾಸದಿಂದ

ಬೇಡಿಕೊಳ್ಳತೊಡಗಿದಳು. ಆಗ ಅವಳ ಕಣ್ಣೊಳಗಿನ ನೀರು ಧಾರೆಧಾರೆಯಾಗಿ ಹರಿಯುತ್ತಿದ್ದವು. ಅವಳು ಬೇಡಿಕೊಳ್ಳುವ ದೀನತೆಯು ಅವಳ ಮಾತುಗಳನ್ನು ಕೇಳಬೇಕೆನ್ನುವ ಬಯಕೆಯನ್ನು ಅಪ್ಪಾಸಾಹೇಬರಿಗೆ ಹುಟ್ಟಿಸಿತು. ಆಗ ಅವಳು ತನ್ನ ಕತೆಯನ್ನು ಹೇಳತೊಡಗಿದಳು:—

'ನಾನು ಇದೇ ನೆರೆಯೂರಿನವಳು. ಪ್ರಾಯಕ್ಕೆ ಬರುವುದರೊಳಗಾಗಿಯೇ ನನ್ನನ್ನೊಬ್ಬ ತಕ್ಕ ವರನಿಗೆ ಕೊಟ್ಟು ಲಗ್ನಮಾಡಿ ತಾಯಿ-ತಂದೆಗಳು ತೀರಿಕೊಂಡರು. ಮುಂದೆ ನಾನು ಗಂಡನ ಮನೆಯಲ್ಲಿಯೇ ಎಷ್ಟೋ ದಿನ ಸುಖವಾಗಿದ್ದೆ. ನನ್ನ ಗಂಡನು ನನ್ನ ಮೇಲೆ ಎಷ್ಟು ಪ್ರೀತಿಸುತ್ತಿದ್ದನೆಂಬುದನ್ನು ನಾನು ವರ್ಣಿಸಿ ಹೇಳಲಾರೆ. ನಾನೆಂದರೆ ಅವರಿಗೆ ಜೀವ. ಇಂಥ ಜೀವದ ಗಂಡನೊಡನೆ ನಾನಿರುವಾಗ ತಾಯಿ ತಂದೆಗಳ ವಿಯೋಗ ದುಃಖ ಬಹಳ ದಿನ ಇರಲಿಲ್ಲ. ನಮ್ಮ ಈ ಸುಖಮಯವಾದ ದಾಂಪತ್ಯಜೀವನವನ್ನು ನೋಡಲು ವಿಧಿಗೆ ಸಹನವಾಗಲಿಲ್ಲವೆಂದು ತೋರುತ್ತದೆ. ನನ್ನ ಜೀವದ ಜೀವನನ್ನು, ನನ್ನ ಮನದ ದೇವನನ್ನು, ಅಲ್ಲ ನನ್ನ ಪ್ರಾಣದ ಸೊತ್ತನ್ನು ತೆಗೆದುಕೊಂಡು ಹೋಗಿ ವಿಧಿಯು ನನ್ನನ್ನು ಪರದೇಶಿಯನ್ನಾಗಿ ಮಾಡಿ ಕೂಡಿಸಿತು. ಆಗಿನ ನನ್ನ ಗತಿಯನ್ನೇನು ವರ್ಣಿಸಲಿ? ನಾಲ್ಕು ಕಡೆಗೂ ಮುಗಿಲು ಹರಿದು ಬಿದ್ದಂತಾಯಿತು. ಶೋಕಿಸಿದೆ; ಶೋಕಿಸಿದೆ. ಎಷ್ಟು ಶೋಕಿಸಿದರೇನು! ಹೋದವನು ತಿರುಗಿ ಬಂದಾನೆ? ಇಷ್ಟರಲ್ಲಿ ಹೊಲಮನೆಗಳನ್ನೂ ಕೂಡ ದಾಯಾದಿಗಳು ಕಸಿದುಕೊಂಡು ಬಿಟ್ಟರು. ಆಗ ನಾನು ಅನ್ನನ್ನಗತಿಯಾಗಿ ತಿರುಗುವ ಪ್ರಸಂಗ ಬಂದಿತು.

ಹೀಗೆ ಕೆಲ ದಿನಗಳು ಕಳೆಯುವುದರಲ್ಲಿ ನನ್ನ ಎಲ್ಲ ಆಶ್ರಯಗಳೂ ದೂರಾಗಿಬಿಟ್ಟವು. ಕಡೆಗೆ 'ನನ್ನ ಸೋದರಮಾವನ ಮನೆ ಇದು. ಇಲ್ಲಿ

ಏನಾದರೂ ಆಶ್ರಯ ಸಿಕ್ಕೀತು' ಎಂದು ಈ ಊರಿಗೆ ಬಂದೆ. ಮುಂದೆ ಇಲ್ಲಿಯೇ ನಾನು ಅಡಿಗೆ ಮಾಡುತ್ತ ಇರತೊಡಗಿದೆ.

ಮೊದಮೊದಲು ಪುನರ್ವಿವಾಹವೆಂದರೆ ನನಗೆ ಬಹಳ ಅಸಹ್ಯ ವೆನಿಸುತ್ತಿತ್ತು. ಯಾಕೆಂದರೆ ಮೊದಲಿನ ಪತಿಯ ಮೇಲಿನ ನನ್ನ ಪ್ರೇಮವು ನನ್ನನ್ನು ಅಷ್ಟು ಆವರಿಸಿತ್ತು. ಆದರೆ ದಿನಕಳೆದ ಹಾಗೆಲ್ಲ ದೈವವು ಬೇರೆ ಹಾದಿಗೆ ಎಳೆಯತೊಡಗಿತು. ಯುವಕರು ನನ್ನ ರೂಪವನ್ನು ನೋಡಿ ಹುಚ್ಚುಚ್ಚು ನಡಿಸತೊಡಗಿದರು. ಆಗ ನನಗೆ ಅನಿಸಹತ್ತಿದ್ದೇ ನಂದರೆ— ದೈವಗೇಡಿಗಳಾದ ಹೆಣ್ಣುಮಕ್ಕಳಿಗೆ ಪತಿಯ ಸಾನ್ನಿಧ್ಯ ಅಥವಾ ಸ್ವರ್ಗದ ಬಾಗಿಲು ಇವುಗಳಲ್ಲಿ ಯಾವುದಾದರೂ ಒಂದರ ಆಶ್ರಯ ವಿದ್ದರೆ ಮಾತ್ರ ಅವರಿಗೆ ಕ್ಷೇಮ; ಇಲ್ಲವಾದರೆ ಇಲ್ಲ. ಆದರೆ ಇಷ್ಟರಲ್ಲಿ ನನ್ನ ಕಾಲಿಗೆ ದುರ್ದೈವದಿಂದ ಶ್ವೇತಕುಷ್ಠದ ಕಲೆಗಳುಂಟಾದವು. ಅಂದ ಮೇಲೆ ನಾನೀಗ ಮನಸು ಮಾಡಿದರೂ ನನ್ನನ್ನು ಯಾರು ಮದುವೆ ಯಾದಾರು? ಮದುವೆಯಿಲ್ಲದ ಹರೆಯದ ಹುಡುಗರ ಹಾವಳಿಯೋ ದಿನದಿನಕ್ಕೆ ಹೆಚ್ಚಾಗಿಬಿಟ್ಟಿತು. ಹಾಗೆಯೇ ನನ್ನ ಚಿತ್ತದ ಬಿಗಿತವೂ ದಿನ ದಿನಕ್ಕೆ ತಪ್ಪುತ್ತ ಬಂತು.

ನನ್ನ ರೂಪು ಜನರನ್ನು ಕೈಮಾಡಿ ಕರೆದಂತೆ ಅವರ ಒಯ್ಯಾರವು ನನ್ನನ್ನು ಕೆರಳಿಸುತ್ತಿತ್ತು. ಆಗ 'ದೈವಗೇಡಿಗೆ ಇಂಥ ರೂಪವನ್ನೇಕೆ ಕೊಡಬೇಕು' ಎಂದು ದೇವರನ್ನು ಹಳಿದು ಎಷ್ಟು ಅತ್ತೆನಾದರೂ ಪ್ರಾಯ ಬೆಳೆದಂತೆಲ್ಲ ಅದು ಇನ್ನೂ ಹೆಚ್ಚೆಚ್ಚು ತೇಜೋಮಯವೇ ಆಗತೊಡಗಿತು. ಈ ಪ್ರಾಯದ ಬೆಳಿಗೆಯನ್ನು ಕುಗ್ಗಿಸುವದಕ್ಕಾಗಿ ದಿನಾಲು ಅರಹೊಟ್ಟೆಯುಂಡೆನು; ಉಪವಾಸ ಬಿದ್ದೆನು. ಇನ್ನೂ ಏನೇನೋ ಮಾಡಿದೆನು. ಆದರೂ ನನ್ನ ದುರ್ವಿಧಿಯ ಮೂಲಕ

ಇದಾವುದರ ಉಪಯೋಗವೂ ಆಗಲಿಲ್ಲ. ಇದರ ಮುಂದಿನ ಕಥೆಯನ್ನು ಈ ಹೆಣ್ಣುಬಾಯಿಯಿಂದ ಹೇಗೆ ಉಸುರಲಿ?!!! ಅಯ್ಯೋ! ನಾನು ಏನು ಹೇಳಲಿ! ಆಗ ನಾನು ಪಶ್ಚಾತ್ತಾಪಪಟ್ಟು ಅತ್ತಿದ್ದು, ಗೋಳಿಟ್ಟಿದ್ದು ಲೆಕ್ಕವಿಲ್ಲ. ನಾನು ಹೀಗೆ ಎಷ್ಟು ರೀತಿ ಗೋಳಿಟ್ಟರೂ ಅಂತಃಕರಣಶೂನ್ಯ ನಾದ ಮದನನು ನನ್ನ ಮೇಲಿನ ಬಲಾತ್ಕಾರವನ್ನು ನಿಲ್ಲಿಸಲೇ ಇಲ್ಲ. ಉಪಾಯವಿಲ್ಲದಾದಾಗ ನನ್ನ ಮನಸ್ಸಿಲ್ಲದಿದ್ದರೂ ನಾನವನಿಗೆ ಬಲಿಯಾಗ ಬೇಕಾಯಿತು.

'ಹೀಗೆ ದುಶ್ಚಾರಿತ್ರದಲ್ಲಿ ದಿನ ಕಳೆಯುವದರೊಳಗೆ ದುರ್ದೈವದಿಂದ ಗರ್ಭವೂ ಕೂಡ ನಿಂತುಬಿಟ್ಟಿತು. ಅಯ್ಯಯ್ಯೋ ಆಗಿನ ಸಂಕಟವನ್ನು ನಾನೇನು ಬಣ್ಣಿಸಲಿ! 'ನಾನಿನ್ನು ಹೇಗೆ ಜೀವಿಸಲಿ? ನಾನು ಮಾನ ವನ್ನು ಹೇಗೆ ಮುಚ್ಚಿಕೊಳ್ಳಲಿ!' ಎಂದು ಗೋಳಿಟ್ಟೆ. ನನ್ನ ಕಾಮುಕರ ಕುಂಟಣಿಯ ಸಹಾಯದಿಂದ ಏನೇನೋ ಔಷಧವನ್ನು ತೆಗೆದುಕೊಂಡು ಆ ಗಂಡಾಂತರದಿಂದ ಪಾರಾಗಬೇಕೆಂದೆ. ಆದರೆ ದೈವ ಅನುಕೂಲಿಸಲಿಲ್ಲ. ಆಯ್ತು, ಒಮ್ಮೆ ಕೆಟ್ಟಿದ್ದೇನೆಂದ ಮೇಲೆ ಮುಗಿದುಹೋಯಿತು. ಜನರು ಏನಾದರೂ ಅಂದುಕೊಳ್ಳಲೊಲ್ಲರೇಕೆ. ನಾನು ಮಾಡಿದ ಎಲ್ಲ ಕೃತಿ ಗಳನ್ನು ದೇವರು ನೋಡುತ್ತಿದ್ದಾನೆ. ಈ ರೀತಿ ಇರುವುದೇ ಮಹಾ ಪಾಪವಿದೆ. 'ಇದೊಂದೇ ಪಾಪ ಸಾಕು. ಜೀವಹತ್ಯದ ಪಾಪವೊಂದ ನ್ನೇಕೆ ಬೇರೆ ಕಟ್ಟಿಕೊಳ್ಳುವಿ?' ಎಂದು ದೇವರು ತಾನೇ ಹೀಗೆಲ್ಲಾ ನಡಿಸಿರಬೇಕು! ಆತನ ಇಷ್ಟದಂತೆ ಆಗಲಿ! ಎಂದು ಅಂದುಕೊಂಡು ಕಾಡು ಸೇರಿದೆನು.

ಈ ದಿನ ಮುಂಜಾನೆ ಹಡೆಯುವ ವೇದನೆ ಸುರುವಾಯಿತು. ನಾನು ಗುಡಿಸಲಲ್ಲಿ ಒಬ್ಬಳೇ ಬಿದ್ದುಕೊಂಡು ನರಳಾಡುತ್ತಿದ್ದೆ. ನನ್ನಾತನು

ಏನೋ ಹಂಚಿಕೆ ಹಾಕುತ್ತ ಸಣ್ಣ ಸೋರಿ ಮಾಡಿಕೊಂಡು ಹೊರಗೆ ಕುಳಿತಿದ್ದನು. ಏನು ಯೋಚಿಸುತ್ತಿದ್ದನೋ ಏನೋ. ಮುಖ ಮಾತ್ರ ರೂಪುಗೆಟ್ಟಿದ್ದಿತು. ಸಾಯಂಕಾಲದ ಸುಮಾರಿಗೆ ನಾನು ಹಡೆದೆ. ನೋಡುತ್ತೇನೆ ಪುತ್ರರತ್ನ! ಹೇಗೋ ದುಃಖಗಳೆಲ್ಲ ನಾಶವಾಗಿ ಅಂಥದರಲ್ಲಿಯೂ ಹಿಗ್ಗು ಹೊರಹೊಮ್ಮಿತು. ಯಾರು ಏನೇ ಅಂದರೂ ಅನ್ನಲೊಲ್ಲರೇಕೆ. ನನ್ನ ಜೀವಕ್ಕೆ ಒಂದು ಜೊತೆಯಾದರೂ ಆಯಿತಲ್ಲಾ! ಈ ಕೂಸಿನಿಂದಾದರೂ ನನ್ನ ದೈವ ಹಿಂಗೀತಲ್ಲಾ! ಎಂದು ಅಂದುಕೊಂಡೆ. ಇಷ್ಟರಲ್ಲಿ ಮಗು ಅಳತೊಡಗಿತು. ಹೊರಗೆ ಮೋರೆಯನ್ನು ಬಣಗಿಸಿಕೊಂಡು ಕುಳಿತ ಆ ತಿಳಿಗೇಡಿಯು ಧಾವಿಸಿ ಒಳಗೆ ಬಂದು ಕೂಸಿನ ಕಡೆಗೆ ಕೈ ಹಾಕಿದನು. ನಾನು ಗಾಬರಿಯಾದೆ. ಕೂಸನ್ನು ಎಲ್ಲಿ ಕೊಲ್ಲುವನೋ ಎಂದೆನಿಸಿತು. ಅವಸರದಿಂದ ನಾನು ನನ್ನ ರತ್ನವನ್ನು ಅವಚಿಕೊಂಡೆ. ಆದರೂ ಅವನು ಕೇಳಲಿಲ್ಲ. ನಾನು ಆದೇ ಹೆತ್ತಾಕೆ. ನನ್ನ ಮೈ ಎಲ್ಲಾ ಶಿಥಿಲವಾಗಿ ಬಿಟ್ಟಿದ್ದಿತು. ಅಲ್ಲದೆ ನಾನು ಎಂಥ ಶೋಚನಿಯ ಸ್ಥಿತಿಯಲ್ಲಿರುವೆನೆಂಬುದನ್ನೂ ಕೂಡ ನೋಡದೆ ಆ ಕೂಸನ್ನು ಕಸಿದುಕೊಳ್ಳಲು ಹವಣಿಸತೊಡಗಿದನು. ನಾನು ಹೌಹಾರಿ ಆ ನನ್ನ ಕರುಳನ್ನು ಉಳಿಸಬೇಕೆಂದು ಅಂಥ ದುರ್ದಶೆಯ ಸ್ಥಿತಿಯಲ್ಲಿಯೂ ಕೂಡ ಅದನ್ನು ತಗೆದುಕೊಂಡು ಓಡತೊಡಗಿದೆ; ಆತನು ನನ್ನ ಬೆನ್ನು ಬಿಡಲಿಲ್ಲ. ನಾನು ಹಲವು ರೀತಿಯಿಂದ ಆಲ್ಪರಿದುಕೊಂಡೆ; ಆದರೂ ಆ ದುಷ್ಟನು ಕೇಳದಾದನು. ಹೀಗೆ ನಾನು ಹೌಹಾರ ಎಲ್ಲೆಲ್ಲಿ ಎಷ್ಟು ಓಡಾಡಿದೆನೋ ನನಗೆ ಗೊತ್ತಿಲ್ಲ. ಎಲ್ಲಿಯೂ ನನ್ನನ್ನಾತನು ಬಿಡದಾಗ ಈ ದೇಗುಲದ ಕಡೆ ಓಡುತ್ತ ಬಂದೆ. ಸ್ವಾಮಿ! ಮುಂದಿನ ಸ್ಥಿತಿ ತಮಗೆಲ್ಲಾ ಗೊತ್ತಿದೆ. ಪಾಪಿ ನಾನು! ಅಯ್ಯಯ್ಯೋ ಪಾಪಿ! ಕಡುಪಾಪಿ ನಾನು. ನನ್ನ ಹೊಟ್ಟೆಯ ಕರುಳನ್ನು

ಉಳಿಸಿಕೊಳ್ಳಲು ತಮ್ಮಂಥ ತಪಸ್ವಿಗಳಿಗೂ ತೊಂದರೆಯುಂಟಾಯಿತು ಕ್ಷಮಿಸಿರಿ' ಎಂದನ್ನುತ್ತ ಒಂದೇ ಸವನೆ ಆಕ್ರೋಶಿಸತೊಡಗಿದಳು.

ದಯಾರ್ದ್ರ ಹೃದಯನಾದ ಸನ್ಯಾಸಿಯು ಅವಳನ್ನು ಅಂತಃಕರಣ ಪೂರ್ವಕವಾಗಿ ಕ್ಷಮಿಸಿದನು. ಅವಳನ್ನೇನೋ ಕ್ಷಮಿಸಿದನು. ಆದರೆ ಅವಳನ್ನು ಈ ಪರಿ ಪೀಡಿಸಿದ ಅವಳ ಗೆಣೆಯನ ವಿಷಯದಲ್ಲಿ ಮಾತ್ರ ಪೈತ್ಯ ತಲೆಗೇರತೊಡಗಿತು. 'ಎಲಾ! ಆ ಕಳ್ಳ ಎಲ್ಲಿ ಮರೆಯಾದನು? ಆತನಿಗೆ ತಕ್ಕ ಪಾರುಪತ್ಯವಾಗಬೇಕು! ನೀನು ಇಲ್ಲೇ ಇರು. ನಾನು ಅವನನ್ನು ಹುಡುಕಿ ಹಿಡಿದು ತರುತ್ತೇನೆ!' ಎಂದು ಜಮದಗ್ನಿಯಂತೆ ಕಣ್ಣು ಕೆಂಪಗೆ ಮಾಡಿ ಕಾಲು ಕಿತ್ತುವದರಲ್ಲಿದ್ದರು. ಅದೇ ಹೊತ್ತಿಗೆ ಹೇಗೋ ತಮ್ಮ ಗಡ್ಡದ ಮೇಲೆ ತಮ್ಮ ಕೈ ಹೋಗಲು 'ತಾನು ಸನ್ಯಾಸಿ, ನ್ಯಾಯಾಧೀಶನಲ್ಲ' ಎಂಬ ಮಾತು ಸ್ಮರಣಕ್ಕೆ ಬಂತು. ಆಗ– 'ಆಹಾ! ಪಾರುಪತ್ಯ ಮಾಡಲಿಕ್ಕೆ ನಾನಾರು? ಲೋಕದ ನ್ಯಾಯಾನ್ಯಾಯಗಳನ್ನು ವಿಚಾರಿಸುವ ಹೊಣೆ ದೇವಾಧಿದೇವನದು! ಸನ್ಯಾಸಿಯಾದ ನನಗೀ ಕ್ರೋಧವೇತಕ್ಕೆ? ಯಾರ ತಪ್ಪು ಯಾರಿಗೆ ಗೊತ್ತು?' ಎಂದು ಆತ್ಮವಿಚಾರಪರರಾದರು. ಕೆಲಹೊತ್ತಿನ ಮೇಲೆ 'ಮಗಳೇ, ಇನ್ನು ಮೇಲೆ ಈ ಸ್ಥಳದಲ್ಲಿರುವುದು ನನಗೂ ನಿನಗೂ ಕೂಡಿಯೇ ಹಿತಕರವಲ್ಲ. ನಿನಗೆ ಪರಮಾತ್ಮನು ದಾರಿ ತೋರಿಸಲಿ. ಹಾದಿ ಸಿಕ್ಕ ಕಡೆಗೆ ಹೋಗು! ನಾನೂ ನನ್ನ ಹಾದಿ ಸಿಕ್ಕ ಕಡೆಗೆ ಹೊರಟೆನು. ಇಲ್ಲಿಯಿಂದ ಹತ್ತು ಹರದಾರಿಯ ಮೇಲೆ ಇರುವ ಕೂಡಲಸಂಗಮದಲ್ಲಿ ಶ್ರೀಶೈಲಪ್ಪನವರೆಂಬ ಒಬ್ಬ ಒಳ್ಳೇ ಮನುಷ್ಯರಿದ್ದಾರೆ. ನೀನು ಅಲ್ಲಿಗೆ ಹೋಗಿ ಅವರಿಗೆ ನನ್ನ ಪರಿಚಯವನ್ನು ಹೇಳು. ಅಂದರೆ ನಿನ್ನ ರಕ್ಷಣೆಯಾಗುವದು.' ಎಂದು ತಮ್ಮ ದಂಡಕಮಂಡಲುಗಳನ್ನು

ಸಾವರಿಸಿಕೊಂಡು ಆ ಸ್ಥಳವನ್ನು ಬಿಟ್ಟು ನಡೆದರು. ಅವರನ್ನು ವಂದಿಸಿ ಆ ಅನಾಥಳೂ ಅವರು ಹೇಳಿದ ಊರ ಹಾದೀ ಹಿಡಿದು ತನ್ನ ಮಗುವನ್ನು ಅವಚಿಕೊಂಡು ಹೋಗಿಬಿಟ್ಟಳು !

ಶಿವರಾತ್ರಿಯ ಕಾಲದಲ್ಲಿ ಶ್ರೀಶೈಲದೊಳಗೆ ಮಲ್ಲಿಕಾರ್ಜುನ ಮಹಾ ಸ್ವಾಮಿಯ ಯಾತ್ರೆಯೆಂಬುದು ಎಲ್ಲರಿಗೂ ಗೊತ್ತಿದೆಯಷ್ಟೆ! ಆಗ ಅಲ್ಲಿ ಸಾವಿರಾರು ಜನ ಯಾತ್ರಿಕರು ನೆರೆಯುವರೆಂಬುದೂ ತಮಗೆ ಗೊತ್ತು. ಈಗ ಅಪ್ಪಾಸಾಹೇಬರು ಅಲ್ಲಿಯೆ ಕದಳೀ ವನದಲ್ಲಿ ತಪೋನಿರತರಾಗಿ ಇದ್ದಾರೆ. ಯಾತ್ರೆಯ ಕಾಲದಲ್ಲಿ ಒಂದು ದಿನ ಅವರು ಭಿಕ್ಷೆಗಾಗಿ ಹೊರ ಟಿದ್ದರು. ಯಾತ್ರಿಕರ ಒಂದೊಂದು ಗುಂಪಿನ ಮುಂದೆ ಹಾದು ನಡೆ ದಿದ್ದರು. ಯಾರಾದರೂ ಭಿಕ್ಷೆಯನ್ನು ನೀಡಿದಾಗ ಅವರಿಗೆ ಯಾವ ಆಶೀ ರ್ವಾದವನ್ನಾಗಲೀ ಹರಕೆಯನ್ನಾಗಲೀ ಕೊಡದೆ ತಮ್ಮ ಆಂತರಿಕ ದೃಷ್ಟಿ ಯನ್ನು ಯಾವ ಕಡೆಗೋ ಹೊರಳಿಸಿಕೊಂಡು ಒಂದು ಗುಂಪಿನಿಂದ ಮತ್ತೊಂದು ಗುಂಪಿಗೆ ಹೋಗುವರು. ಅಲ್ಲಿಯೂ ಆದೇ ರೀತಿಯಾಗಿ ಭಿಕ್ಷೆಯು ಸಿಕ್ಕಿತೆಂದರೆ ಮತ್ತೆ ಮುಂದೆ ನಡೆಯುವರು. ಹೀಗೆ ತಿರಗುತ್ತ ತಿರಗುತ್ತ ಕಡೆಗೆ ಒಂದು ನಾಲ್ಕಾರೇ ಜನರಿಂದ ಕೂಡಿದ ಚಿಕ್ಕ ಗುಂಪಿನ ಮುಂದೆ ಬಂದರು.

'ತಾಯಿ ! ಈ ತಸ್ಪುರುಷನಿಗೆ ಏನಾದರೂ ಕೊಡುತ್ತೇನೆ' ಎಂದು ಪ್ರಾಯಕ್ಕೆ ಬಂದ ತರುಣನೊಬ್ಬನು ತನ್ನ ಸವಿನಯ ಸ್ವರ ದಿಂದ ತಾಯಿಗೆ ಅಂದನು. ಈ ಹೊರಟ ಸ್ವರವು ಎಂದೋ ತಮಗೆ ಪರಿಚಿಯವುಳ್ಳದ್ದೆಂದು ಅಪ್ಪಾಸಾಹೇಬರಿಗೆ ಅನಿಸಿತು. ಕೂಡಲೆ ಅವರಿಗೆ ಆಶ್ಚರ್ಯವೂ ಅನಿಸಿತು ! ತಮ್ಮ ದೃಷ್ಟಿಯನ್ನು ಮೇಲಕ್ಕೆತ್ತಿ ನೋಡಿ ದರು. ಇದುರಿನಲ್ಲಿ ಇರುವವರು ಅವರ ಹೆಂಡತಿ, ಮತ್ತು ಪ್ರಾಯಕ್ಕೆ

ಬಂದ ಅವರ ಮಗು, ಅಲ್ಲದೆ ಸೊಸೆ, ಸೊಸೆಯ ಬಗಲಲ್ಲಿ ಒಂದು ಕೂಸು. ನೋಡಿ ಮತ್ತೆ ತಮ್ಮ ಕಣ್ಣುಗಳನ್ನು ಕೆಳಗೆ ಮಾಡಿದರು. ಹೆಂಡತಿಯ ಮುಖದಲ್ಲಿದ್ದ ಆಗಿನ ಆ ಮ್ಲಾನತೆಯು ಅಳಿದು ಹೋಗಿ, ಮಗು ಸೊಸೆಯರನ್ನು ನೋಡಿ ಉಂಟಾದ ಅಕ್ಕರತೆಯು ಅವಳಲ್ಲಿ ಹೊರಸೂಸುತ್ತಿತ್ತು. ಆಗಿನ ಆ ಬಾಲ್ಯವನ್ನು ಮೆಟ್ಟಿ ಯೌವ್ವನದಲ್ಲಿ ಅಡಿಯಿಟ್ಟ ತನ್ನ ಮಗನನ್ನು ನೋಡಿದರು; ಅಲ್ಲಿ ತಮ್ಮ ಪಡಿನೆಳಲು ಕಾಣುತ್ತಿತ್ತು. ಗೃಹಲಕ್ಷ್ಮಿಯಂತೆ ತಮ್ಮ ಮಗನ ಹಿನ್ನೆಳಲಾಗಿ ನಿಂತ ಸೊಸೆಯನ್ನು ಕಂಡರು; ಅಗಾಧವಾದ ವಿಧೇಯತೆಯು ಅಲ್ಲಿ ಮಡು ಗೊಂಡಿತ್ತು. ತನ್ನ ಕೋಮಲವಾದ ತುಟಿಗಳನ್ನು ಹಿಗ್ಗಿಸಿ ಹುಚ್ಚುನಗೆ ನಗುವ ಮೊಮ್ಮಗನ ಕಂಡರು, ಅಲ್ಲಿ ಅವರಿಗೆ ತಮ್ಮ ಪಡಿನೆಳಲಿನ ನೆಳಲು ಕಾಣುತ್ತಿದ್ದಿತು. ಮತ್ತೆ ದೃಷ್ಟಿಯನ್ನು ಮೇಲಕ್ಕೊಯ್ದು ಎಲ್ಲವನ್ನೂ ನೋಡಿದರು. ಪ್ರಾಯಕ್ಕೆ ಬಂದ ಮಗನನ್ನು ನೋಡಿ ಅವರ ಜೀವದಲ್ಲಿ ತಾತ್ಪೂರ್ತಿಕವಾಗಿ ವಾತ್ಸಲ್ಯರಸವು ಉಕ್ಕಿ ಹೇಗೋ ಹೇಗೋ ಎನಿಸ ತೊಡಗಿತು. ಭಿಕ್ಷಾಪಾತ್ರೆಯನ್ನು ಬಿಸುಟ್ಟು ಮಗನನ್ನು ಬಿಗಿಯಾಗಿ ಅಪ್ಪಿಕೊಳ್ಳಬೇಕೆಂದು ಮನಸು ಧಾವಿಸತೊಡಗಿತು. ಆದರೆ ತವಕಿಸುತ್ತಿರುವ ಜೀವಕ್ಕೆ ಸಮಾಧಾನ ಹೇಳಿ ಮತ್ತೆ ಮನಸ್ಸನ್ನು ಬಿಗಿ ಹಿಡಿದರು.

ಇಷ್ಟು ಹೊತ್ತಿನವರೆಗೆ ನಿಂತು ಅವರೆಲ್ಲರ ರೂಪರಸವನ್ನು ಮನವಾರೆ ಅಪ್ಪಾಸಾಹೇಬರು ತಮ್ಮ ಕಣ್ಣುಗಳಿಂದ ಕುಡಿಯುತ್ತಿರುವುದು ಅವರಾರೂ ನೋಡಿರಲಿಲ್ಲ. ನೋಡಿದ್ದರೂ ಕೂಡ ಇವರನ್ನು ಗುರುತಿಸುವ ಸಂಭವವಿರಲಿಲ್ಲ. ಯಾಕೆಂದರೆ ಗಡ್ಡಗಳು ಬೆಳ್ಳಗಾಗಿದ್ದವು. ತಲೆಯಲ್ಲಿ ಜಡೆ ಕಟ್ಟಿದ್ದರು. ಅಲ್ಲದೆ ಮೊದಲಿನ ವೇಷ ಈಗೆಲ್ಲಿ? ಮಗನು ಇವರ ಭಿಕ್ಷಾಪಾತ್ರೆಯಲ್ಲಿ ಆಹಾರ ಪದಾರ್ಥಗಳನ್ನು ನೀಡುತ್ತಿರುವಾಗ

ಅವರ ಹೆಂಡತಿಯು ‘ಮಗು! ದಾನವನ್ನು ಪರಿಮಿತಿಯಿಂದ ಮಾಡಬೇಕಪ್ಪಾ!’ ಎಂದು ಹೇಳಿದರು. ಆಕೆಯು ಹೇಳುವ ಈ ಸ್ವರದಲ್ಲಿ ತಿರಸ್ಕಾರವಿದ್ದಿರಲಿಲ್ಲ; ಸಂಸಾರಿಕರ ಜಾಗರೂಕತೆಯಿತ್ತು. ಅಪ್ಪಾಸಾಹೇಬರೂ ತಿಳಿದುಕೊಂಡರು. ಮಗನು—‘ತಾಯಿ! ದಾನಕ್ಕೆ ನೀನು ಅಡ್ಡ ಬರಬೇಡ. ನಮಗೇನೂ ಈಗ ಕೊರತೆಯಿಲ್ಲ. ಸನ್ಯಾಸಿಗಳಿಗೆ ಕೊಡದಿದ್ದರೆ ಮತ್ತಾರಿಗೆ ಕೊಡುವುದು?’ ಎಂದು ಮಗನು ತಾಯಿಗೆ ಅನ್ನುತ್ತ ತನ್ನ ಹೆಂಡತಿಯ ಬಗಲಲ್ಲಿರುವ ಮಗುವನ್ನು ತಬ್ಬಿ ಗಲ್ಲಗಳನ್ನು ಹಿಡಿದು ಮುದ್ದಿಟ್ಟನು. ಆಗ ಅವನ ಹೆಂಡತಿಯಲ್ಲಿ ಹಿಗ್ಗು ಹೊರಹೊಮ್ಮಿ ನೀರಾಗಿ ಹರಿಯಿತು. ಇಷ್ಟರಲ್ಲಿ ಬಾಬಾ!....ನನ್ನ..ನನ್ನ’ ಎಂದು ತೊದಲುನುಡಿಗಳನ್ನು ನುಡಿಯುತ್ತ ತನ್ನ ಸಣ್ಣ ಸಣ್ಣ ಕೈಗಳನ್ನು ತನ್ನ ತಂದೆಯ ಕಡೆ ಆ ಮಗು ಚಾಚಿತು. ಆಗ ಅವನು ಹರುಷಿತನಾಗಿ ಬಿಗಿಯಾಗಿ ಕೂಸನ್ನಪ್ಪಿಕೊಂಡು ಸನ್ಯಾಸಿಯ ಪಾದಗಳಿಗೆ ಪೊಡಮಟ್ಟನು!!!

ಇದನ್ನೆಲ್ಲ ನೋಡುತ್ತಿದ್ದ ಅಪ್ಪಾಸಾಹೇಬರಿಗೆ ಆ ಸ್ಥಳವನ್ನು ಬಿಟ್ಟು ಮುಂದೆ ಹೋಗುವ ಶಕ್ತಿ ಉಳಿಯಲಿಲ್ಲ. ಅವರಲ್ಲಿ ಉಕ್ಕುತ್ತಿದ್ದ ಅಕ್ಕರತೆಯನ್ನೂ ಮನದ ಭಾವನೆಗಳನ್ನೂ ಮಕ್ಕಳುವಂತರಾದ ಮಹನೀಯರು ಕಲ್ಪಿಸಿಕೊಳ್ಳಲಿ! ಹೀಗೆ ಎಷ್ಟೋ ಹೊತ್ತು ನಿಂತರೂ ಕೂಡ ಅವರಾರ ಲಕ್ಷ್ಯ ಇವರ ಕಡೆ ಇರಲಿಲ್ಲ. ಯಾಕೆಂದರೆ ಭಿಕ್ಷೆಯನ್ನು ನೀಡಿದ ಬಳಿಕ ಸನ್ಯಾಸಿಗಳ ಬಗ್ಗೆ ಇರುವ ಗೃಹಸ್ಥರ ಕರ್ತವ್ಯವು ಮುಗಿದು ಹೋಗಿದ್ದಿತು. ಆಗ ಅಪ್ಪಾಸಾಹೇಬರೂ ತಮ್ಮ ಜೀವಕ್ಕೆ ಬುದ್ಧಿಯನ್ನು ಹೇಳಿಕೊಂಡರು. ‘ನನ್ನ ಜೀವನವು ಹೆಂಡರುಮಕ್ಕಳ ಅಲ್ಪ ಸುಖಕ್ಕಾಗಿ ಅಲ್ಲ. ನನಗೆ ಬೇಕಾದದ್ದು ಮಹಾ ಸುಖ. ಅಲ್ಪ ಸುಖದ ಆಶೆಗಾಗಿ ಮಹಾ ಸುಖದ ಪಥವನ್ನು ಪರಿತ್ಯಾಗ ಮಾಡುವುದು

ಮೂರ್ಖತನವು.' ಎಂದವರೆ ಆ ಸ್ಥಳವನ್ನು ಬಿಟ್ಟು ಅವರು ಸಾವಕಾಶ ವಾಗಿ ಮುಂದಕ್ಕೆ ನಡೆದರು. ಅಷ್ಟೊತ್ತಿಗೆ ಮಧ್ಯಾಹ್ನವಾದ್ದರಿಂದ ಭಿಕ್ಷಾಟನವನ್ನು ಮುಗಿಸಿ ಪರ್ವತಮಧ್ಯದಲ್ಲಿಯ ಮಹಾರಣ್ಯದ ಗುಹೆಯ ಕಡೆಗೆ ಹೊರಟರು.

ಅಪ್ಪಾಸಾಹೇಬರ ಮನಸ್ಸಿನಲ್ಲಿ ಒಂದೇ ಒಂದು ನಿಶ್ಚಯವು ಸುಳಿ ದಾಡುತ್ತಿದ್ದಿತು; 'ನಾನು ಮಹಾಸಿದ್ಧಿಯನ್ನು ಪಡೆದುಕೊಂಡೇ ಈ ಗುಹೆಯಿಂದ ಹೊರಗೆ ಬರಬೇಕು. ಇಲ್ಲವಾದರೆ ನಾಯಿ ನರಿಗಳಿಂದ ಎಳಿಸಿಕೊಂಡು ನನ್ನ ಮೂಳೆಗಳು ಹೊರಬರಬೇಕು. ಇನ್ನು ಸುಮ್ಮನೆ ಅಲೆದಾಡುವುದು ನನಗೆ ಬೇಕಿಲ್ಲ. ಈ ಭಿಕ್ಷಾನ್ನವನ್ನು ಕೂಡ ಸೇವಿಸ ಲಾರೆ. ಈ ಸ್ಥಳದಲ್ಲಿ ನನಗೆ ಜೀವನ ಸಾಫಲ್ಯವಾಗದಿದ್ದರೆ ಆಹಾರದಿಂದ ಪರಿಪೂರ್ಣವಾದ ಈ ಭಿಕ್ಷಾಪಾತ್ರೆಯನ್ನು ಮುಂದಿರಿಸಿಕೊಂಡೇ ಅನಶನ ವ್ರತದಿಂದ ದೇಹವನ್ನು ಬಿಟ್ಟುಕೊಡುವೆ' ಎಂದನ್ನುತ್ತ ಭಿಕ್ಷಾಪಾತ್ರೆ ಯನ್ನು ಗುಹೆಯ ಹೊರಮಗ್ಗುಲಿಗೇ ಬಿಟ್ಟುಕೊಟ್ಟು ತಾವು ಒಳಗೆ ಪ್ರವೇಶಿಸಿದರು.

ಅನಂತರ ಅಪ್ಪಾಸಾಹೇಬರು ಯೋಗಾಸನವನ್ನು ಹಾಕಿಕೊಂಡು ಜಪವನ್ನು ಮಾಡಲು ಆರಂಭಿಸಿದರು. ಹೀಗೆ ತಾಸುಗಳ ಮೇಲೆ ತಾಸುಗಳು ಕಳೆಯತೊಡಗಿದವು. ಆದರೂ ಅವರು ಕಲ್ಲಿನಂತೆ ಧ್ಯಾನಾ ರೂಢರಾಗಿ ಹಾಗೇ ಕುಳಿತಿದ್ದರು. ಹಗಲು ಕಳೆದುಹೋಯಿತು. ಆದರೂ ಅವರು ಏಳಲಿಲ್ಲ. ರಾತ್ರಿಯ ಕತ್ತಲೆಯು ಅವರನ್ನು ಮುಸುಕಿ ದರೂ ಅವರು ಮಿಸುಕಲಿಲ್ಲ. ಆಗ ಅವರ ಭಿಕ್ಷಾಪಾತ್ರೆಯು ಗುಹೆಯ ಹೊರಮಗ್ಗುಲಲ್ಲಿ ಇದ್ದುಕೊಂಡು ಬೆಳದಿಂಗಳಲ್ಲಿ ಕಂಗೊಳಿಸುತ್ತಿದ್ದಿ ತಾದರೂ ಅದರ ಕಡೆಗೆ ಇವರ ಆಶೆ ಹರಿಯಲಿಲ್ಲ. ಆ ಪರ್ವತದ

ವನಭೂಮಿಯ ಶಾಂತತೆಯನ್ನು ಭೇದಿಸಿ ಹುಲಿಕರಡಿಗಳ ಗುಡುಗು ಅಪ್ಪಾ ಸಾಹೇಬರಿಗೆ ಕೇಳಿಸತೊಡಗಿತು. ಗುಹೆಯ ಸನಿಹದಲ್ಲಿ ಬೆಳೆದಿದ್ದ ಗಗನ ಚುಂಬಿತವಾದ ವೃಕ್ಷಗಳು ಗಾಳಿಯ ಹೊಡೆತಕ್ಕೆ ದುಷ್ವಾಳಿಸುತ್ತಿದ್ದುವು. ಅವುಗಳಲ್ಲಿ ಕುಳಿತ ಹಿಂಸ್ರಪಕ್ಷಿಗಳು ಒಂದೇಸವನೆ ಚೀತ್ಕಾರಮಾಡುತ್ತಿದ್ದವು. ಇದಾವುದಕ್ಕೂ ಅವರ ಚಿತ್ತವು ಎರಡಾಗಲಿಲ್ಲ. ಕಟ್ಟಕಡೆಗೆ ಆ ಗುಹೆಯ ಒಂದು ಮೂಲೆಯಿಂದ ಸರಸರ ಎಂಬ ಸಪ್ಪಳ ಕೇಳಿಸತೊಡಗಿತು. ನಡುನಡುವೆ ಭೀಷಣ ಫೂತ್ಕಾರಗಳೂ ಕೇಳಿಸುತ್ತಿದ್ದವು. ಹಾವು ಎಂದರೆ ಅಪ್ಪಾಸಾಹೇಬರಿಗೆ ಹುಟ್ಟಾ ಭಯ. ಜನ್ಮವ್ಯಾಪಿಯಾದ ಸಂಸ್ಕಾರವು ಅವರನ್ನು ಒಂದಿಷ್ಟು ಅಲುಗಾಡಿಸದೆ ಬಿಡಲಿಲ್ಲ. ಕಣ್ಣು ತೆರೆದು ಸುತ್ತುಮುತ್ತು ನೋಡುತ್ತಾರೆ—ಗುಹೆಯ ಬಾಗಿಲಲ್ಲಿ ಚಂದ್ರ ಕಿರಣಗಳಲ್ಲಿ ಹೊಳೆಯುತ್ತಲಿದ್ದ ಭಿಕ್ಷಾಪಾತ್ರೆಯ ಹತ್ತರ ಇವರ ಕಡೆಗೇ ಹೆಡೆಯನ್ನೆತ್ತರಿಸಿ ಆಡುತ್ತಿದ್ದ ಪ್ರಕಾಂಡವಾದ ಒಂದು ಘಟಸರ್ಪ! ಆಗ ಅವರ ಮಗನು ಕೊಟ್ಟ ಭಿಕ್ಷಾನ್ನವನ್ನು ಅದು ಸ್ಪರ್ಶಮಾಡಿತು. ಅದನ್ನು ನೋಡುತ್ತ ಮತ್ತೆ ತಮ್ಮ ಕಣ್ಣುಗಳನ್ನು ಮುಚ್ಚಿ ಧ್ಯಾನಮಗ್ನರಾದರು. ಆ ಮೇಲೆ ಸ್ವಲ್ಪ ತಡೆದು ಮತ್ತೆ ಸಪ್ಪಳವಾಗತೊಡಗಿತು. ಈ ಸಪ್ಪಳು ಅಪ್ಪಾಸಾಹೇಬರಿಗೆ ತೀರ ಸಮೀಪಕ್ಕೇ ಬಂದಂತೆ ಎನಿಸಿತು. ಅದಾದ ಮೇಲೆ ಏನೋ ತಂಪಾದ ಪದಾರ್ಥ ತಮ್ಮ ಕಾಲುಗಳ ಮೇಲೆ ಬಂದಂತೆ ಅನಿಸಿತು. ಅನಿಸುವಷ್ಟರಲ್ಲಿಯೇ ಅದು ಹಾಗೇ ಮೇಲೆ ಏರತೊಡಗಿತು. ಆಗ ಅಪ್ಪಾಸಾಹೇಬರು ತಮ್ಮ ಕೈಗಳಿಂದ ಅದನ್ನು ಚಿಮ್ಮಿಬಿಡಬೇಕೆಂದರು. ಆದರೆ ಧೈರ್ಯವೆಷ್ಟೂ ಆಗಲಿಲ್ಲ. ಇದು ಬಹಳ ದುರ್ಧರವಾದ ಸರ್ಪವೆಂಬುದನ್ನು ಅವರು ಬಲ್ಲರು. ಅಲ್ಲದೆ ಇದನ್ನು ತಡವಿದರೆ ಖಂಡಿತವಾಗಿ ಕಚ್ಚದೆ ಬಿಡಲಾರದೆಂಬುದನ್ನೂ, ಅವರು ಅರಿತಿದ್ದರು.

ಭಯಭೀತರಾಗಿ ಚೀತ್ಕರಿಸಬೇಕೆಂದರು. ಅಷ್ಟು ಧೈರ್ಯ ಕೂಡ ಆಗಲಿಲ್ಲ. ಆದ್ದರಿಂದ ಶಾಂತವಾಗಿ ಹಾಗೇ ಕುಳಿತುಕೊಂಡರು. ಈಗ ಮಾತ್ರ ಆ ಹಾವು ತಮ್ಮ ತೊಡೆಯ ಮೇಲೆ ಸ್ಥಿರಾಸನ ಹಾಕಿಕೊಂಡು ಕುಳಿತು ಕೊಂಡದ್ದು ನಿಶ್ಚಿತವಾಯಿತು. ಸ್ವಲ್ಪ ಮಿಸುಕಿದರೆ ಅದು ತನ್ನ ಹೆಡೆ ಯನ್ನು ಅಪ್ಪಳಿಸಿ ತಮ್ಮ ಬರಿ ಮೈಯನ್ನು ಗಾಯಗೊಳಿಸದೆ ಬಿಡಲಾರ ದೆಂದು ಅವರು ಮನಸ್ಸಿನಲ್ಲಿ ಅಂದುಕೊಂಡರು. ಆದ್ದರಿಂದ ಅವರು ಎಷ್ಟೂ ಅಗಳಾಡಲಿಲ್ಲ. ಅಗಳಾಡಿದರೆ ಮೃತ್ಯು ನಿಶ್ಚಯವೆಂಬುದು ಅವರಿಗೆ ಗೊತ್ತು. ನಂತರ ಆ ಸರ್ಪವು ಗೋಣನ್ನು ಮೇಲಕ್ಕೆತ್ತಿ ಹೆಡೆ ಅಗಲಗೊಳಿಸಿತು; ತೂಗಾಡಿಸಿತು. ತೂಗಾಡಿಸಿ ತೂಗಾಡಿಸಿ ಅವರು ಜೋಡಿಸಿದ ಕೈಗಳ ಮೇಲೆ ತನ್ನ ಭಾರವನ್ನು ಹಾಕಿ ಬಿದ್ದುಕೊಂಡಿತು.

ಹೀಗೆ ಎಷ್ಟೋ ಹೊತ್ತು ಕಳೆದುಹೋದರೂ ಅಪ್ಪಾಸಾಹೇಬರು ಎಷ್ಟೂ ಅಲುಗಾಡಲಿಲ್ಲ. ಮೊದಲಿದ್ದ ಅವರಲ್ಲಿಯ ಆ ಭಯವು ಈಗ ನಿಮಿಷ ನಿಮಿಷಕ್ಕೆ ತಾನಾಗಿ ಕಡಿಮೆಯಾಗತೊಡಗಿತು. ಅವರ ಶಾರೀರಿಕ ಚಲನವಲನವಿಲ್ಲದ್ದರಿಂದ ಕಟ್ಟಾದ ರಕ್ತಾಣುಗಳೆಲ್ಲ ಈಗ ಸಾವಕಾಶವಾಗಿ ಚಲಿಸತೊಡಗಿದವು. ಅಲ್ಲದೆ ಭ್ರಾಂತಿಗೊಂಡ ಅವರ ಮಿದುಳು ಈಗ ಶಾಂತ ವಾಗತೊಡಗಿತು. ಹಾವು ನಿದ್ರಿತಾವಸ್ಥೆಯಲ್ಲಿ ತಮ್ಮ ತೊಡೆಯ ಮೇಲೆ ಮಲಗಿರುವುದನ್ನು ಅಪ್ಪಾಸಾಹೇಬರು ನೋಡಿದರು. ನೋಡುತ್ತ ನೋಡುತ್ತ, 'ಮನುಷ್ಯನು ಎಂಥ ತಿಳಿಗೇಡಿ ಇದ್ದಾನೆ! ಯಾವಾಗ್ಗೆ ನಾನು ನನ್ನ ಇದುರಿನಲ್ಲಿಯೇ ಆಹಾರದಿಂದ ತುಂಬಿದ ಪಾತ್ರೆಯನ್ನು ಬಿಸುಟಿ ಉಪವಾಸದಿಂದ ಸ್ವೇಚ್ಛೆಯಿಂದ ದೇಹತ್ಯಾಗ ಮಾಡಬೇಕೆಂದು ಸಂಕಲ್ಪಿಸಿಕೊಂಡಿದ್ದೆನೋ ಅದೇ ಕ್ಷಣದಲ್ಲಿಯೇ ಈ ಸರ್ಪವು ನನ್ನ ಹತ್ತಿರ ಬಂದಿದೆ. 'ನನಗೆ ಚರಮಶಾಂತಿಯನ್ನು ನೀಡುವವನು ನೀನು'

ಎಂದು ಆ ಸರ್ಪವನ್ನು ಸ್ವಾಗತಿಸದೆ ನನ್ನ ದೇಹದ ಮೇಲಿನ ಆಶೆಯಿಂದ ಅಂಜಿ ಎದೆಯೊಡೆದುಕೊಂಡೆ. ಆಗ ನನ್ನ ಪ್ರತಿಸ್ನಾಯುಗಳು ಕಂಪಿಸ ತೊಡಗಿದ್ದರಿಂದ ತುಂಬಾ ಬೆವತುಬಿಟ್ಟೆ. ಇದೆಲ್ಲಾ ನನ್ನ ಜೀವಗಳ್ಳತನದ ದ್ಯೋತಕವೇ! ನಾನು ನನ್ನ ಭಯಗಳನ್ನು ಜಯಿಸಬೇಕೆಂದಷ್ಟೂ ಹೊಸ ಹೊಸ ಭಯಗಳು, ಹೊಸ ಹೊಸ ರೂಪದಿಂದ ನನ್ನನ್ನಾವರಿಸಿದವು. ಸರ್ವ ಭಯಗಳ ಮೂಲವಾವುದೆಂಬುದನ್ನು ತಿಳಿದುಕೊಂಡ ಹೊರತು ಶಾಂತಿ ದೊರಕುವುದು ಅಸಂಭವ! ಶಾಂತಿಯನ್ನು ಬಯಸುವವರು ಪ್ರಾಣದಾಶೆಯನ್ನು ಪೂರ್ಣವಾಗಿ ಬಿಟ್ಟುಕೊಡದಿದ್ದರೆ ಹೇಗೆ? ಎಲ್ಲ ಭಯಗಳನ್ನು ದೂರೀಕರಿಸಬೇಕಾಗುವುದು. ಅಲ್ಲದೆ ಎಲ್ಲ ಆಕಾಂಕ್ಷೆಗಳ ಬೀಜಗಳನ್ನು ಹುರಿದು ಬಿಡಬೇಕಾಗುವುದು. ಹಾಗಾದರೇನೇ ಶಾಂತಿ' ಎಂದು ಆಲೋಚಿಸುತ್ತಿದ್ದ ಹಾಗೆ ಅವರಲ್ಲಿ ಜಗತ್ತಿನ ಅನಿತ್ಯತೆಯ ಬಗ್ಗೆ ನಿಶ್ಚಿತ ವಿಚಾರಗಳುದಿಸಹತ್ತಿದವು. ಅವರು ಹೆಚ್ಚು ಪರಿಸ್ಫುಟ ಭಾವದಿಂದ ಜಗತ್ತಿನಲ್ಲಿರುವ ಎಲ್ಲ ಬಾಹ್ಯ ಪದಾರ್ಥಗಳ ಪ್ರವಾಹವನ್ನು ಒಳಗೊಳಗೇ ಪರೀಕ್ಷಿಸತೊಡಗಿದರು. ಸಮಸ್ತ ಪೃಥ್ವಿಯೇ ಅನಿತ್ಯವೂ ಭ್ರಾಂತಿಮಯವೂ ಆಗಿರುವಾಗ ನಮ್ಮ ಮಮತ್ವವೂ ಮೋಹವೂ ಭ್ರಾಂತಿಯಲ್ಲದೆ ಬೇರೆ ಮತ್ತೇನೂ ಅಲ್ಲ' ಎಂದು ಮನಸ್ಸಿನಲ್ಲಿ ಅನ್ನುತ್ತ ಅನ್ನುತ್ತ ಪ್ರಶಾಂತವಾದ ಭಾವನೆಯಿಂದ ನಸುನಗೆಯನ್ನು ಸೂಸತೊಡಗಿದರು. ಆಗ ಯಾವುದೋ ಒಂದು ಅಜ್ಞಾತವಾದ ಪವಿತ್ರತೆಯಿಂದ ಅವರ ಹೃದಯ ತುಂಬಿತು. 'ಈ ಅನಿತ್ಯವಾದ ಪ್ರಪಂಚದ ಸ್ವರೂಪಜ್ಞಾನ ಮಾಡಿಕೊಳ್ಳಲು ದೇಹಪರ್ಯಂತ ಸರ್ವ ಪರಿತ್ಯಾಗದ ದೃಢಸಂಕಲ್ಪವುಂಟಾಗದಿದ್ದರೆ ಹೇಗೆ ಸಾಧ್ಯವಾದೀತು? ಈ ಭೌತಿಕ ಜೀವನಕ್ಕೆ ನಾನಾವ ಬೆಲೆಯನ್ನು ಕೊಡಲಾರೆ' ಎಂದು ಪುನಃ

ಪುನಃ ತಮ್ಮ ಆತ್ಮಕ್ಕೆ ಹೇಳಿಕೊಂಡರು. ಈ ಸಿದ್ಧಾಂತದೊಡನೆಯೇ ಅವರಿಗೆ—ತೊಡೆಯ ಮೇಲೆ ಘಟಸರ್ಪ ಮಲಗಿಕೊಂಡಿದ್ದರೂ ಒಂದು ಬಗೆಯ ಗಾಢ ನಿದ್ರೆ ಹತ್ತಿತು. ಧ್ಯಾನನಿದ್ರೆಯೆಂದು ನಾವು ಓದಿ, ಕೇಳಿದ್ದು ಇದೇ ಇರಬಹುದು. ಯಾವಾತನು ಜೀವಭಯದಿಂದ ಮುಕ್ತನಾಗಿರುವನೋ ಅಂಥವನ ತೊಡೆಯ ಮೇಲೆ ಸರ್ಪವಿದ್ದರೇನು; ಸಿಂಹ ವಿದ್ದರೇನು! ಆತನಿಗೆ ಎಲ್ಲಾ ಅಷ್ಟೆ !!

ಆಗ ಅಪ್ಪಾಸಾಹೇಬರು ಧ್ಯಾನನಿದ್ರೆಯಲ್ಲಿ ದಿವ್ಯ ಸ್ವಪ್ನವನ್ನು ಕಾಣುತ್ತಿದ್ದಾರೆ. ಸ್ವಪ್ನದಲ್ಲಿ ನೋಡುತ್ತಾರೆ, ಗುಹೆಯ ಸುತ್ತು ಮುತ್ತೆಲ್ಲಾ ಬಿದ್ದಿದ್ದ ತರಗೆಲೆಗಳು ಹಾಗೇ ಬಿದ್ದಿದ್ದವು; ಗುಹೆಯ ಬಾಗಿಲಲ್ಲಿ ಇದ್ದ ಪರಿಪೂರ್ಣ ಭಿಕ್ಷಾಪಾತ್ರೆಯೂ ಹಾಗೇ ಬಿದ್ದುಕೊಂಡಿದೆ. ಅಲ್ಲದೆ ತೊಡೆಯಲ್ಲಿ ನಿದ್ರಿಸುತ್ತಿದ್ದ ಆ ಹಾವೂ ಕೂಡ ಇನ್ನೂ ಹಾಗೇ ನಿದ್ರಿಸುತ್ತಲೇ ಇದೆ. ಅವರು ಆ ಸರ್ಪದ ಕಡೆಗೆ ನೋಡಿದಾಗ ಅದೂ ಕೂಡ ಎಚ್ಚತ್ತು ಇವರ ಕಡೆಗೆ ನೋಡತೊಡಗಿತು. ನೋಡುತ್ತ ನೋಡುತ್ತ ಮೆಲ್ಲನೆ ತನ್ನ ತಲೆಯನ್ನು ಮೇಲಕ್ಕೆತ್ತುತ್ತ ಹೆಡೆಯನ್ನು ಅಗಲಗೊಳಿಸತೊಡಗಿತು. ಅಷ್ಟರಲ್ಲಿ ಅದಕ್ಕೆ ಇವರ ಗಡ್ಡ ತಾಗಿದ್ದರಿಂದ ಕೆರಳಿ ಕೆಂಗಿಡಿಗಳನ್ನು ಕಾರತೊಡಗಿತು. ತನ್ನ ಎರಡೂ ನಾಲಗೆಗಳನ್ನು ಹೊರಗೆ ತೆಗೆದು ಇವರ ಮುಖದ ಕಡೆಗೆ ಮುಖಮಾಡಿ ತೂರಾಡತೊಡಗಿತು. ಆದರೂ ಅಪ್ಪಾಸಾಹೇಬರು ಪ್ರಶಾಂತವಾದ ಮನಸ್ಸಿನಿಂದ ಅದರ ಕಡೆಗೆ ನೋಡುತ್ತಲಿದ್ದರು. 'ಕಣ್ಣೆವೆ ಬಡಿಯುವುದಕ್ಕಿಂತ ವೇಗವಾಗಿ ಈ ಸರ್ಪದ ವಿಷದಂತಗಳು ನನ್ನ ಈ ದೇಹವನ್ನು ದಹಿಸಿಬಿಡ ಬಲ್ಲವು. ಹಾಗಾದುದೇ ಆದರೆ ಜೀವನ್ಮುಕ್ತಿಯೂ ವಿದೇಹಮುಕ್ತಿಯೂ ನನಗೆ ಎರಡೂ ಏಕಕಾಲಕ್ಕೇ ಲಭಿಸಿದಂತಾಗುವುದಲ್ಲಾ! ಯಾವುದು

ಸಾಯುವದಿದೆಯೋ ಅದಂತೂ ಸತ್ತೇ ಸಾಯುವುದು. ಆದರೆ ಯಾವುದು ಉಳಿಯುವುದಿದೆಯೋ ಅದು ಇನ್ನು ಚಿರಂತನವಾಗಿ ಉಳಿದುಬಿಡುವುದು! ನಾನೆಂಥ ಸೌಭಾಗ್ಯಶಾಲಿಯು!' ಎಂದೆನ್ನುತ್ತ ಧೀರರಾಗಿ ಶಾಂತವಾದ ಚಿತ್ತದಿಂದ ಆ ಸರ್ಪದ ಉಜ್ವಲ ಚಕ್ಷುಗಳ ಕಡೆಗೆ ಮತ್ತೆ ಮತ್ತೆ ನೋಡಿದರು! ಇದುವರೆಗೆ ಯಾವುದು ಸರ್ಪವಾಗಿ ತೋರಿದ್ದಿತೋ ಅದು ನಿಜವಾಗಿ ಸರ್ಪವಿರದೆ ತಮ್ಮ ಪ್ರತಿಬಿಂಬದ ಬಿಂಬದಂತಿದ್ದ ಮೊಮ್ಮಗನೇ ಆಗಿದ್ದಿತು! ಮುದ್ದು ಮಗು ತೊಡೆಯಲ್ಲಿ ಆಡುವುದನ್ನು ಕಂಡರು. ಆ ಶಿಶು ಇವರೆಡೆ ನೋಡುತ್ತ ಆಗ ಕುಲು ಕುಲು ಎಂದು ನಗುತ್ತಿದ್ದಿತು. ಆದರೆ ಅಪ್ಪಾಸಾಹೇಬರು ಮಾತ್ರ ಆ ಮಗುವಿನ ಕಡೆಗೆ ನೋಡಿ ನಗಲಿಲ್ಲ. ಇಷ್ಟೇ ಅಲ್ಲ ಯಾವ ಭಾವಾಂತರವೂ ಕೂಡ ಅವರಲ್ಲಿ ಈಗ ಆಗಲಿಲ್ಲ. ಈಗ ಅವರು ಭಾವಾತೀತ ಸ್ಥಿತಿಗೆ ಮುಟ್ಟಿದ್ದರು.

'ಈತನು ನನ್ನ ಮೊಮ್ಮಗನೆ? ಈ ಮೊದಲು ಈತನೆಲ್ಲಿದ್ದನೆಂಬುದು ಈತನಿಗೆ ಗೊತ್ತಿಲ್ಲ. ಮುಂದೆ ಎಲ್ಲಿಗೆ ಹೋಗುವನೆಂಬುದೂ ಈತನಿಗೆ ತಿಳಿಯದು' ಎಂದು ಭಾವಿಸತೊಡಗಿದಾಗ ಅವರಿಗೆ ತಾವು ಎಲ್ಲೋ ಅತ್ಯುಚ್ಚವಾದ ಸ್ಥಳಕ್ಕೆ ಹಾರಿ ಹೋಗುತ್ತಿರುವಂತೆ ಅನಿಸತೊಡಗಿತು. ಅವರು ಮೊದಲು ಕಾಣುತ್ತಿದ್ದ ದೃಶ್ಯಗಳೆಲ್ಲ ಈಗ ಅದೃಶ್ಯವಾಗಿ ಅವರ ಹಿಂದುಮುಂದುಗಡೆಗೆಲ್ಲ ಬೆಳಕಿನೊಳಗಿನ ಬೆಳಕೊಂದು ವ್ಯಾಪಿಸ ತೊಡಗಿತು. ಆ ಬೆಳಕಿನ ಮಧ್ಯದಲ್ಲಿ ಅಸದೃಶವಾದ ಒಂದು ದೃಶ್ಯವನ್ನು ಕಂಡರು. ಕೆಂಜೆಡೆಯ ಶಿವನ ಕಂಡರು. ಸುಲಿಪಲ್ಗಳಗೊರವನ ಕಂಡರು. ಹೊಳೆವ ತ್ರಿಶೂಲ, ಡಮರುಗಳನ್ನು ಕರಗಳಲ್ಲಿ ಧರಿಸಿ ಧ್ಯಾನಮುದ್ರೆಯಲ್ಲಿ ಕುಳಿತ ಪರಮಾತ್ಮನ ಕಂಡರು. ಭಸ್ಮಧಾರಿಯಾದ ಆ ಪರಮನ ಅಂಗ ದಿಂದೆದ್ದ ಪ್ರಶಾಂತವಾದ ರಶ್ಮಿಗಳು ಹೊರಸೂಸುತಿದ್ದುದನ್ನು ಕಂಡರು.

ಬಿಗಿದು ಕಟ್ಟಿದ ಕೆಂಜೆಡೆಗಳಲ್ಲಿ ಗಂಗೆಯನ್ನು ಕಂಡರು. ಚಂದ್ರಮನನ್ನು ನೋಡಿದರು. ಅವರಲ್ಲೀಗ 'ಜಯ ಭಗವಾನ್ ಜಯ ಭಗವಾನ್!' ಎಂಬ ಒಂದೇ ಒಂದು ವಾಣಿಯು ತಾಂಡವವಾಡ ತೊಡಗಿತು. ಅಷ್ಟರಲ್ಲಿ ನಿದ್ರೆಯೂ ತಿಳಿಯಿತು. ಕಣ್ದೆರೆದು ನೋಡುತ್ತಾರೆ ಪೂರ್ವದಿಕ್ಕಿನಲ್ಲಿ ಆದೇ ಉದಯೋನ್ಮುಖನಾದ ಬಾಲಸೂರ್ಯನ ಕಿರಣಗಳು ಅವರ ಗುಹೆಯಲ್ಲಿ ಹೊಕ್ಕು ನವಿಲುಗರಿಗಳಂತೆ ರಂಜಿಸುತ್ತಿದ್ದವು! ಹೊರಗೆ ಹಕ್ಕಿಗಳು ಗಿಡಮರಗಳಲ್ಲಿ ಸುಸ್ವರದಿಂದ ಹಾಡುತ್ತಿದ್ದವು. ಅದನ್ನೆಲ್ಲ ನೋಡುತ್ತ ಕೇಳುತ್ತ ತಮ್ಮ ತೊಡೆಯ ಕಡೆಗೆ ದೃಷ್ಟಿ ಚೆಲ್ಲಿದರು. ತೊಡೆಯಲ್ಲಿ ಆಡುತ್ತಿದ್ದ ಹಾವು ನಿಜವಾಗಿಯೇ ಈಗ ಹೇಗೋ ಮಟ್ಟ ಮರೆಯಾಗಿ ಬಿಟ್ಟಿದ್ದಿತು. ಆಗ ಅವರಿಗೆ ತಾವು ಸ್ವಪ್ನದಲ್ಲಿರುವೆವೋ ಜಾಗೃತಾವಸ್ಥೆಯಲ್ಲಿರುವೆವೋ ಎಂಬುದು ತಿಳಿಯದಾಯಿತು.

ಇಂದಿಗೆ ಅಪ್ಪಾಸಾಹೇಬರು ಸಿದ್ಧಪುರುಷರಾಗರು. ಜೀವನದ ಯಾವ ತೊಡಕುಗಳೂ ಯಾವ ದುಃಖಗಳೂ ಯಾವ ಅಶಾಂತತೆಗಳೂ ಈಗ ಅವರೆಡೆಗೆ ಮರೆತು ಸಹ ಸುಳಿಯಲಾರವು. ಅವರು ಹೀಗೆ ಜನ್ಮ ಸಾಫಲ್ಯವನ್ನು ಹೊಂದಿ ಗುಹೆಯ ಹೊರಗೆ ಬಂದು ನೋಡಿದರು. ಭಿಕ್ಷಾಪಾತ್ರೆಯು ಇದ್ದಕ್ಕಿದ್ದಂತೆ ಹಾಗೆ ತುಂಬಿಕೊಂಡು ಕುಳಿತಿದೆ. ಅದಕ್ಕೆ ನಮಿಸಿ 'ಓಂ ಭಗವಾನ್' ಎಂದು ತಮ್ಮ ಗಂಭೀರವಾದ ವಾಣಿಯಿಂದ ಉಚ್ಚರಿಸುತ್ತ ಶ್ರೀಮಲ್ಲಿಕಾರ್ಜುನ ಮಹಾಸ್ವಾಮಿಯ ಗುಡಿಯ ಕಡೆಗೆ ಧೀರ ಗಮನದಿಂದ ಸಾಗಿದರು!

ಯಾರು ಮೋಹವನ್ನು ಪರಿತ್ಯಾಗ ಮಾಡಿದ್ದಾರೋ ಅವರು ಅಮೃತತ್ವವನ್ನೂ ಕೂಡ ಆಕಾಂಕ್ಷಿಸಲಾರರು. ಇಂಥವರನ್ನೇ ಪುರಾತನರು 'ಧೀರ'ರೆಂಬ ಶಬ್ದದಿಂದ ಅಲಂಕರಿಸಿರುವರು.

---

## ೪

ಅಪ್ಪಾಸಾಹೇಬರ ಸಾಧನ ಸಮಾಪ್ತಿಗೆ ಅವರ ಕತೆ ಮುಗಿಯಿತೆನ್ನಬೇಕು. ಯಾಕೆಂದರೆ ಮುಂದಿನ ಅವರ ಸಿದ್ಧಾವಸ್ಥೆಯ ಜೀವನದಲ್ಲಿ ತಾವು ಕಂಡ ಅನುಭವಗಳನ್ನು ಉಪದೇಶ ಮಾಡುತ್ತ ಎಲ್ಲ ಕಡೆಗೂ ತಿರುಗಿದ್ದರಾದರೂ ಆಗಿನ ಅವರ ಜೀವನಕ್ಕೆ ವೈವಿಧ್ಯವಿರಲಿಲ್ಲ. ಒಂದು ಕಡೆ ನಡೆಯುತ್ತಿದ್ದ ಪ್ರಸಂಗಗಳೇ ಮತ್ತೊಂದೆಡೆ ನಡೆಯುತ್ತಿದ್ದುವಲ್ಲದೆ ಅವರ ಉಪದೇಶಗಳ ರೀತಿಯೂ ಒಂದೇ ಆಗಿದ್ದಿತು. ಧೀರರಿಗಿರುವ ಮನೋಧರ್ಮಗಳು ಅವರಲ್ಲಿ ಒಂದು ವಾಸವಾಗಿದ್ದುದರಿಂದ ಅವರ ಆಂತರಿಕ ಜೀವನವನ್ನೂ ವರ್ಣಿಸುವದುಳಿದಿಲ್ಲ.

ಆಗಿನ ಅವರ ಜೀವನವು ಯಾವ ಆಡಂಬರದ್ದಲ್ಲ. ಹಾಸಲು ಹುಲಿ ಚರ್ಮ, ಕೈಯಲ್ಲಿ ಕಮಂಡಲು ಅಲ್ಲದೆ ಕೌಪೀನಗಳೇ ಅವರ ಹೆಚ್ಚಿನ ಸಾಮುಗ್ರಿಗಳು. ಕೂತಲ್ಲಿಯೇ ಅವರ ಮಠ. ಜನರು ನೆರೆದಲ್ಲಿಯೇ ಅವರ

ಉಪದೇಶಾಂಗಣ. ಅವರು ಆಡಿದ ಮಾತು ಕೇಳಿದವರಿಗೆ ಅಮೃತೋಪ ದೇಶ; ದೇವಸಂಜೀವನಿ. ಆ ಅಮೃತವನೀಂಟಿ ಕೃತಾರ್ಥರಾಗದಿರುವವರು ಬಲು ವಿರಳ.

ಹೀಗೆ ಅಮೃತೋಪಮಾನವಾದ ತಮ್ಮ ವಾಣಿಯನ್ನು ಸುರಿಸಿ ಬದ್ಧರಾದ ಜೀವಿಗಳಿಗೆ ಮುಕ್ತಿಯ ಮಾರ್ಗವನ್ನು ತೋರಿಸುತ್ತ ಅಪ್ಪಾ ಸಾಹೇಬರು ದೇಶಸಂಚಾರವನ್ನು ಮಾಡತೊಡಗಿದರು. ಅವರ ಸಂಚಾರ ದಲ್ಲಿ ಒಮ್ಮೆ ಒಂದು ಹಳ್ಳದ ದಡದಲ್ಲಿದ್ದ ಮನೋಹರವಾದ ಒಂದು ಉತ್ತತ್ತಿಯ ಬನದಲ್ಲಿ ಅವರು ಇಳಿದುಕೊಂಡಿದ್ದರು. ಆ ಸ್ಥಾನವು ಪ್ರಕೃತಿದೇವಿಯ ಸಿರಿಮನೆಯೆನ್ನುವಷ್ಟು ಸೊಬಗುಳ್ಳದ್ದಾಗಿತ್ತು. ಗಿಡ ಗಳಿಂದ ಗಿಡಗಳಿಗೆ ಅಚ್ಚ ಹಸುರಾದ ಬಳ್ಳಿಗಳು ನಿಬಿಡವಾಗಿ ಹಬ್ಬಿ ಮನೋಹರವಾದ ಮಂಟಪಗಳನ್ನು ಅಲ್ಲಲ್ಲಿ ನಿರ್ಮಿಸಿದ್ದವು. ಆ ಮಂಟಪ ಗಳ ಸುತ್ತುಮುತ್ತೆಲ್ಲ ಮಗಮಗಿಸುವ ಕಾಡ ಹೂಗಳೇಸೋ ತಮ್ಮ ಪಕಳೆಗಳನ್ನು ಬಿಚ್ಚಿ ಸುಳಿಗಾಳಿಗೆ ತಲೆದೂಗುತ್ತಿದ್ದವು. ಒಂದೆಡೆ ಭೃಂಗ ಗಳು ಝೇಂಕರಿಸುತ್ತಿದ್ದರೆ ಮತ್ತೊಂದೆಡೆ ಕೋಗಿಲೆಗಳು ಕೂಗು ತ್ತಿದ್ದವು. ಪಚ್ಚರತ್ನದ ಹಾಸಿಗೆಯಂತೆ ಬೆಳೆದ ಹಸುರಾದ ಹುಲ್ಲು ನೆಲದ ಮೇಲೆ ನೀಳವಾದ ಗರಿಗಳನ್ನು ಬಿಚ್ಚಿ ಕುಣಿಕುಣಿದು ಗೋಣನೆತ್ತಿ ಕೇಕೆ ಹಾಕುವ ಬೆಡಗಿನ ನವಿಲೊಂದು ಕಡೆ ನಲಿಯುತ್ತಿದ್ದರೆ ಮತ್ತೊಂದು ಕಡೆ ಹಸರು ಛಾಯೆಯಲ್ಲಿ ಹೊಂಬಣ್ಣವಿಳಿದ ಎಳೆಗರಿಕೆಯನ್ನು ಮುಂಬ ಲ್ಲುಗಳಿಂದ ಒಂದೊಂದೇ ಎಸಳು ಕಚ್ಚಿ ಭೂಮಾತೆಯ ಬಗೆರಸವ ಮೆಲ್ಲುತ್ತ ತಮ್ಮ ಬಟ್ಟಲುಗಣ್ಣುಗಳನ್ನು ತಿರುಗಿಸುವ ಎರಳೆಗಳು ಆಡುತ್ತಿದ್ದವು.

ಸುಮಾರು ಒಂಬತ್ತುಗಂಟೆಯಾಗಿರಬಹುದು. ಆ ಹಳ್ಳದ ತಿರುಗಣೆಯ ಮಡುವಿನ ಹತ್ತಿರ ಸಿಬಿಡವಾದ ಒಂದು ಬಳ್ಳಿಮನೆಯಲ್ಲಿ ತಮ್ಮ ವ್ಯಾಘ್ರಚರ್ಮದ ಮೇಲೆ ಗಂಭೀರ ಮುದ್ರೆಯಿಂದ ಅಪ್ಪಾಸಾಹೇಬರು ಕುಳಿತುಕೊಂಡಿದ್ದಾರೆ. ಎಷ್ಟೋ ಭಕ್ತ ಜನರು ಭಯಭಕ್ತಿಗಳಿಂದ ಅವರ ಸುತ್ತೆಲ್ಲ ನೆರೆದಿದ್ದಾರೆ. ಅವರು ಹೇಳುವ ಮಾತುಗಳನ್ನು ಆ ಭಕ್ತರು ನಮ್ರತೆಯಿಂದ ಕೇಳಿ ಕೇಳಿ ತಲೆದೂಗುತ್ತಿದ್ದಾರೆ. ಮತ್ತೊಂದು ಕಡೆ ಅವರ ಹಿಂಬಾಲಿಸಿ ಬಂದಿದ್ದ ಬೇರೆ ಸನ್ಯಾಸಿಗಳು ತಮ್ಮ ಕಾವಿಯ ಕಪನಿಗಳನ್ನೂ ಕೌಪೀನಗಳನ್ನೂ ಒಗೆದು ತಂದು ಬಳ್ಳಿಗಳ ಮೇಲೆ ಒಣಹಾಕುತ್ತಿರುವಾಗ ದೂರದಲ್ಲಿ ಆಡುತ್ತಿದ್ದ ಎರಳೆಗಳು ಇವರ ಕಡೆಗೆ ಓಡಿ ಬಂದು ಮೈಯ ನೆಕ್ಕಲು ಹವಣಿಸುತ್ತಿವೆ. ಮರೆತು ನಿಂತ ಸನ್ಯಾಸಿಗಳು ಏನಾಯಿತೆಂದು ಗರಕ್ಕನೆ ತಿರುಗಿ ನೋಡುವಷ್ಟರಲ್ಲಿ ಅಲ್ಲೇ ಸಮೀಪದಲ್ಲಿ ಆಡುವ ನವಿಲುಗಳು ಬೆದರಿ ಕೇಕೆ ಹಾಕುತ್ತ ಮೇಲೆ ಹಾರುತ್ತಿವೆ. ಆಗ ಅವುಗಳ ಬೀಸುವ ಪಕ್ಕಗಳಿಗೆ ಬಟ್ಟೆಗಳು ಹಾರಿ ಕೆಳಗೆ ಬೀಳುವವು. 'ಶಿವಶಿವಾ! ಗುರುಗಳ ಬಟ್ಟೆಯು ಕೆಳಗೆ ಬಿದ್ದಿತಲ್ಲಾ!' ಎಂದು ಅನ್ನುತ್ತ ಭಯಭಕ್ತಿಯಿಂದ ಅವನ್ನು ಮೇಲಕ್ಕೆತ್ತಿ ಮತ್ತೆ ನೀರಿನಲ್ಲಿ ಮಡಿಮಾಡಿಕೊಂಡು ಬರುವರು. ಮತ್ತೊಂದು ಕಡೆ ಮಡಿಗಳನ್ನುಟ್ಟು ಕಾಡ ಕಟ್ಟಿಗೆಗಳನ್ನು ಹೊತ್ತಿಸುತ್ತ ಅಡುಗೆಯ ಸಿದ್ಧತೆಯಲ್ಲಿ ಬೇರೆ ಕೆಲ ಸನ್ಯಾಸಿಗಳು ತೊಡಗಿದ್ದರು. ಇದನ್ನೆಲ್ಲ ಸ್ವಾಮಿಗಳ ದರ್ಶನಕ್ಕೆಂದು ಬಂದು, ದೂರದಲ್ಲಿ ನಿಂತ ತರಣನೊಬ್ಬನು ವಿಸ್ಮಯವಾದ ನೇತ್ರಗಳಿಂದ ನೋಡಿದನು. ಆ ಬಳ್ಳಿಮನೆಯಲ್ಲಿ ಸ್ವಾಮಿಗಳು ಕುಳಿತಿರುವದನ್ನೂ ಅವರ ಮಾತುಗಳಿಗಾಗಿ ಅವರ ಸುತ್ತೆಲ್ಲ ಕುಳಿತ ಭಕ್ತರು ತಲೆದೂಗುತ್ತಿದ್ದುದನ್ನೂ ಅಲ್ಲದೆ ಇನ್ನುಳಿದ ಅಲ್ಲಿಯ ಎಲ್ಲ ದೃಶ್ಯಗಳನ್ನೂ ಈ

ಮೊದಲು ಎಲ್ಲಿಯೋ ಒಂದು ಚಿತ್ರದಲ್ಲಿ ಕಂಡದ್ದು ಅವನ ಜ್ಞಾಪಕಕ್ಕೆ ಬರತೊಡಗಿತು. 'ನನಗೆ ಭ್ರಾಂತಿಯೇನಾದರೂ ಆಗಿದೆಯೇ? ಈಗ ಇಲ್ಲಿ ಕಾಣುವ ದೃಶ್ಯವೆಲ್ಲ ಹಿಂದೆ ನಾನೆಲ್ಲಿ ಕಾಣಲು ಶಕ್ಯವಿದೆ!' ಎಂದು ಮತ್ತೆ ಮತ್ತೆ ವಿಚಾರಿಸತೊಡಗಿದನು. ಆ ವಿಚಾರದಲ್ಲಿಯೇ ಆ ಸ್ಥಳವನ್ನು ಬಿಟ್ಟು ಮನೆಯ ಕಡೆಗೆ ಹೊರಟನು.

ಮನೆಗೆ ಹೋದರೂ ಕೂಡ ಆ ತರುಣನಿಗೆ ಸಮಾಧಾನವಿರಲಿಲ್ಲ. 'ಈ ದಿನ ಕಂಡ ದೃಶ್ಯವನ್ನು ನಾನೆಲ್ಲೋ ಚಿತ್ರದಲ್ಲಿ ಕಂಡಿದ್ದೇನೆ' ಎಂಬ ಮಾತು ಮತ್ತೆ ಮತ್ತೆ ಆತನ ಮನದಲ್ಲಿ ದೃಢವಾಗತೊಡಗಿತು. ತನ್ನ ಮನೆಯಲ್ಲಿಯೇ ಆ ಚಿತ್ರ ಕಂಡ ಅನಿಸಿಕೆಯು ಹೆಚ್ಚಾದಾಗ ಅತ್ತಿತ್ತ ಏನೋ ನೋಡತೊಡಗಿದನು. ಹೀಗೆ ನೋಡುವಷ್ಟರಲ್ಲಿ ಬಹಳ ದಿನ ಗಳಿಂದ ಬಿಚ್ಚದೆ ಇದ್ದ ಹಳೆಯ ಕಾಗದ-ಪತ್ರಗಳ ಒಂದು ಗಂಟು ಆತನ ದೃಷ್ಟಿಗೆ ಬಿತ್ತು. ಇದರಲ್ಲಿದ್ದುದಾದರೂ ಏನೆಂದುಕೊಂಡು ಅದನ್ನು ಬಿಚ್ಚಿ ನೋಡುವಷ್ಟರಲ್ಲಿ ಬಹಳ ಹೀನಾವಸ್ಥೆಯಲ್ಲಿದ್ದ ಒಂದು ಚಿತ್ರವು ಅವನ ಕೈಗೆ ಬಿತ್ತು. ಅದರ ಮೇಲೆ ಕುಳಿತ ಹೊಲಸನ್ನೆಲ್ಲ ತನ್ನ ಬಟ್ಟೆಯಿಂದ ಒರಿಸಿ ನೋಡುತ್ತಾನೆ—ತಾನು ಕಂಡ ಇಂದಿನ ಅಲ್ಲಿಯ ದೃಶ್ಯವೆಲ್ಲ ಈ ಚಿತ್ರದಲ್ಲಿ ಕಾಣುತ್ತಿದೆ! ಆಗ ಉಂಟಾದ ಅವನ ಆಶ್ಚರ್ಯಕ್ಕೆ ಆಳತೆಯಿರ ಲಿಲ್ಲ. ಮತ್ತೆ ಮತ್ತೆ ಆ ಚಿತ್ರವನ್ನು ನೋಡತೊಡಗಿದನು. ಅದರ ಮೇಲೆ ಅದನ್ನು ಬರೆದವನ ಅಂಕಿತವನ್ನೂ ಕಾಲವನ್ನೂ ಬರೆದಿದ್ದರು. 'ಈ ಸನ್ಯಾಸಿ ಕುಳಿತ ಸ್ಥಳದ ಇಂದಿನ ದೃಶ್ಯವನ್ನು ಎಪ್ಪತ್ತು ವರುಷಗಳ ಹಿಂದೆ ಬರೆದ ಈ ಚಿತ್ರದಲ್ಲಿ ಚಿತ್ರಕಾರನು ಹೇಗೆ ಚಿತ್ರಿಸಿದನು? ಇದರ ಮರ್ಮವೇನು!' ಎಂದು ಬಹಳ ಗೊಂದಲದಲ್ಲಿ ಬಿದ್ದನು. ಕಡೆಗೆ ಇದನ್ನು ತನ್ನ ತಾಯಿಗೆ ಕೇಳಬೇಕೆಂದು ಅವಳನ್ನು ಒದರಿದಾಗ ಒಳಗಿನಿಂದ

ಪಾರ್ವತಿಯಮ್ಮನವರು ಹೊರಗೆ ಬಂದು 'ಏಕೆ?' ಎಂದು ಕೇಳಿದರು. ಆಗ ಆತನು ಆ ಚಿತ್ರವನ್ನು ಅವರ ಕೈಯಲ್ಲಿ ಕೊಟ್ಟು 'ಅಮ್ಮಾ! ಇದು ಯಾರ ಚಿತ್ರ? ಯಾರು ಬರೆದವರು? ಇದರ ಬಗ್ಗೆ ನಿನಗೇನಾದರೂ ಗೊತ್ತಿದೆಯೇ?' ಎಂದು ಆತುರತೆಯಿಂದ ಪ್ರಶ್ನೆಮಾಡಿದನು. ವೃದ್ಧಾವಸ್ಥೆಗೆ ಬಂದ ಪಾರ್ವತಿಯಮ್ಮನವರು ತಮ್ಮ ಮಂದವಾದ ಕಣ್ಣುಗಳಿಂದ ಹೆಚ್ಚು ತೀಕ್ಷ್ಣವಾಗಿ ಅದನ್ನು ನೋಡತೊಡಗಿದರು. ಬಹಳ ಹೊತ್ತಿನವರೆಗೆ ವಿಚಾರಿಸಿದರು. ಅವರು ತಮ್ಮ ಪೂರ್ವಜೀವನದ ಏನೇನು ಸ್ಮೃತಿಗಳನ್ನು ಮನದಲ್ಲಿ ತಂದುಕೊಂಡರೋ ಏನೋ, ಒಮ್ಮೆಲೆ ಅವರ ಕಣ್ಣುಗಳಲ್ಲಿ ಓತಪ್ರೋತವಾಗಿ ಹೊಯ್ದಾಡುವ ನೀರು ಆತನ ಆಶ್ಚರ್ಯವನ್ನು ಇಮ್ಮಡಿಸಿತು. 'ಅಮ್ಮಾ! ಏನು?' ಎಂದು ಮತ್ತೆ ಕೇಳಿದನು. ಆಗ ಪಾರ್ವತಿಯಮ್ಮನವರು ಕಣ್ಣೀರಿಡುತ್ತ 'ತಮ್ಮಾ! ನಾನು ಪಾಪಿ! ನಿನ್ನ ಹಡೆದವರು ಕಲ್ಯಾಣಮಾರ್ಗವನ್ನು ಹಿಡಿದು ಹೋಗಿಬಿಟ್ಟರು. ನಾನು ಪಾಪಿಯಾಗಿ ಇಲ್ಲೇ ತೊಳಲಾಡುತ್ತಿದ್ದೇನೆ. ಅವರ ಪಾದ ದರುಶನವು ಇನ್ನೆಂದಾದರೂ ಆದೀತೆ?' ಎಂದು ಅನ್ನತೊಡಗಿದಾಗಂತೂ ಆ ಕುಮಾರನಿಗೆ ಹೇಗ್ಹೇಗೋ ಅನಿಸತೊಡಗಿತು. 'ಈ ಚಿತ್ರಕ್ಕೂ ನಿನ್ನ ಅಳುವಿಗೂ ಸಂಬಂಧವೇನು? ನಾನು ಈ ಚಿತ್ರದ ಕತೆ ಕೇಳಿದರೆ ನೀನು ಅತ್ತುಬಿಡುವಿಯಲ್ಲಮ್ಮಾ!' ಎಂದು ನುಡಿದಾಗ ಅವಳು ಹೀಗೆ ಹೇಳಿದಳು:— ಈ ಚಿತ್ರಕ್ಕೂ ನನ್ನ ಅಳುವಿಗೂ ಸಂಬಂಧವಿಲ್ಲದೆ ಇಲ್ಲಪ್ಪಾ! ಈ ಚಿತ್ರದಲ್ಲಿರುವ ಸಾಧುಗಳು ನಿನ್ನ ಹಡೆದವರು. ಇದರಲ್ಲಿ ನಿನ್ನ ಅಜ್ಜಂದಿರು ನಿನ್ನ ತಂದೆಯ ಭವಿಷ್ಯ ಬರೆದಿಟ್ಟಿದ್ದಾರೆ. ನಿನ್ನ ತಂದೆಯವರು ಹುಟ್ಟಿದಾಗ ಅವರ ಭವಿಷ್ಯದ ದೆಸೆಯಿಂದ ನಿಮ್ಮ ಅಜ್ಜಂದಿರಿಗೆ ಒಂದು ಕನಸು ಬಿದ್ದಿತ್ತಂತೆ. ಆ ಕನಸು ಅವರು ಸನ್ಯಾಸಿಗಳಾಗುವರೆಂದು

ಸೂಚಿಸಿತ್ತಂತೆ. ಅಲ್ಲದೆ ಮನೆಮಾರುಗಳನ್ನೂ ಹೆಂಡರುಮಕ್ಕಳನ್ನೂ ಬಿಟ್ಟು ಸನ್ಯಾಸಿಗಳಾಗಿ ಸಿದ್ಧಿಯನ್ನು ಪಡೆದು ದೇಶಸಂಚಾರ ಮಾಡುತ್ತ ಈ ಊರ ಯಾವದೋ ಒಂದು ಬನದಲ್ಲಿ ವಾಸವಾಗುವರೆಂದು ಅವರ ಕನಸಿನಲ್ಲಿ ಹೇಳಿತ್ತಂತೆ. ಹಾಗೆಯೇ ಅವರ ಮತ್ತು ಅವರ ವಾಸಸ್ಥಾನದ ಚಿತ್ರಗಳೆಲ್ಲ ನಿಮ್ಮ ಅಜ್ಜಂದಿರ ಕನಸಿನಲ್ಲಿ ಮೂಡಿದ್ದವಂತೆ. ಅವರು ಒಳ್ಳೇ ಚಿತ್ರಕಾರರಿದ್ದದ್ದರಿಂದ ತಾವು ಕಂಡ ದೃಶ್ಯಗಳನ್ನು ಇದ್ದಕ್ಕಿದ್ದ ಹಾಗೆ ಇಲ್ಲಿ ಚಿತ್ರಿಸಿದ್ದಾರೆ. ಅವರಿಗೆ ಬಿದ್ದ ಆ ಭವಿಷ್ಯದ ಕನಸು ಇಲ್ಲಿಯವರೆಗೆ ಎಲ್ಲಾ ಸತ್ಯವಾಗುತ್ತ ಬಂದಿದೆಯಪ್ಪಾ! ಈಗ ಅವರು ಸಿದ್ಧ ಪುರುಷರಾಗಿ ಈ ಊರಿಗೆ ಬರುವುದೊಂದು ಉಳಿದಿದೆ. ಅದರ ಹಾದಿಯನ್ನೇ ನಾನೀಗ ಕಾಯುತ್ತಲಿದ್ದೇನೆ. ಈ ಚಿತ್ರ ಹೇಗೋ ಕಳೆದು ಹೋಗಿದ್ದರಿಂದ ಅವರನ್ನು ಕಾಣುವ ಆ ನನ್ನ ಭರವಸೆಯು ಬಹಳವಾಗಿ ಕುಗ್ಗಿಹೋಗಿತ್ತು. ಈಗ ಮತ್ತೆ ಆ ನನ್ನ ಆಶೆಯು ನಿಚ್ಚಳವಾಗಿ ನನ್ನ ಕಣ್ಣೆದಿರಿಗೆ ಕುಣಿಯುತ್ತಲಿದೆ' ಎಂದು ಹೇಳಿ ತಮ್ಮ ಕಣ್ಣುಗಳನ್ನು ಒರಿಸಿಕೊಳ್ಳತೊಡಗಿದರು.

ಕಟ್ಟಕಡೆಗೆ ಈಗ ಉತ್ತತ್ತಿ ಬನದಲ್ಲಿ ಬಂದಿಳಿದ ಸನ್ಯಾಸಿಗಳು ನ್ಯಾಯಾಧೀಶರಾದ ಅಪ್ಪಾಸಾಹೇಬರೇ ಎಂದು ಪಾರ್ವತೆಮ್ಮನವರಿಗೆ ಗೊತ್ತಾದಾಗ ಹಿಗ್ಗು ಹೆಚ್ಚಾಯಿತು. ಅವರ ಕಾಣುವ ತವಕ ಇಮ್ಮಡಿಸಿದಾಗ ಮಡಿಯನುಟ್ಟು ಕಾಯಿ ಕರ್ಪೂರಗಳನ್ನು ಕೈಯಲ್ಲಿ ಹಿಡಿದುಕೊಂಡು ತಮ್ಮ ಕುಮಾರನೊಡನೆ ಅವರ ದರುಶನಕ್ಕೆ ಹೊರಟರು. ಆಗಿನ ಅವರ ನಡಿಗೆಯ ರೀತಿ ಮತ್ತು ಮುಖದ ಭಾವಗಳನ್ನು ನೋಡಿದರೆ ತಮ್ಮ ಹಿರಿಯರ ಪಾದತಲದಲ್ಲಿ ಬಿದ್ದು ಯಾವಾಗ್ಗೆ ಹೊರಳಾಡೇನು! ಅವರ ಪಾದದ ಹುಡಿಯನ್ನು ಹಣೆಗೆ ಹಚ್ಚಿಕೊಂಡು ಯಾವಾಗ್ಗೆ

ಪುನೀತಳಾದೇನು!! ಎನ್ನುವ ಅವರ ಅಂತರಂಗದ ಭಾವವು ಒಡೆದು ಕಾಣುತ್ತಿತ್ತು. ಅಲ್ಲದೆ ಅವರ ಕುಮಾರನ ಮುಖದಲ್ಲಿಯೂ ತನ್ನ ತಂದೆಯವರು ಇಂಥ ಮಹತ್ ಪದವಿಗೆ ಹೋದರಲ್ಲಾ! ಎಂಬ ಹೆಮ್ಮೆ ಒಂದು ಕಡೆ ಎದ್ದುಕಾಣುತ್ತಿದ್ದರೆ ಮತ್ತೊಂದು ಕಡೆ ತಾನೂ ಪವಿತ್ರ ನಾಗಬೇಕೆನ್ನುವ ಭಾವ ಹೊರಹೊಮ್ಮುತ್ತಿತ್ತು.

ಪಾರ್ವತೆಮ್ಮನವರು ಕುಮಾರನೊಡನೆ ಅಪ್ಪಾಸಾಹೇಬರ ಬಿಡಾರಕ್ಕೆ ತಲುಪಿ ತಂದ ಕಾಯಿ ಕರ್ಪೂರಗಳನ್ನು ಅಂತಃಕರಣಪೂರ್ವಕ ವಾಗಿ ಅರ್ಪಿಸಿ ನಮಿಸುವಷ್ಟರಲ್ಲಿಯೇ ಅವರ ಉಪದೇಶವು ಪ್ರಾರಂಭ ವಾಗಿದ್ದಿತು.

ಅವರು ಸಿಕ್ಕಸಿಕ್ಕವರಿಗೆಲ್ಲ ಸನ್ಯಾಸದ ಮಹತ್ವವನ್ನೇ ಹೇಳುತ್ತಿರ ಲಿಲ್ಲ. ಶ್ರೋತೃಗಳ ಮನೋಧರ್ಮ ಮತ್ತು ಪ್ರಕೃತಿಧರ್ಮಗಳನ್ನು ಅರಿತು ಬೇರೆ ಬೇರೆ ಜನರಿಗೆ ಬೇರೆ ಬೇರೆ ರೀತಿಯಾಗಿ ಉಪದೇಶ ಮಾಡುತ್ತಿದ್ದರು.

"ಮೊಲೆಯ ಮೇಲಿರ್ಪ ಯೋಗಿಗಳುಂಟು ಲೋಕದಿ
ಶಿಲೆಯ ಮೇಲಿರ್ಪ ಭೋಗಿಗಳುಂಟು"

ಎಂಬ ಭರತೇಶನ ಮಾತುಗಳನ್ನು ಆಗಾಗ ಹೇಳಿ 'ಅಪ್ಪಗಳಿರಾ, ಪ್ರಪಂಚದಲ್ಲಿದ್ದರೂ ಕೂಡ ಪಾರಮಾರ್ಥವನ್ನು ಗಳಿಸುವವರು ಉಂಟು. ಎಲ್ಲವನ್ನೂ ತ್ಯಾಗಮಾಡಿ ಸನ್ಯಾಸಿಗಳಾಗಿಯೂ ಕೂಡ ಭೋಗಿಗಳಂತೆ ಹೊನ್ನು ಹೆಣ್ಣುಗಳ ಮೇಲೆ ಆಶೆಮಾಡುವವರೂ ಇದ್ದಾರೆ. ಕೇವಲ ಕೌಪೀನ ಕಮಂಡಲುಗಳಿಗೆ ಅಧ್ಯಾತ್ಮ ಸಿಗಲಾರದು. ಪಾರಮಾರ್ಥ ದೊರೆಯಲಾರದು. ಬಾಹ್ಯದಲ್ಲಿ ಬರೇ ಹೆಣ್ಣು, ಹೊನ್ನು, ಮಣ್ಣುಗಳನ್ನು ಬಿಟ್ಟೆವೆಂದು ಹೇಳುವುದರಲ್ಲಿ ಏನೂ ತಥ್ಯವಿಲ್ಲ. ಅದರಿಂದ ಮಾಂಗಲ್ಯವೂ

ಇಲ್ಲ. ಸತ್ಯವಾಗಿ ನೋಡಿದರೆ 'ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ; ನಮ್ಮ ಮನದ ಮುಂದಿನ ಆಶೆಯೇ ಮಾಯೆಯಾಗಿದೆ' ನಮ್ಮ ಮನಸದಲ್ಲಿಯ ಆ ಆಶೆಯನ್ನು ಕಳೆದುಕೊಳ್ಳಬೇಕು. 'ಆಶೆಯೇ ಸರ್ವ ಪಾಶಕ್ಕೆ ಮೂಲ'ವೆಂಬುದನ್ನು ಮರೆಯಬಾರದು. ಎಲ್ಲವನ್ನೂ ಬಿಟ್ಟುಕೊಟ್ಟು ನಾನು ಸನ್ಯಾಸಿಯಾಗಿದ್ದೇನೆಂದು ಹೇಳಿಕೊಂಡು ಗುಡ್ಡದ ಮೇಲೆ ತಪಶ್ಚರ್ಯ ಮಾಡುವ ಯೋಗಿಯ ಮನಸ್ಸು ಹೊನ್ನು ಹೆಣ್ಣಿಗಾಗಿ ಚಿಂತಿಸಿದರೆ ಆತನು ಹೇಗೆ ಅಧಃಪಾತಕ್ಕೆ ಇಳಿಯುವನೋ ಹಾಗೆಯೇ ಎಲ್ಲ ಆಶೆಗಳನ್ನೂ ಬಿಟ್ಟುಕೊಟ್ಟು ನಾನು ಮಾಡುವದೆಲ್ಲ ಪರಮಾತ್ಮನ ಸೇವೆಯೆಂಬ ಭಾವನೆಯಿಂದ ಕಾರ್ಯ ಮಾಡುವವನು ಸದ್ಗತಿಯನ್ನು ಪಡೆಯುವನು. ಜೀವನವು ಅಸ್ಥಿರವಿದೆಯಲ್ಲಾ! ಮುಪ್ಪು ಸಾವುಗಳು ಮನುಷ್ಯಗೆ ಬಿಟ್ಟಿಲ್ಲವಲ್ಲಾ!! ಎಂದು ಎದೆಯೊಡೆದುಕೊಳ್ಳುವವರು ಎಷ್ಟೋ ಜನರಿದ್ದಾರೆ. ಅವರು ಹೀಗೆ ಧೈರ್ಯಗುಂದುವ ಕಾರಣವಿಲ್ಲ. ಏಕೆಂದರ ಜಗತ್ತಿನ ಯಾವ ಪದಾರ್ಥವೂ ನಾಶವಾಗುವದಿಲ್ಲ. ಅವು ನಿಮಿನಿಮಿಷಕ್ಕೂ ಸ್ಥಿತ್ಯಂತರ ಹೊಂದುತ್ತವೆ ಇಷ್ಟೆ! ನಿಮಿನಿಮಿಷಕ್ಕೂ ಸ್ಥಿತ್ಯಂತರ ಹೊಂದುವ ಈ ಜಗತ್ತಿನಲ್ಲಿ ಮುಪ್ಪು ಸಾವುಗಳು ಅನಿವಾರ್ಯವಾಗಿವೆ. ಈ ಮುಪ್ಪು ಸಾವುಗಳಧೀನವಾಗಿರುವ ಈ ಶರೀರವೆ ನಾವೆಂದು ತಿಳಿದುಕೊಂಡಾಗ ಹೆದರಿಕೆಯುಂಟಾಗುವದು ಸಹಜ. ಈ ಶರೀರವೇ ನಾವಲ್ಲ. ಒಳಗೆ ನಾನು ಎಂಬುವವನೊಬ್ಬನು ಬೇರೆ ಇದ್ದಾನೆ. ಅವನಿಗೆ ಈ ಶರೀರವು ಬರೇ ಹೊದಿಕೆ ಮಾತ್ರ. ಅವನು ಇಂಥ ಎಷ್ಟೋ ಹೊದಿಕೆಗಳನ್ನು ಬಿಸುಟುತ್ತ ಹೊಸಹೊಸ ಹೊದಿಕೆಗಳನ್ನು ಹೊರಬಲ್ಲನೆಂಬುದನ್ನು ನಾವು ತಿಳಿದುಕೊಂಡಾಗ ಆ ಭಯ ನಮಗೆ ಬಾಧಿಸದು. ಈ ಜಗತ್ತಿನಲ್ಲಿ ಸುಖಕ್ಕಿಂತ ದುಃಖವೇ

ಹೆಚ್ಚಿದೆಯೆಂಬುದು ಸತ್ಯ. ಈ ದುಃಖ ನಮಗೆ ಸ್ಥಾಯಿಯಾಗಿ ಇರುವ ದುಃಖವಲ್ಲವೆಂಬುದೂ ಸತ್ಯ. ಈ ಜೀವನವೇ ಸಮರಭೂಮಿಯಾಗಿರುವುದರಿಂದ ಹಾಗೆ ಅನಿಸುವುದೂ ಸಹಜ. ಸಮರಾಂಗಣದಲ್ಲಿ ವೈರಿಗಳನ್ನು ನದೆಬಡೆದಾಗ ವಿಜಯವೂ ಶ್ರೀಯೂ ಹೇಗೆ ಲಭಿಸುವವೋ ಹಾಗೆಯೇ ಜೀವನದಲ್ಲಿ ಬರುವ ತೊಂದರೆಗಳಿಗೂ ಸಂಕಟಗಳಿಗೂ ಎದೆಗೆಡದೆ ಸುಖ ದುಃಖಗಳು ಸಮನೆಂಬ ಭಾವನೆಯಿಂದಲೂ ಅವೆಲ್ಲವುಗಳು ಪರಮಾತ್ಮನ ಇಚ್ಛೆಯಿಂದ ಬರುತ್ತವೆಂಬ ನಿಶ್ಚಯದಿಂದಲೂ ಅವುಗಳಿಂದ ಬರುವ ಒಂದೊಂದು ಅನುಭವಗಳಿಂದ ನಮ್ಮ ಜೀವನವನ್ನು ಕಟ್ಟುತ್ತ ನಡೆದರೆ ದೈವಶ್ರೀಯು ಒಲಿಯುವಳು. ನಮ್ಮ ಜೀವನವು ಸುಖಮಯವಾಗುವುದು' ಎಂದು ಹೇಳತೊಡಗಿದರು. ಹೀಗೆ ಹೇಳುತ್ತಿರುವಾಗ ಅವರ ಕುಮಾರನು ಕೈಮುಗಿದುಕೊಂಡು 'ಸ್ವಾಮಿ! ನಾನೊಂದು ಪ್ರಶ್ನೆ ಕೇಳುತ್ತೇನೆ ಗಮನಿಸಬೇಕು' ಎಂದನು. ಅದಕ್ಕೆ ಅಪ್ಪಾಸಾಹೇಬರು 'ಕೇಳಬಹುದು' ಆತನು ಹೀಗೆ ಕೇಳಿದನು:—

'ಸ್ವಾಮಿ! ತಾವು ಮಾಡುವ ಉಪದೇಶದಿಂದ ಪ್ರಪಂಚವನ್ನು ಪರಿತ್ಯಾಗ ಮಾಡಿ ಜೀವನಕ್ಕೆ ವಿಮುಖರಾಗುತ್ತ ಸನ್ಯಾಸಿಗಳಾಗದೆ ಪ್ರಪಂಚದಲ್ಲಿದ್ದರೂ ಶಾಂತಿಯನ್ನು ಪಡೆಯಬಲ್ಲೆವೆಂಬ ಅರ್ಥವು ವಿದಿತವಾಗುತ್ತಿದೆ. ತಮ್ಮ ಜೀವನಕ್ಕೂ ಈ ಉಪದೇಶಕ್ಕೂ ಅಂತರವಾಗುವುದಿಲ್ಲವೆ?'

ಇದಕ್ಕೆ ಅಪ್ಪಾಸಾಹೇಬರು—'ಸರಿ, ನಾನು ಹೇಳುವ ಮಾತು ಪ್ರಾಪಂಚಿಕರಿಗೆ ಉಪಯೋಗವಿರುವಷ್ಟು ಪ್ರಾಪಂಚಿಕರು ತೆಗೆದುಕೊಳ್ಳಲಿ. ಸನ್ಯಾಸಿಗಳಿಗೆ ಉಪಯೋಗವಾಗುವಷ್ಟು ಸನ್ಯಾಸಿಗಳೂ ತೆಗೆದುಕೊಳ್ಳಲಿ. ನನ್ನ ಮಾತುಗಳಿಂದ ಸನ್ಯಾಸಿಗಳಿಗೆ ಸದ್ಗತಿಯಿಲ್ಲವೆಂದು

ಹೇಳಿದಂತಲ್ಲ. ಎಲ್ಲರಿಗೂ ಚಿತ್ತಪ್ರಸನ್ನತೆಯೇ ಮುಖ್ಯವಾಗಿದೆ. ಪ್ರಸನ್ನ ಚಿತ್ತರಿಗೇ ದುಃಖಗಳು ಬರಲಾರವು. ಪ್ರಸನ್ನಚಿತ್ತರ ಬುದ್ಧಿ ಬೇಗನೆ ಸ್ಥಿರವಾಗುವುದು. ಸ್ಥಿರವಿಲ್ಲದ ಬುದ್ಧಿಯುವನು ವಿವೇಕಿ ಇರುವುದಿಲ್ಲ. ವಿವೇಕವಿಲ್ಲದಲ್ಲಿ ಭಕ್ತಿ ಮತ್ತು ಶಾಂತಿಗಳು ಎಲ್ಲಿಂದ ಬರಬೇಕು? ಶಾಂತಿ ಇರದಲ್ಲಿ ಸುಖವಿಲ್ಲ. ಚಿತ್ತವನ್ನು ಪ್ರಸನ್ನಗೊಳಿಸುವದಕ್ಕಾಗಿ, ಬುದ್ಧಿಯನ್ನು ಸ್ಥಿರಗೊಳಿಸುವದಕ್ಕಾಗಿ ಮತ್ತು ವಿವೇಕವನ್ನು ಗಳಿಸುವದಕ್ಕಾಗಿ ಅಲ್ಲದೆ ಸುಖಶಾಂತಿಗಳನ್ನು ಹೊಂದುವದಕ್ಕಾಗಿ, ನಾನು ಮನೆ ಮಾರುಗಳನ್ನೂ ಹೆಂಡರುಮಕ್ಕಳನ್ನೂ ಬಿಡಬೇಕಾಯಿತು. ಪ್ರಪಂಚದಲ್ಲಿಯ ಪ್ರತಿಯೊಂದೂ ಸಾಧಕವೂ ಇದೆ; ಬಾಧಕವೂ ಇದೆ. ಬಾಧಕವಿದ್ದದ್ದನ್ನು ಸಾಧಕವನ್ನಾಗಿ ಮಾಡಿಕೊಳ್ಳುವ ಶಕ್ತಿಯನ್ನು ದೇವರು ನಮಗೆ ಕೊಟ್ಟಿದ್ದಾನೆ. ಇದನ್ನು ನಾವು ತಿಳಿದುಕೊಳ್ಳಬೇಕು. ನನಗೇನೋ ಪ್ರಪಂಚವೆಲ್ಲಾ ಆಗ ಬಾಧಕವೆನಿಸಿದ್ದರಿಂದ ಸನ್ಯಾಸಿಯಾದೆ. ಬರೇ ಸನ್ಯಾಸಿಯಾಗುವುದರಿಂದಲೇ ನನ್ನ ಜೀವನ ಸಾಫಲ್ಯವಾಗುವದಿಲ್ಲವೆಂಬುದು ತಿಳಿದ ಮೇಲೆ ಯಾವ ರೀತಿ ಮನಸ್ಸನ್ನು ಸ್ವಾಧೀನಗೊಳಿಸಬೇಕಿತ್ತೊ ಆ ರೀತಿ ಸ್ವಾಧೀನಗೊಳಿಸಿಕೊಂಡೆ. ಮನಸ್ಸನ್ನು ಸ್ವಾಧೀನದಲ್ಲಿಟ್ಟು ಇಂದ್ರಿಯಗಳನ್ನು ರಾಗದ್ವೇಷಗಳಿಂದ ಮುಕ್ತಮಾಡಿ ಚಿತ್ತವನ್ನು ಪ್ರಸನ್ನಗೊಳಿಸಿ ಬೇಕು ಬೇಡೆಂಬುದನ್ನು ಅತಿಗಳೆದು ಬಂದುದೆಲ್ಲಾ ಪರಮಾತ್ಮನ ಪ್ರಸಾದವೆಂದು ಯಾವ ಸನ್ಯಾಸಿಯು ಸಾಧಿಸಬೇಕಾಗುವದೋ ಅದನ್ನೇ ಪ್ರಾಪಂಚಿಕನೂ ಸಾಧಿಸಿದರೆ ಸುಖಶಾಂತಿಗಳನ್ನು ಹೊಂದುವನು. ತರುಣನೆ! ನೀನಿನ್ನೂ ಚಿಕ್ಕವನಿದ್ದರೂ ನೀನು ಮಾಡಿದ ಈ ಪ್ರಶ್ನಕ್ಕಾಗಿ ನನಗೆ ಬಹಳ ಸಂತೋಷವಾಯಿತು. ಭಾವು! ಭಾವು!! ನಿನ್ನ ಮನದ ಮಾತನ್ನು ಇಷ್ಟು ಧೈರ್ಯವಾಗಿ ಕೇಳಬೇಕಾದರೆ

ನಿನ್ನ ಹಡೆದಾತನು ಪುಣ್ಯಶಾಲಿ ಇರಬೇಕು!' ಎಂದು ಅಪ್ಪಾಸಾಹೇಬರು ತಮ್ಮ ಮಾತನ್ನು ಮುಗಿಸುವಷ್ಟರಲ್ಲಿ ಪಾರ್ವತಿಮ್ಮನವರ ಕುತ್ತಿಗೆಯ ಶಿರಗಳು ಬಿಗಿದುಬಂದು ಮಾತುಗಳು ಹೊರಗೆ ಬರದಾದವು. ಮತ್ತೊಮ್ಮೆ ಅಪ್ಪಾಸಾಹೇಬರಿಗೆ ನಮಸ್ಕಾರ ಮಾಡುತ್ತ 'ಕಡೆಗೊಮ್ಮೆ ನಿಮ್ಮ ಪಾದದರ್ಶನಕೊಟ್ಟು ನಮ್ಮನ್ನು ಪುನೀತರನ್ನಾಗಿ ಮಾಡಿದಿರಲ್ಲಾ! ಈತನು ನಿಮ್ಮ ಹೊಟ್ಟೆಯ ಮಗು! ನೀವು ನಮ್ಮನ್ನೆಲ್ಲಾ ಪರಿತ್ಯಜಿಸಿ ಹೋಗುವಾಗ ಈತನಿನ್ನೂ ಹಾಲುಗಲ್ಲ ಕರಗದ ಹಸುಳೆ. ಆ ಹಸುಳೆಯನ್ನು ಪರಿಪರಿಯಾಗಿ ಪಾಲಿಸಿ ಜೀವಕ್ಕೆ ಜೀವವನ್ನೆರೆದು ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದೇನೆ. ಈಗ ಈ ರತ್ನ ತಮ್ಮದೆಂದು ತಮ್ಮ ಪಾದತಲಕ್ಕೆ ಅರ್ಪಿಸಲು ತಂದಿದ್ದೇನೆ. ಇದನ್ನು ಪರಿಗ್ರಹಿಸಬೇಕು. ಅಲ್ಲದೆ ನನಗೂ ಆಶೀರ್ವದಿಸಿ ಸದ್ಗತಿಯ ಮಾರ್ಗವನ್ನು ತೋರಿಸಿಕೊಡಬೇಕು.' ಎಂದು ಅನ್ನುತ್ತ ತಮ್ಮ ಎರಡೂ ಕೈಗಳನ್ನು ಜೋಡಿಸಿ ಅವರ ಮುಖದ ಕಡೆಗೆ ತಮ್ಮ ಮುಖವನ್ನು ಹೊರಳಿಸಿದರು. ಇದೆಲ್ಲ ನಡೆದಿರುವಾಗ ನೆರೆದ ಜನಜಂಗುಳಿಯು ಸ್ತಬ್ಧವಾಗಿ ಇವರ ಕಡೆಗೆ ತನ್ನ ಕುತೂಹಲದ ನೇತ್ರಗಳಿಂದ ನೋಡುತ್ತಿತ್ತು. ಅಪ್ಪಾಸಾಹೇಬರು ಮಾತ್ರ ತಮ್ಮ ಗಂಭೀರ ಮುದ್ರೆಯಲ್ಲಿ ಕುಳಿತವರು ಹಾಗೇ ಕುಳಿತಿದ್ದರು. ಅವರ ಭಾವದಲ್ಲಿ ಯಾವ ಚಲನವಲನಗಳಾಗಿರಲಿಲ್ಲ. ಎಲ್ಲರನ್ನು ಸಂತೈಸಿ ಮತ್ತೆ ತಮ್ಮ ಉಪದೇಶಾಮೃತವನ್ನುಣಿಸಲು ಅಣಿಯಾದರು.

ಇಂದು ನಡೆದ ಆ ತಂದೆಮಕ್ಕಳ ಸಂವಾದವು ಪ್ರೇಕ್ಷಕರ ಹೃದಯದಲ್ಲಿ ಕಾಲಾಂತರದವರೆಗೂ ಒಡಮೂಡಿತು.

# ನಮ್ಮ ಗ್ರಂಥ ಮಾಲೆಯ
# ಹಿ ತೈ ಷಿ ಗ ಳು

೧ ಶ್ರೀಮಂತ್ ಶಾಂತವೀರ ಸ್ವಾಮಿಗಳು ಬಬಲೇಶ್ವರ

೨ ,, ಸಂಗನಬಸವ ಸ್ವಾಮಿಗಳು ಬಂಥನಾಳ

೩ ಮಾಧವದಾಸಜಿ ಸಾಧೂ ಮಹಾರಾಜ ಪಂಢರಪೂರ

೪ ಶ್ರೀ ಗುರುಪಾದೇಶ್ವರ ತತ್ವಜ್ಞಾನ ಮಂದಿರ ಮ್ಯೆಂದರಗಿ

೫ ವಿಜಾಪುರದ ಸಾಹಿತ್ಯಾಭಿಮಾನಿ ಧನಿಕ ಮಹಾಶಯರೊಬ್ಬರು

೬ ಶ್ರೀಮಂತ ಬಾಬಾಸಾಹೇಬ ಸರದೇಸಾಯರು ರಕ್ಕಸಗಿ–
ವಿಜಾಪುರ

೭ ಶ್ರೀ. ಸಕ್ಕರೀ ಬಂಧುಗಳು ಇಲಕಲ್ಲ

೮ ಶ್ರೀಮಾನ್ ಹ. ಬ. ಕೊಣ್ಣೂರ ಎಮ್. ಎ. ವಿಜಾಪುರ

೯ ಜ್ಞಾನೋದಯ ನಾಟಕ ಮಂಡಳಿಯ ಒಡೆಯರಾದ
ಆರ್. ಜಿ. ಹೋಳಗಿಯವರು ಹಂದಿಗನೂರು

೧೦ ಶ್ರೀಮಂತ ರಾಮರಾವ ಚಿಂತಾಮಣ ನಾಡಗೌಡರು ಹಲಸಂಗಿ

೧೧ ಶ್ರೀ. ಸರಸಂಬಿ ಶಿವಲಿಂಗಪ್ಪನವರು ಚಡಚಣ

## ಹೊಸ ವರ್ಷದ

# ನಮ್ಮ ಸಹಾಯಕರು

೧ ಶಿಕ್ಷಕರ ಸಹಕಾರಿ ಸಂಘ ತಾಲೂಕ ಇಂಡಿ ೨೦
೨ ಶ್ರೀ. ದೊಡ್ಡಮೇಟಿ ಅಂದಾನೆಪ್ಪನವರು ಜಕ್ಕಲಿ M. L. A. ೧೫
೩ ,, ಎನ್. ವ್ಹಿ. ಕುಲಕರ್ಣಿ ಸ್ಟೇಷನ್ ಮಾಸ್ತರರು ನಾಸಿಕ
೪ ,, ತಂಬಾಕೆ ಸಿದ್ಧರಾಮಪ್ಪನವರು ತಾಳೀಕೋಟಿ
೫ ,, ಶಿಕ್ಷಕರ ಸಹಕಾರಿ ಸಂಘ ತಾಲೂಕ ಬಾಗೇವಾಡಿ ೧೦
೬ ,, ಲಿಂಗಪ್ಪ ಬಸಪ್ಪ ದೇಸಾನಿ ಅ। ಮಾಸ್ತರರು ನಾಲತವಾಡ ೧೦
೭ ,, ಎನ್. ಜೆ. ಎಮ್. ೮॥
೮ ,, ಬಿ. ಗುರುಸಿದ್ದಣ್ಣಾ ಭಾರತ ವ್ಯಾಯಾಮಶಾಲೆ ಕೊಟ್ಟೂರ ೫
೯ ,, ಮಡಿವಾಳಪ್ಪ & ಬ್ರದರ್ಸ ಶಿವಾನಂದ ಪ್ರೆಸ್ ಗದಗ ೫
೧೦ ,, ಎಸ್. ವ್ಹಿ. ಅಡ್ಡಣಗಿ ಬಿ. ಎ. ಎಲ್‌ಎಲ್. ಬಿ. ಬೆಳಗಾಂವ ೫
೧೧ ಡಾ. ಪಿ. ಪಿ. ಹಳೇಮನಿ M. B. B. S. (ಮುಂಬಯಿ) L. R. C. P. (ಲಂಡನ) M. R. C. S. (ಇಂಗ್ಲಂಡ) ಹುಬ್ಬಳ್ಳಿ ೫
೧೨ ಶ್ರೀ. ಆರ್. ಎಚ್ ಕುಲಕರ್ಣಿ B. A. LL. B. ವಕೀಲರು ವಿಜಾಪುರ ೫
೧೩ ,, ಎಮ್. ಬಿ. ಕೋರಬು ಡಿ. ಸ್ಕೂಲಬೋರ್ಡ ಸುಪರವಾಯಜರರು ವಿಜಾಪೂರ ೫
೧೪ ,, ಜಿ. ಎಸ್. ಕಂಬಳಿ ಎಕ್ಸಾಯಿಜ್ ಇನಸ್ಪೇಕ್ಟರರು ಬಾಗಲಕೋಟಿ ೫
೧೫ ಡಾ. ಸ್ವಾಮಿ ಚಂದ್ರಶೇಕರಶಾಸ್ತ್ರಿಗಳು ಇಲಕಲ್ಲ
೧೬ ಶ್ರೀ. ರಾಮಪ್ಪ ಲಕ್ಷ್ಮಣಪ್ಪ ಚಿಕ್ಕೋಡಿ ಜ. ಮರ್ಚಂಟ ರಬಕವಿ ೫
೧೭ ,, ಬಸವಂತಪ್ಪ ದೊಡ್ಡಪ್ಪ ಫತ್ತೇಪೂರ ಜ. ಮರ್ಚಂಟ ಬದಾಮಿ ೫

೧೮ ,, ಎಸ್. ಎಸ್. ಹಿರೇಮಠ B. A. ಯುನಿಯನ್
ಸುಪರ್‌ವಾಯ್‌ಜರರು ಗದಗ ೫

೧೯ ,, ಹಾರನಹಳ್ಳಿ ಮಾಸ್ತರರು M. A. ಗ। ಹೈಸ್ಕೂಲ ವಿಜಾಪುರ ೫

೨೦ ,, ಜಿ. ಎಲ್. ವೈದ್ಯ ಆಡಿಟರ ಕೊ. ಆ. ಸೋಸಾಯಟಿ
ಆಫೀಸ ವಿಜಾಪೂರ ೫

೨೧ ,, ಆರ್. ಬಿ. ಆಲಭಾಳ B. A. ಡಿ. ಸ್ಕೂಲಬೋರ್ಡ
ಸುಪರವಾಯ್‌ಝರ್ ವಿಜಾಪುರ ೫

೨೨ ,, ಬಿ. ಪಿ. ಹಿರೇಮಠ ಯುನಿಯನ್ ಮ್ಯಾನೇಜರರು ಬದಾಮಿ ೫

೨೩ ,, ಎಂ. ಬಿ. ಕಿಣಗಿ ಮಾಲಕರಿ ಕಚೇರಿ ಬೀಳಗಿ ೫

೨೪ ,, ಟಿ. ಎಂ. ಹಾಳಕೇರಿ ಆ। ಮಾಸ್ತರರು ಬದಾಮಿ ೫

೨೫ ,, ತಿ. ವೆ. ಕುಲಕರ್ಣಿ ಹೆ। ಮಾಸ್ತರರು ಸಾಲವಡಗಿ ೫

೨೬ ,, ಲಿಂಗಪ್ಪ ಶಿವೂರ ಅಥಗಾ೯ ೫

೨೭ ,, ಲಕ್ಷ್ಮಣ ಭೀಮರಾವ ಗುಮಾಸ್ತೆ ಹೆ। ಮಾಸ್ತರರು
ರೇವತಗಾಂವ ೫

೨೮ ,, ಗುರುನಾಥ ಅಪ್ಪಾಜಿ ಕುಲರ್ಕ ಹೆ। ಮಾಸ್ತರರು
ಅಗರಖೇಡ ೫

೨೯ ,, ಸಿದ್ದಪ್ಪ ಬಸಪ್ಪ ಜಮುಖಂಡಿ ಹೆ। ಮಾಸ್ತರರು ಭತ್ತಗುಣಿಕಿ ೫

೩೦ ,, ನಾರಾಯಣ ಗುಂಡಾಚಾರ್ಯ ಆದ್ಯ ಹೆ। ಮಾಸ್ತರರು
ಮಿರಗಿ ೫

೩೧ ,, ಬಿ. ಎಸ್. ಬ್ಯಾಳಿ ಆ। ಮಾಸ್ತರರು ಕೆಲವಡಿ ೫

೩೨ ,, ರೇವಣಸಿದ್ಧಪ್ಪ ಸಂಗಪ್ಪ ಮದಭಾವಿ ಹಲಸಂಗಿ ೫

೩೩ ,, ಗುರುಬಾಳಪ್ಪ ಸದಾಶಿವಪ್ಪ ಜೀರಂಕಲಗಿ ಚಡಚಣ ೫

೩೪ ,, ಜಿ. ಬಿ. ಪಿ. ೫

## ಹಳ್ಳಿಯ ಆಳು

ಈ ಮಾಸಪತ್ರಿಕೆಯಲ್ಲಿ ಹಳ್ಳಿಯ ಜನರಿಗುಪಯುಕ್ತವಾಗುವ ಒಳ್ಳೇ ಲೇಖನಗಳು ಬರುತ್ತವೆ. ಪ್ರತಿ ಒಬ್ಬ ಹಳ್ಳಿಯ ಮನುಷ್ಯನು ಇದನ್ನು ಅವಶ್ಯವಾಗಿ ಓದಲೇಬೇಕು. ಸಹಕಾರ, ಒಕ್ಕಲತನ, ಗ್ರಾಮ ಸುಧಾರಣೆ ಇವುಗಳಿಗೆ ಸಂಬಂಧಿಸಿದ ಲೇಖ, ಕಥೆ, ಕವಿತೆ, ನಾಟಕ ಮೊದಲಾದವುಗಳು ಪ್ರಕಟವಾಗುತ್ತವೆ.

**'ಹಳ್ಳಿಯ ಆಳು' ಕಾರ್ಯಾಲಯ**

ಮಾರುತಿಬೀದಿ ಬೆಳಗಾವಿ

---

## ಶಿವಾನುಭವ

ಶಿವಶರಣರ ವಚನವಾಙ್ಮಯ, ವೀರಶೈವರ ಧಾರ್ಮಿಕ, ಐತಿಹಾಸಿಕ, ಸಾಮಾಜಿಕ, ಸಾಹಿತ್ಯಿಕ ಲೇಖನಗಳಿಗೆ ಈ ದ್ವೈಮಾಸಿಕವು ಮೀಸಲಾಗಿದೆ. ರಾ. ಸಾ. ಹಳಕಟ್ಟಿಯವರ ಜೀವಮಾನದ ಅಖಂಡ ಪರಿಶ್ರಮದ ಫಲಸ್ವರೂಪವಾದ ಈ ಪತ್ರಿಕಿಗೆ ಪ್ರತಿಯೊಬ್ಬರೂ ಚಂದಾದಾರರಾಗಲೇಬೇಕು.

ವಿಳಾಸ:— **'ಶಿವಾನುಭವ' ಕಾರ್ಯಾಲಯ**

ವಿಜಾಪೂರ

---

## ಲೋಕಮತ

ಎಲ್ಲ ದೈನಿಕ ಪತ್ರಗಳಿಗಿಂತ ಮುಂದಾಗಿ ಸುದ್ದಿಯನ್ನು ತಿಳಿಸುವ ಉಜ್ವಲ ರಾಷ್ಟ್ರೀಯ ದೈನಿಕ ಹಾಗೂ ವಾರಪತ್ರಿಕೆ. ವಿವಿಧ ವಿಷಯಗಳನ್ನು ಕಾಲಕಾಲಕ್ಕೆ ತಿಳಿಸುವ ಜಾಗ್ರತ ಪತ್ರಿಕೆಗೆ ಚಂದಾದಾರರಾಗಲು ಇಂದೇ ಬರೆಯಿರಿ.

ದಿ. ಪ. ಚಂದಾ ೧೩ ರೂ. ವಾ. ಪ. ಚಂದಾ ೩-೫-೦

**ದಿ ಕರ್ನಾಟಕ ನ್ಯೂಜ ಪೇಪರ್ಸ**

**ಕಾರ್ಪೋರೇಶನ್ ಲಿ.** ಹುಬ್ಬಳ್ಳಿ

## ಉದಯ

ವಿಜಾಪೂರ ಜಿಲ್ಹೆಯಲ್ಲಿ ಬಹು ವಿಧದ ವಿಷಯಗಳಿಗೆ ಎಡೆಗೊಟ್ಟ ಒಂದೇ ಒಂದಾದ ರಾಷ್ಟ್ರೀಯ ವಾರಪತ್ರಿಕೆ. ಮಾತಿನ ಮಲ್ಲನ ಪ್ರಚಲಿತ ವಿಷಯಗಳ ಮೇಲಿನ ಹುರುಳುಳ್ಳ ಹರಟೆಗಳು, ವಾರದ ವರದಿ, ಸಂತೆಯ ಸುದ್ದಿ, ವನಿತಾವಿಭಾಗ, ಹಳ್ಳಿಯವೈದ್ಯಕ, ವಿವಿಧ ವೈಚಿತ್ರ್ಯ ಮತ್ತು ಲೋಕಲ್‌ಬೋರ್ಡ ಮೊದಲಾದ ಸ್ಥಳೀಯ ಸಂಸ್ಥೆಗಳ ಹೊಸ ಹೊಸ ಸುದ್ದಿಗಳು ಬರುತ್ತಿರುವವು. ವಾ. ಚಂದಾ. ೩ ರೂ. ಮಾತ್ರ.

ವಿಳಾಸ:— '**ಉದಯ**' ಕಾರ್ಯಾಲಯ, ವಿಜಾಪೂರ

---

## ಶರಣಸಂದೇಶ

ಸಂಪಾದಕರು:— **ಶ್ರೀ ಹರ್ಡೇಕರ ಮಂಜಪ್ಪನವರು**

ನೀವು ಹಿಂದುಗಳೋ? ಹಾಗಾದರೆ ಜಾಗೃತೆ ಚಂದಾದಾರರಾಗಿರಿ. ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು ಮತ್ತು ಹಿಂದೂ ಸಮಾಜದೇಳಿಗೆಯ ರೀತಿನೀತಿಗಳನ್ನು ಪ್ರಸಾರಗೊಳಿಸುವ ವಿಚಾರಕ್ರಾಂತಿಯ ವಾರಪತ್ರಿಕೆಯು ಕನ್ನಡದಲ್ಲಿ ಇದೊಂದೇ. ವಾ. ಚಂದಾ ೩ ರೂ. ಮಾತ್ರ.

ಮ್ಯಾನೇಜರ:— '**ಶರಣಸಂದೇಶ**'
ಪೋ. ಆಲಮಟ್ಟಿ, ಜಿಲ್ಹಾ ವಿಜಾಪೂರ

---

## ಕಲಿಯುಗ

ಸಂಪಾದಕರು:— **ಡಾಕ್ಟರ ಗೋಪಾಲಕೃಷ್ಣರಾಯರು**

ಕಾಮವಿಜ್ಞಾನ, ಆರೋಗ್ಯವಿಜ್ಞಾನ, ಸಮಾಜವಿಜ್ಞಾನಗಳಿಗಾಗಿ ಮೀಸಲಾಗಿರುವ ಕನ್ನಡ ಸಾಹಿತ್ಯದ ಇತಿಹಾಸದಲ್ಲೇ ಪ್ರಥಮ ಮಾಸಪತ್ರಿಕೆ. ವಾರ್ಷಿಕ ಚಂದಾ ೧ ರೂ. ೮ ಆಣೆ.

ವಿಳಾಸ:- "**ಕಲಿಯುಗ**" ಕಾರ್ಯಾಲಯ,
ಧಾರವಾಡ

# ಕನ್ನಡಕಂದ

ಮಕ್ಕಳ ಮಮತೆಯ ಮಾಸಪತ್ರಿಕೆ. ಇದೇ ಜುಲೈ ತಿಂಗಳಿಂದ ಶ್ರೀ. ಮೇವುಂಡಿ ಮಲ್ಲಾರಿಯವರ ಸಂಪಾದಕತ್ವದಲ್ಲಿ ಉತ್ಕೃಷ್ಟವಾದ ಮಾರ್ಪಾಟು ಹೊಂದಿದೆ.

ವಾ. ಚಂದಾ ಒಂದೇ ರೂಪಾಯಿ

**ಕನ್ನಡಕಂದ ಕಾರ್ಯಾಲಯ**

ಧಾರವಾಡ

---

# ಮನೋಹರ ಗ್ರಂಥಮಾಲೆ

ಲಲಿತಸಾಹಿತ್ಯ ನಿರ್ಮಾಣಮಾಡುವ ಗುರಿಯನ್ನಿಟ್ಟುಕೊಂಡು ಸಾಗಿರುವ ಸರ್ವಾಂಗಸುಂದರವಾದ ಸುರಸ ಗ್ರಂಥಮಾಲೆಯು. ೧೫೦ ರಿಂದ ೨೦೦ರ ವರೆಗೆ ಪುಟಗಳುಳ್ಳ ಆರು ಪುಸ್ತಕಗಳು ವರುಷದಲ್ಲಿ ಹೊರ ಡುತ್ತವೆ. ೫ನೆಯ ವರುಷದ ೨ನೆಯ ಪುಸ್ತಕ **ಎರಡು ಧ್ರುವ**

ವಾ. ಚಂದಾ ೩ ರೂ. ೮ ಆಣೆ

ವಿಳಾಸ:— ' **ಮನೋಹರ ಗ್ರಂಥಮಾಲಾ**

ಸಾಧನಕೇರಿ, ಧಾರವಾಡ

---

# ಜಯಕರ್ನಾಟಕ

ಕರ್ನಾಟಕದ ಏಕೀಕರಣವನ್ನೂ ಉನ್ನತಿಯನ್ನೂ ಗುರಿಯಾಗಿಟ್ಟು ಕೊಂಡ, ಸರ್ವಾಂಗ ಸುಂದರವಾದ, ಒಂದೇ ಒಂದು ದೊಡ್ಡ ಮಾಸ ಪತ್ರಿಕೆ. ವಿವಿಧ ವಿಷಯುಗಳಲ್ಲದೆ ಜನಪದ ಸಾಹಿತ್ಯವು ಇದರಲ್ಲಿ ವಿಂಸ ಲಾಗಿರುತ್ತದೆ. ಪರದೇಶ ಪರಪ್ರಾಂತಗಳಲ್ಲಿ ಕೂಡ ಇದರ ಪ್ರಸಾರವಿದೆ.

ವಾ. ಚಂದಾ ರೂ. –೮–೦ ಪರದೇಶ ೭–೮–೦

ವಿಳಾಸ:— **ಜಯಕರ್ನಾಟಕ ಕಾರ್ಯಾಲಯ**

ಧಾರವಾಡ

# ಅಲಲ! ಇಲ್ಲೇ ಸಮೀಪದಲ್ಲೇ!

## ನೀವೇ ಬರುವ ಕಾರಣವಿಲ್ಲ!

**ಕೇವಲ**

ಫೋಟೋ ಕಳಿಸಿದರೆ ಸಾಕು.

ದೊಡ್ಡ ಆಕಾರದಲ್ಲಿ ಚಿತ್ರಿಸುವೆವು.

ಬಣ್ಣಬಣ್ಣದಿಂದ ಶೃಂಗರಿಸುವೆವು.

ನಿಮ್ಮ ಹಿರಿಯರ ಭಾವಚಿತ್ರಕ್ಕೆ ಜೀವಕಳೆ ಬೇಕೆ?

ನಿಮ್ಮ ಹಿರಿತನದ ಯೋಗ್ಯತೆಗೆ ತಕ್ಕ ಬಣ್ಣದ

ಫೋಟೊ ಬೇಡವೆ ?


ತೈಲವರ್ಣದಿಂದ ತಾಳಿಕೆಯು ಕಾಗದದ

ಮೇಲೆ ಬರೆಸುವ ಈ ಚಿತ್ರಗಳು

ತಲೆತಲಾಂತರ ಮಾಸವು.

ಹೆಚ್ಚಿನ ವಿವರಗಳಿಗಾಗಿ ಕೆಳಗಿನ

ವಿಳಾಸಕ್ಕೆ ಬರೆಯಿರಿ.



**ಕಾಪಸೆ ರೇವಪ್ಪ**— ಕಲಾ ಕುಟೀರ, ಹಲಸಂಗಿ

**ಪೋ. ಹಲಸಂಗಿ** **ಜಿ. ವಿಜಾಪುರ**

## ಪ್ರೇಮ

**ಹೊಸ ಯೋಜನೆ !** **ಹೆಚ್ಚು ಲಾಭ !**

ಸಂಪಾದಕರು:— **ಕುಲಕರ್ಣಿ ಶ್ರೀನಿವಾಸ ಬಿ. ಎ.**

ಪ್ರೇಮವು ಈಗ ಮಾಸಿಕವಾಗಿದೆ. ವರ್ಷದಲ್ಲಿ ಕಥೆ ಕಾದಂಬರಿ ನಾಟಕ, ಲಲಿತಕಲೆಗಳಿಗೆ ಸಂಬಂಧಿಸಿದ ೧೨ ಸುಂದರ ಪ್ರಕಟನೆಗಳು ಆದರೂ ವಾರ್ಷಿಕ ಚಂದಾ ನಾಲ್ಕು ರೂ. ಮಾತ್ರ.

**ಪ್ರೇಮ ಪ್ರಕಟನಾಲಯ**
ಧಾರವಾಡ

---

## ಕಥಾಕುಂಜ

ಕಥೆಗಳಿಗಾಗಿಯೇ ಮೀಸಲಾಗಿ ನಾಲ್ಕಾರು ವರುಷಗಳಿಂದ ಕನ್ನಡದ ಸೇವೆ ಮಾಡುತ್ತಿರುವ ಈ ಬೆಳಗಾಂವಿಯ ಬಂಧುವಿನ ಸಾಹಸಕ್ಕೆ ಉದಾರರಾದ ಕನ್ನಡಿಗರೆಲ್ಲರೂ ಕೈಕೊಡತಕ್ಕದ್ದು.

ವಾಚನಾಲಯಕ್ಕೆ ೨–೧೨–೦ ವಾ. ಚಂದಾ ೧–೧೨–೦

**ಕಥಾಕುಂಜ ಆಫೀಸ**
ಮಾರುತಿಓಣಿ ಬೆಳಗಾಂವಿ

---

## ಸಮಾಜ

ನೀವು ಯಾರೇ ಇರಲಿ. ನಿಮಗೆ 'ಸಮಾಜ'ವು ಸರ್ವದಾ ಉಪಯುಕ್ತವಾದುದು. ಅದರಲ್ಲಿ ಸಾತ್ವಿಕಮನರಂಜನೆಗವಶ್ಯವಾದ ಸರ್ವಸಾಧನಗಳೂ, ಪ್ರತಿತಿಂಗಳ ಪ್ರತಿ ಒಬ್ಬರ ರಾಶಿಭವಿಷ್ಯವೂ ಇರುತ್ತವೆ. ಇಷ್ಟೆಲ್ಲ ಇದ್ದು ಬೆಲೆ ಒಂದೇ ಆಣೆ. ವರ್ಷಕ್ಕೆ ಒಂದೇ ರೂಪಾಯಿ (ಅಂ. ವೆ. ಸೇರಿ)

—ಮ್ಯಾನೇಜರ **ಸಮಾಜ** ಆಫೀಸ
ವಿಶ್ವೇಶ್ವರಪುರ **ಬೆಂಗಳೂರ ಸಿಟಿ**

## ನನ್ನ ಹಿಂದಿನ ಪುಸ್ತಕಗಳು

(೧) ನಂದನವನ (ಚಿತ್ರಕ ಕತೆಗಳು) ೦-೧೦-೦
(೨) ಬಾಳಿನಲ್ಲಿ ಬೆಳಕು (ಟಾಲ್‌ಸ್ಟಾಯರ್ ಆತ್ಮಚರಿತ್ರ) ೦-೧೦-೦
(೩) ವಿಲಾಸ (ಖಂಡ ಕಾವ್ಯ) ೧-೧೨-೦
(೪) ಭಾರತೀಯ ನವಜನ್ಮ (ಅರವಿಂದರ ದಿವ್ಯ ನಿರೀಕ್ಷಣೆ) ೦-೧೨-೦
(೫) ಬಂಧನದ ಆಚೆ (ಕಾದಂಬರಿ) ೨- ೦-೦
(೬) ಕನ್ನಡಿಗರ ಕುಲಗುರು (ವಿದ್ಯಾರಣ್ಯರ ಚರಿತ್ರ ಹಾಗೂ ಅವರ ಉಪದೇಶದ ನಿರೀಕ್ಷಣೆ) ೦- ೬
(೭) ಪವಿತ್ರ ಜೀವನ (ಟಾಲ್‌ಸ್ಟಾಯರ್ ಕತೆಗಳು) ೦-೧೨
(೮) ಹೇಗಾದರೇನು (ಕಾರಂತರ ಎರಡು ವ್ಯಂಗ್ಯ ನಾಟಕಗಳು) ೦-೧
(೯) ಬೆಳಗು (ಮಧುರ ಚೆನ್ನರ ಕಾಳ ರಾತ್ರಿಯ ಮುಂದಿನ ಭಾಗ) ೦-೧

**ಅರವಿಂದ ಗ್ರಂಥ ಮಾಲೆ ಆಫೀಸ ಹಲಸಂಗಿ**
ಜಿ. ವಿಜಾಪುರ

## ಹಲಸಂಗಿ ಗೆಳೆಯರ
### ಇತರ ಪುಸ್ತಕಗಳು

(೧) ಗರತಿಯ ಹಾಡು ೦-೧೦-೦
(೨) ಮಲ್ಲಿಗೆ ದಂಡಿ ೦-೧೨-೦
(೩) ಜೀವನ ಸಂಗೀತ ೦-೧೦-೦
(೪) ನನ್ನ ನಲ್ಲ ೦-೧೦-೦
(೫) ಜನಜೀವನ ೦- ೪-೦
(೬) ಭಕ್ತಿರಹಸ್ಯ ೦- ೪-೦